ಜನಶಕ್ತಿ


ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 32 | ಆಗಸ್ಟ್ 3–9, 2020 | ಪುಟ 16 | ರೂ. 10

Web : www.janashakthi.co.in e-mail : js_weekly@yahoo.com

ಮಂಗಳೂರಿನ ಕೊರೋನಾ ಕಥೆಗಳು



ಬಿಜೆಪಿ ಆಡಳಿತದ ಒಂದು ವರ್ಷ

ಅಮಾನವೀಯ ಕ್ರೌರ್ಯ ಮತ್ತು ಕಾರ್ಪೊರೇಟ್ ಪರ ನಡೆ



ಜಮ್ಮು-ಕಾಶ್ಮೀರ ಘಾತಕ ಕೃತ್ಯದ ಕರಾಳ ವಾರ್ಷಿಕ



ಬೊಲಿವಿಯಾ: ಚುನಾವಣೆ ಮುಂದೂಡುವ ಆಟ



ಆಗಸ್ಟ್ 20 ರಿಂದ 26 ದೇಶವ್ಯಾಪಿ ಪ್ರತಿಭಟನಾ ವಾರಾಚರಣೆ

ಕೇಂದ್ರ ಸರಕಾರ ರಾಜ್ಯಗಳಿಗೆ ಬಾಕಿಯಿರುವ ಜಿಎಸ್‌ಟಿ ಪರಿಹಾರವನ್ನು ತೆರಬೇಕು

ಪ್ರಸಕ್ತ ಹಂಚಿಕೆ ಸೂತ್ರ ಸಾಧ್ಯವಿಲ್ಲವೆನ್ನುವುದು ಇನ್ನಷ್ಟು ಅಧಿಕಾರ ಕೇಂದ್ರೀಕರಣದ ಕ್ರಮ

ಕಳೆದ ಹಣಕಾಸು ವರ್ಷದ ನಾಲ್ಕು ತಿಂಗಳ ನಂತರ, ಕೇಂದ್ರ ಸರಕಾರ ಕೊನೆಗೂ ರಾಜ್ಯಗಳಿಗೆ ಮಾರ್ಚ್ 31ರ ವರೆಗಿನ ಜಿ.ಎಸ್.ಟಿ. ಬಾಕಿ ಹಣವನ್ನು ಪಾವತಿ ಮಾಡಿದೆ. ಆದರೆ, ಪ್ರಸಕ್ತ ಹಣಕಾಸು ವರ್ಷ 2020-21 ರಲ್ಲಿ ಈಗಿರುವ ರೆವಿನ್ಯೂ ಹಂಚಿಕೆಯ ಸೂತ್ರದ ಪ್ರಕಾರ ರಾಜ್ಯಗಳಿಗೆ ಪಾಲನ್ನು ಕೊಡಲು ಸರಕಾರಕ್ಕೆ ಸಾಧ್ಯವಾಗುವುದಿಲ್ಲ ಎಂದು ಹಣಕಾಸು ಕಾರ್ಯದರ್ಶಿಗಳು ಸಂಸದೀಯ ಸ್ಥಾಯೀ ಸಮಿತಿಗೆ ಹೇಳಿದ್ದಾರೆ.

ರಾಜ್ಯ ಸರಕಾರಗಳಿಗೆ ಜಿ.ಎಸ್.ಟಿ. ಅನುಷ್ಠಾನದ ಮೊದಲ ಐದು ವರ್ಷಗಳಲ್ಲಿ ಪರಿಹಾರ ಕೊಡುವುದಾಗಿ ಖಾತ್ರಿಪಡಿಸಲಾಗಿತ್ತು. ಜಿ.ಎಸ್.ಟಿ.ಯಿಂದಾಗಿ ಆದಾಯಗಳನ್ನು ಎತ್ತಲು ಕೆಲವು ಪರೋಕ್ಷ ತೆರಿಗೆಗಳನ್ನು ವಿಧಿಸುವ ರಾಜ್ಯಗಳ ಅಧಿಕಾರವನ್ನು ಕಿತ್ತುಕೊಂಡುದರಿಂದ, ಅದಕ್ಕೆ ಬದಲಾಗಿ ಈ ಪರಿಹಾರವನ್ನು ಖಾತ್ರಿಪಡಿಸಲಾಯಿತು.

ರಾಜ್ಯಗಳಿಗೆ ಪರಿಹಾರದ ಈ ನಿರ್ಧಾರ' ಜಿ.ಎಸ್.ಟಿ. ಶಾಸನದ ಭಾಗವಾಗಿದೆ. ಇದರ ಅನುಷ್ಠಾನಕ್ಕೆ ಜಿ.ಎಸ್.ಟಿ.ಮಂಡಳಿ ಮಂಜೂರಾತಿಯನ್ನೂ ನೀಡಿದೆ.

ಈಗ ಕೇಂದ್ರ ಸರಕಾರ ಈ ಭರವಸೆಗಳನ್ನು ಮುರಿಯುವುದು ಅಧಿಕಾರದ ಮತ್ತಷ್ಟು ಕೇಂದ್ರೀಕರಣವಾಗುತ್ತದೆ, ನಮ್ಮ ಸಂವಿಧಾನದ ಒಕ್ಕೂಟ ತತ್ವವನ್ನು ಉಲ್ಲಂಘಿಸುತ್ತದೆ ಮತ್ತು ರಾಜ್ಯಗಳಿಗೆ ನ್ಯಾಯಬದ್ಧ ಆದಾಯಗಳನ್ನು ವಂಚಿಸುತ್ತದೆ. ಇದನ್ನು ಒಪ್ಪಲು ಸಾಧ್ಯವಿಲ್ಲ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಈಗ ಈ ನಿಧಿಗಳು ಕೊವಿಡ್ ಮಹಾಸೋಂಕನ್ನು ಎದುರಿಸಲು ಗಮನ ಕೇಂದ್ರೀಕರಿಸಬೇಕಾದ ಸಂದರ್ಭದಲ್ಲಿ ಇನ್ನಷ್ಟು ಅಗತ್ಯವಾಗಿದೆ ಎಂದಿದೆ.

ಮಹಾಸೋಂಕನ್ನು ಎದುರಿಸಲೆಂದು ಪ್ರಧಾನ ಮಂತ್ರಿಗಳ ಹೆಸರಿನ ಒಂದು ಅಪಾರದರ್ಶಕ, ಲೆಕ್ಕಪರಿಶೋಧನೆಯಿಲ್ಲದ ಖಾಸಗಿ ಟ್ರಸ್ಟ್ ನಲ್ಲಿ ಸಂಗ್ರಹಿಸಿರುವ ಸಮಸ್ತ ನಿಧಿಯನ್ನು ಈ ಸಮರದ ಮುಂಚೂಣಿಯಲ್ಲಿರುವ ರಾಜ್ಯ ಸರಕಾರಗಳಿಗೆ ವರ್ಗಾಯಿಸಬೇಕು ಎಂಬ ತನ್ನ ಈ ಹಿಂದಿನ ಆಗ್ರಹವನ್ನು ಸಿಪಿಐ(ಎಂ) ಪುನರುಚ್ಚರಿಸಿದೆ.

2020-21ರ ಮೊದಲ ತ್ರೈಮಾಸಿಕ ಮುಗಿದಿದ್ದು ಈ ಅವಧಿಯ ಜಿ.ಎಸ್.ಟಿ. ಪರಿಹಾರವನ್ನು ರಾಜ್ಯಗಳಿಗೆ ಕೂಡಲೇ ವರ್ಗಾಯಿಸಬೇಕು, ಇದು ಈ ಹಿಂದಿನ ವಚನಗಳನ್ನು ಪಾಲಿಸಲು ಮತ್ತು ಅದಕ್ಕಿಂತ ಮುಖ್ಯವಾಗಿ ಮಹಾಸೋಂಕನ್ನು ಪರಿಣಾಮಕಾರಿಯಾಗಿ ಎದುರಿಸಲು ಅತ್ಯಗತ್ಯ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಚುನಾವಣಾ ಪ್ರಚಾರ ಮತ್ತು ಮತದಾನವನ್ನು ಡಿಜಿಟಲ್ ವಿಧಾನಕ್ಕಷ್ಟೇ ಸೀಮಿತಗೊಳಿಸಬಾರದು

ಚುನಾವಣಾ ಆಯೋಗ ಮತದಾರರು ಮತ್ತು ರಾಜಕೀಯ ಪಕ್ಷಗಳ ಭೌತಿಕ ಭಾಗವಹಿಸುವಿಕೆಯ ಆಧಾರದಲ್ಲಿ, ಚುನಾವಣೆಗಳನ್ನು ನಡೆಸಬೇಕು. ಇದನ್ನು ಮಹಾಸೋಂಕಿನಿಂದಾಗಿ ಮತ್ತು ಜನಗಳ ಜೀವಗಳಿಗೆ ಅತ್ಯುನ್ನತ ಆದ್ಯತೆ ನೀಡಬೇಕಾದ ಸುರಕ್ಷತಾ ಅಗತ್ಯಗಳಿಂದಾಗಿ ಉಂಟಾಗಿರುವ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕು. ಚುನಾವಣಾ ಪ್ರಕ್ರಿಯೆಯಲ್ಲಿ ಎಲ್ಲರಿಗೂ ಸಮಾನ ಅವಕಾಶ ಸಿಗುವಂತಿರಬೇಕು ಎಂಬುದು ಯಾರೂ ಉಲ್ಲಂಘಿಸಬಾರದ ನೀತಿ. ಇದರ ಆಧಾರದಲ್ಲಿಯೇ ಚುನಾವಣಾ ಆಯೋಗ ಒಂದು ಮುಕ್ತ ಮತ್ತು ನ್ಯಾಯಯುತ ಚುನಾವಣೆ ನಡೆಯುವಂತೆ ಖಾತ್ರಿಪಡಿಸಬೇಕು. ಏಕೆಂದರೆ ವರ್ಚುವಲ್ ಪ್ರಚಾರವನ್ನಷ್ಟೇ ಆಧರಿಸುವ ಚಟುವಟಿಕೆ ಅಪಾರ ಹಣಕಾಸು ಸಂಪನ್ಮೂಲಗಳನ್ನು ಹೊಂದಿರುವ ಪಕ್ಷಗಳಿಗೆ ಹೆಚ್ಚಿನ ಅನುಕೂಲಗಳನ್ನು ಕೊಡುತ್ತದೆ ಎಂಬುದು ಸ್ಪಷ್ಟ. ಆದ್ದರಿಂದ ಡಿಜಿಟಲ್ ಸ್ವರೂಪದಲ್ಲಿ ಮಾತ್ರವೇ ಪ್ರಚಾರ ಮತ್ತು ಮತದಾನ ಇರಬೇಕೆಂಬುದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಚುನಾವಣಾ ಆಯೋಗಕ್ಕೆ ತಿಳಿಸಿದೆ.

ಬಿಹಾರ ವಿಧಾನಸಭಾ ಚುನಾವಣೆ ಮತ್ತು ಕೆಲವು ಇತರ ಉಪಚುನಾವಣೆಗಳನ್ನು ಹೇಗೆ ನಡೆಸಬಹುದು ಎಂಬ ಬಗ್ಗೆ ಅಭಿಪ್ರಾಯಗಳನ್ನು ಕೇಳಿ ಚುನಾವಣಾ ಆಯೋಗ ಜುಲೈ 17ರಂದು ಬರೆದ ಪತ್ರಕ್ಕೆ ಸ್ಪಂದಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ನೀಲೋತ್ಪಲ ಬಸು ಬರೆದ ಪತ್ರದಲ್ಲಿ ಇದನ್ನು ಸ್ಪಷ್ಟಪಡಿಸಿದ್ದಾರೆ.

"ಚುನಾವಣಾ ಪ್ರಚಾರ ಸಾರ್ವಜನಿಕ ಸಭೆಗಳನ್ನು, ದೈಹಿಕ ಅಂತರ ಮತ್ತಿತರ ಸುರಕ್ಷತಾ ಅಗತ್ಯಗಳನ್ನು ಖಾತ್ರಿಪಡಿಸಿಕೊಂಡು ನಡೆಸಲು ಅವಕಾಶ ಕೊಡಬೇಕು ಎಂದು ನಾವು ಬಯಸುತ್ತೇವೆ. ಅದೇ ರೀತಿಯಲ್ಲಿ, ಅಭ್ಯರ್ಥಿಗಳು ಮತ್ತು ಅವರ ಪ್ರತಿನಿಧಿಗಳು ಇಂತಹುದೇ ಪ್ರಚಾರಕರ ಒಂದು ಸಣ್ಣ ಗುಂಪಿನೊಂದಿಗೆ ಮತದಾರರ ಮನೆಗಳಿಗೆ ಭೇಟಿ ನೀಡಲು, ಆರೋಗ್ಯ ಮತ್ತು ಸುರಕ್ಷತಾ ಅಗತ್ಯಗಳನ್ನು ಕಾಪಾಡುವ ಕ್ರಮಕ್ಕೆ ಒಳಪಟ್ಟು ಅವಕಾಶ ನೀಡಬೇಕು" ಎಂದು ನೀಲೋತ್ಪಲ ಬಸು ಅವರು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಭಾರತೀಯ ಸಂವಿಧಾನ ಚುನಾವಣಾ ಆಯೋಗಕ್ಕೆ, ಯಾವುದೇ ಸ್ಪರ್ಧಿ ಪಕ್ಷಕ್ಕೆ ನ್ಯಾಯಯುತವಲ್ಲದ ರೀತಿಯಲ್ಲಿ ಅನುಕೂಲವನ್ನು ಮಾಡಿಕೊಡಲು ಅವಕಾಶವಿರದ ರೀತಿಯಲ್ಲಿ ಚುನಾವಣೆಗಳು ನಡೆಯುವಂತೆ ಖಾತ್ರಿಪಡಿಸಬೇಕೆಂದು ವಿಧಿಸಿದೆ ಎಂದು ಸಿಪಿಐ(ಎಂ) ತನ್ನ ಪತ್ರದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದೆ.

ಹೊಸ ಶಿಕ್ಷಣ ಧೋರಣೆಯ ಏಕಪಕ್ಷೀಯ ಹೇರಿಕೆ

ಶಿಕ್ಷಣದ ಕೇಂದ್ರೀಕರಣ, ಕೋಮುವಾದೀಕರಣ ಮತ್ತು ವ್ಯಾಪಾರೀಕರಣಕ್ಕೆ

ಕೇಂದ್ರ ಸಂಪುಟ ಏಕಪಕ್ಷೀಯವಾಗಿ ಒಂದು ಹೊಸ ಶಿಕ್ಷಣ ಧೋರಣೆಯನ್ನು ಹೇರಲು ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಮರುನಾಮಕರಣ ಮಾಡಲು ನಿರ್ಧರಿಸಿದೆ.

ಶಿಕ್ಷಣ ನಮ್ಮ ಸಂವಿಧಾನದ ಸಮವರ್ತಿ ಪಟ್ಟಿಯಲ್ಲಿದೆ. ಎಲ್ಲ ಆಕ್ಷೇಪಣೆಗಳನ್ನು ಮತ್ತು ವಿವಿಧ ರಾಜ್ಯಸರಕಾರಗಳು ದಾಖಲಿಸಿರುವ ವಿರೋಧವನ್ನು ಬದಿಗೊತ್ತಿ ಒಂದು ಹೊಸ ಶಿಕ್ಷಣ ಧೋರಣೆಯನ್ನು ಹೇರುವುದು ಕೇಂದ್ರ ಸರಕಾರ ಮಾಡುತ್ತಿರುವ ಘೋರ ಉಲ್ಲಂಘನೆಯಾಗಿದೆ.

ಇಂತಹ ಸ್ವರೂಪದ ಹೊಸದೊಂದು ಧೋರಣೆಯನ್ನು ಸಂಸತ್ತಿನಲ್ಲಿ ಚರ್ಚಿಸಬೇಕಾಗಿದೆ. ಸರಕಾರ ಈ ಬಗ್ಗೆ ಭರವಸೆಯನ್ನೂ ಕೊಟ್ಟಿತ್ತು. ವಿಧಿ-ವಿಧಾನಗಳ ಪ್ರಕಾರ ಕರಡನ್ನು ಒಂದು ಕಾನೂನುಬದ್ಧ ಸಮಯ ಮಿತಿಯೊಂದಿಗೆ ಎರಡೂ ಸದನಗಳಲ್ಲಿ ಮಂಡಿಸಬೇಕು. ಈ ಸಮಯ ಮಿತಿಯೊಳಗೆ ಸಂಸತ್ ಸದಸ್ಯರು ತಿದ್ದುಪಡಿಗಳನ್ನು ಸೂಚಿಸಬಹುದು, ಇಲ್ಲವೇ ಅಭಿಪ್ರಾಯಗಳನ್ನು ಕೊಡಬಹುದು. ಇಲ್ಲಿ ಸಂಸತ್ತನ್ನು ಸಂಪೂರ್ಣವಾಗಿ ಬದಿಗೊತ್ತಲಾಗಿದೆ.

ಹೊಸ ಶಿಕ್ಷಣ ಧೋರಣೆಯ ಕರಡನ್ನು ಸಾರ್ವಜನಿಕ ಅವಗಾಹನೆಗೆ ಇಟ್ಟು ಸಂಬಂಧಪಟ್ಟ ಎಲ್ಲರಿಂದ, ಮುಖ್ಯವಾಗಿ ಶೈಕ್ಷಣಿಕ ವಲಯದಿಂದ, ಶಿಕ್ಷಕ ಸಮುದಾಯದಿಂದ ಮತ್ತು ವಿದ್ಯಾರ್ಥಿಗಳಿಂದ ಸಲಹೆ-ಸೂಚನೆಗಳನ್ನು,ಅಭಿಪ್ರಾಯಗಳನ್ನು ಕೋರಲಾಗಿತ್ತು. ಇದರ ಜೊತೆಗೆ ಹಲವು ಚಿಂತಕರೂ ತಮ್ಮ ವೀಕ್ಷಣೆಗಳನ್ನು ಕಳಿಸಿದ್ದಾರೆ. ಇವು ಯಾವುದನ್ನೂ ಪರಿಗಣನೆಗೆ ತಗೊಂಡಿಲ್ಲ.

ಭಾರತೀಯ ಶಿಕ್ಷಣದ ಹೆಚ್ಚೆಚ್ಚು ಕೇಂದ್ರೀಕರಣ, ಕೋಮುವಾದೀಕರಣ ಮತ್ತು ವ್ಯಾಪಾರೀಕರಣಕ್ಕೆ ಪ್ರಯತ್ನಿಸುವ ಒಂದು ಧೋರಣೆಯನ್ನು ತಂದು ಭಾರತೀಯ ಶಿಕ್ಷಣವನ್ನು ನಾಶಮಾಡಲಿಕ್ಕಾಗಿಯೇ ಈ ಏಕಪಕ್ಷೀಯ ಓಟ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಿಜೆಪಿ ಕೇಂದ್ರ ಸರಕಾರದ ಈ ನಡೆಯನ್ನು ಬಲವಾಗಿ ಪ್ರತಿಭಟಿಸಿದೆ, ಮತ್ತು ಇದರ ಜಾರಿ ಆರಂಭವಾಗುವ ಮೊದಲು ಸಂಸತ್ತಿನಲ್ಲಿ ಈ ಬಗ್ಗೆ ಆಮೂಲಾಗ್ರ ಚರ್ಚೆ ನಡೆಯಬೇಕು ಎಂದು ಆಗ್ರಹಿಸಿದೆ.

ಉನ್ನತ ವ್ಯಕ್ತಿತ್ವದ ಸ್ವಾತಂತ್ರ್ಯ ಹೋರಾಟಗಾರ, ಮೊದಲ ಶಿಕ್ಷಣಮಂತ್ರಿ ಮೌಲಾನಾ ಆಝಾದ್ ಬಗ್ಗೆ ಐಪಿಎಸ್ ಅಧಿಕಾರಿಯ ಕೀಳುಮಟ್ಟದ, ಕೋಮು ಭಾವನೆ ಪ್ರಚೋದಿಸುವ ಹೇಳಿಕೆಗೆ ಖಂಡನೆ

ನಾಗೇಶ್ವರರಾವ್, ಒಬ್ಬ ಉನ್ನತ ಐ.ಪಿ.ಎಸ್. ಅಧಿಕಾರಿ, ಒಂದು ವರ್ಷದ ಹಿಂದೆ ಸಿ.ಬಿ.ಐ.ನ ಮುಖ್ಯಸ್ಥರಾಗಿದ್ದವರು. ದೇಶದ ಪ್ರಮುಖ ತನಿಖಾ ಸಂಸ್ಥೆಯಲ್ಲಿ ಅತ್ಯುನ್ನತ ಸ್ಥಾನಗಳಲ್ಲಿದ್ದ ಇಬ್ಬರು ಪರಸ್ಪರ ಕಿತ್ತಾಡುತ್ತಿದ್ದಾಗ ಮೋದಿ ಸರಕಾರ ಮಧ್ಯರಾತ್ರಿಯಲ್ಲಿ ಇವರನ್ನು ಅದರ ಮುಖ್ಯಸ್ಥರನ್ನಾಗಿ ನೇಮಿಸಿತ್ತು. ನಂತರ ಇದ್ದಕ್ಕಿದ್ದಂತೆ, 2019ರ ಬಜೆ??? ಸಲ್ಲಿಕೆ ದಿನದಂದು ಅವರನ್ನು ಅಗ್ನಿಶಾಮಕ ಸೇವೆಗಳು, ಗೃಹರಕ್ಷಕ ದಳ ಮತ್ತು ನಾಗರಿಕ ರಕ್ಷಣೆ ಇಲಾಖೆಯ ಮಹಾನಿರ್ದೇಶಕರಾಗಿ ವರ್ಗ ಮಾಡಿತು. ಈ ಅಧಿಕಾರಿ ಈಗ ಒಂದು ಟ್ವಿಟರ್ ಹೇಳಿಕೆಯ ಮೂಲಕ ರಾಡಿಯೆಬ್ಬಿಸಿದ್ದಾರೆ ಎಂದು ಇಂಡಿಯನ್ ಎಕ್ಸ್ ಪ್ರೆಸ್ (ಜುಲೈ 27) ವರದಿಯಿಂದ ಗೊತ್ತಾಗಿದೆ..

ಈ ಟ್ವಿಟರ್‌ನಲ್ಲಿ ಅವರು 1947ರಿಂದ 1977ರ 30 ವರ್ಷಗಳಲ್ಲಿ 20ವರ್ಷಗಳ ಕಾಲ 'ಹಿಂದುಗಳ ಬುಡಕೀಳುವ'(Deracination of Hindus) ಮೊದಲ ಘಟ್ಟ ಎನ್ನುತ್ತ ಈ ಅವಧಿಯ ನಾಲ್ವರು ಶಿಕ್ಷಣ ಮಂತ್ರಿಗಳನ್ನು ಹೆಸರಿಸಿದ್ದಾರೆ. ಅವರೆಲ್ಲರೂ ಮುಸ್ಲಿಂ ಸಮುದಾಯಕ್ಕೆ ಸೇರಿದವರು ಎಂಬುದು ಗಮನಾರ್ಹ- ಮೌಲಾನಾ ಅಬುಲ್ ಕಲಂ ಆಝಾದ್(1947-58), ಪ್ರೊ.ಹುಮಾಯೂನ್ ಕಬೀರ್, ಜಸ್ಟಿಸ್ ಎಂ ಸಿ ಛಾಗ್ಲ ಮತ್ತು ಫಕ್ರುದ್ದೀನ್ ಅಲಿ ಅಹ್ಮದ್(1963-67) ಮತ್ತು ಪ್ರೊ. ನೂರುಲ್ ಹಸನ್(1972-77). ಇವರು 'ರಕ್ತಸಿಕ್ತ ಇಸ್ಲಾಮೀ ಅತಿಕ್ರಮಣ/ ಆಳ್ವಿಕೆಯನ್ನು ಶುಭ್ರಗೊಳಿಸಲು" ಪ್ರಯತ್ನಿಸಿದ್ದಾರೆ ಎಂದೆಲ್ಲ ಹೇಳಿದ್ದಾರೆ. ಜತೆಗೆ 'ಎಡಪಂಥೀಯ' ಇತಿಹಾಸಕಾರರ ಬಗ್ಗೆ ಅವಹೇಳನಕರ ಮಾತುಗಳನ್ನು ಹೇಳಿದ್ದಾರೆ.

ಇದಕ್ಕೆ ಬೌದ್ಧಿಕ ವಲಯಗಳಲ್ಲಿ ವ್ಯಾಪಕ ಆಕ್ರೋಶ ವ್ಯಕ್ತಪಟ್ಟಿದೆ. ಮೌಲಾನಾ ಆಝಾದ್ ಸ್ವಾತಂತ್ರ್ಯ ಚಳುವಳಿಯ ಉನ್ನತ ಮುಖಂಡರಲ್ಲಿ ಒಬ್ಬರು. ಪ್ರೊ.ಹುಮಾಯೂನ್ ಕಬೀರ್, ಜಸ್ಟಿಸ್ ಎಂ ಸಿ ಛಾಗ್ಲ ಮತ್ತು ಪ್ರೊ. ನೂರುಲ್ ಹಸನ್ ಪ್ರಸಿದ್ಧ ಶಿಕ್ಷಣವೇತ್ತರು.

ಈ ಅಧಿಕಾರಿ ಜುಲೈ 31 ರಂದು ನಿವೃತ್ತರಾಗಲಿದ್ದು, ನಿವೃತ್ತಿಯ ನಂತರ ಪ್ರಸಕ್ತ ಆಳ್ವಿಕೆಯಲ್ಲಿ ಉನ್ನತ ಹುದ್ದೆ ಗಿಟ್ಟಿಸಲು ಇಂತಹ ಹೇಳಿಕೆ ನೀಡಿರಬಹುದು ಎಂಬ ಮಾತೂ ಕೇಳಬರುತ್ತಿದೆ. ಅವರನ್ನು ಕಳೆದ ವರ್ಷ ಸಿಬಿಐ ನಿಂದ ವರ್ಗಾಯಿಸಿದ್ದು ಒಂದು ಹಿಂಬಡ್ತಿ ಎಂದೂ ಆಗ ಕೆಲವರು ಕಂಡಿದ್ದರು ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು.

ಗೃಹಮಂತ್ರಿಗಳಿಗೆ ಬೃಂದಾ ಕಾರಟ್‌ಪತ್ರ

ಈ ಉನ್ನತ ಐಪಿಎಸ್ ಅಧಿಕಾರಿ ನಮ್ಮ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ವರ್ತಿಸಿದ್ದಾರೆ, ತನ್ನ ಸೇವಾ ನಿಯಮವನ್ನು ಉಲ್ಲಂಘಿಸಿದ್ದಾರೆ ಮಾತ್ರವಲ್ಲ ಭಾರತೀಯ ದಂಡ ಸಂಹಿತೆ(ಐಪಿಸಿ)ಯ ಅಡಿಯಲ್ಲೂ ಅಪರಾಧಗಳನ್ನು ಮಾಡಿದ್ದಾರೆ, ಅವರ ವಿರುದ್ಧ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯರಾದ



ಗಾಂಧೀಜಿ ಮತ್ತು ನೆಹರೂರವರೊಂದಿಗೆ ಮೌಲಾನಬುಲ್ ಕಲಂ ಆಝಾದ್

ಬೃಂದಾ ಕಾರಟ್ ಗೃಹಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಮತ್ತು ಐಪಿಸಿ ಸೆಕ್ಷನ್ 153ಎ ಮತ್ತು 295ಎ ಅಡಿಯಲ್ಲಿ ಒಂದು ಎಫ್.ಐ.ಆರ್. ದಾಖಲಿಸಬೇಕೆಂದು ದೂರನ್ನು ಕೂಡ ಸಲ್ಲಿಸಿದ್ದಾರೆ.

ನಾಗೇಶ್ವರ ರಾವ್ "ಧೀರ ಸ್ವಾತಂತ್ರ್ಯ ಹೋರಾಟಗಾರ ಮೌಲಾನಾ ಅಬುಲ್ ಕಲಾಂ ಆಝಾದ್ ಮತ್ತು ಇತರ ಪ್ರಸಿದ್ಧ ಶಿಕ್ಷಣ ತಜ್ಞರನ್ನು, ಮುಖ್ಯವಾಗಿ ಮುಸ್ಲಿಂ ಸಮುದಾಯಕ್ಕೆ ಸೇರಿದವರನ್ನು ಅವಮಾನಗೊಳಿಸಿದ್ದಾರೆ,

ಪುಟ 14 ನೋಡಿ

ಸಂಪಾದಕೀಯ

ಬಂಡುಕೋರರ ಋಣ ತೀರಿಸಿದ ಯಡಿಯೂರಪ್ಪ

ರಾಜ್ಯದಲ್ಲಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ ಒಂದು ವರ್ಷದ ಆಡಳಿತವನ್ನು ಪೂರೈಸಿದೆ. ಒಂದು ವರ್ಷದ ಅವಧಿಯಲ್ಲಿ ಅದು ಏನನ್ನು ಸಾಧಿಸಲಿಲ್ಲ ಎಂದು ಕೆಲವು ರಾಜಕೀಯ ಚಿಂತಕರು ಅಭಿಪ್ರಾಯ ಪಟ್ಟರೆ, ಇನ್ನು ಕೆಲವರು ಯಡಿಯೂರಪ್ಪನವರು ಕೊಟ್ಟ ಮಾತನ್ನು ಈಡೇರಿಸಿದ್ದಾರೆ ಎಂದು ವಿಶ್ಲೇಷಿಸುತ್ತಾರೆ. ಅವರು ಕೊಟ್ಟ ಮಾತಿಗೆ ತಪ್ಪುವವರಲ್ಲ ಎಂದು ಹಾಡಿ ಹೊಗಳುತ್ತಿದ್ದಾರೆ. ಆದರೆ ಅವರು ಮಾತು ಕೊಟ್ಟದ್ದು ಯಾರಿಗೆ?

ಯಾರಿಗೆ ಯಡಿಯೂರಪ್ಪ ಕೊಟ್ಟ ಮಾತನ್ನು ತೀರಿಸಿದ್ದಾರೆ ಎನ್ನುವುದು ಗುಟ್ಟಿನ ವಿಷಯವಲ್ಲ. ಕೇವಲ 16 ಮಂದಿಗೆ ಮಾತ್ರ ಯಡಿಯೂರಪ್ಪ ಕೊಟ್ಟ ಮಾತಿಗೆ ನಡೆದುಕೊಂಡಿದ್ದಾರೆ. ಅವರಿಗೆ ಕೊಟ್ಟ ಮಾತಿನಂತೆ ನಡೆದುಕೊಳ್ಳುವುದು ಯಡಿಯೂರಪ್ಪನವರಿಗೆ ಅನಿವಾರ್ಯವೂ ಆಗಿತ್ತು. ಯಡಿಯೂರಪ್ಪನವರ ಸರಕಾರ ಅಸ್ತಿತ್ವಕ್ಕೆ ಬಂದಿದ್ದೆ ಈ 16 ಮಂದಿಯ ಋಣದಿಂದ. ಈ 16 ಮಂದಿಗೆ ಯಡಿಯೂರಪ್ಪ ಅವರ ಮೇಲೆ ಹೇರಿದ ಒತ್ತಡದಿಂದ ಕಂಗೆಟ್ಟ ಯಡಿಯೂರಪ್ಪ ಈ 16 ಮಂದಿಯ ಆಗ್ರಹಕ್ಕೆ ಮಣಿಯಲೇ ಬೇಕಾಯಿತು.

ಇವರು ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳಿಂದ ಬಂಡೆದ್ದು ಬಂದವರು. ಇವರಲ್ಲಿ 11 ಮಂದಿಯನ್ನು ಈಗಾಗಲೇ ಸಚಿವರನ್ನಾಗಿ ಮಾಡಲಾಗಿದೆ. ಉಳಿದವರಿಗೂ ಸಚಿವ ಸ್ಥಾನ ನೀಡುವ ಭರವಸೆ ನೀಡಲಾಗಿದೆ. ಇನ್ನು ಕೆಲವು ಮಂದಿಗೆ ಈಗಾಗಲೇ ನಿಗಮ ಮಂಡಳಿ ಅಧ್ಯಕ್ಷ ಸ್ಥಾನವನ್ನು ಕೊಟ್ಟು ತೃಪ್ತಿಪಡಿಸಲಾಗಿದೆ.

2018ರ ಚುನಾವಣೆಯಲ್ಲಿ ಬಿಜೆಪಿ ಅತಿ ಹೆಚ್ಚು ಸ್ಥಾನಗಳನ್ನು ಪಡೆದಿದ್ದರೂ ಸರ್ಕಾರ ರಚಿಸಲು ಸಾಧ್ಯವಾಗದೆ ಯಡಿಯೂರಪ್ಪ ರಾಜಿನಾಮೆ ನೀಡುವಂತಾಯಿತು. ಯಡಿಯೂರಪ್ಪರವರನ್ನು ಮತ್ತೆ ಮುಖ್ಯಮಂತ್ರಿಯನ್ನಾಗಿ ಮಾಡಲು ಇವರು ಸಾಕಷ್ಟು ಶ್ರಮಿಸಿದ್ದರು. ಮತ್ತೆ ಮುಖ್ಯಮಂತ್ರಿಯಾದ ಯಡಿಯೂರಪ್ಪನವರು ತನ್ನ ಬೆಂಬಲಕ್ಕೆ ನಿಂತ ಬಂಡುಕೋರರಿಗೆ ಕೊಟ್ಟ ಮಾತನ್ನು ಉಳಿಸಿಕೊಂಡಿದ್ದಾರೆ. ಆದರೆ ವಿಧಾನಸಭಾ ಚುನಾವಣೆಯಲ್ಲಿ ಅತಿ ಹೆಚ್ಚು ಸ್ಥಾನಗಳನ್ನು ಗೆಲ್ಲಿಸಿಕೊಟ್ಟ ಮತದಾರರಿಗೆ ಇವರು ಕೊಟ್ಟ ಮಾತಿನ ಕಥೆ ಏನು?

ಅಧಿಕಾರದ ದುರಾಸೆಯಿಂದ ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಹಾರುವ ಪ್ರವೃತ್ತಿಯುಳ್ಳ ಸಮಯ ಸಾಧಕರನ್ನು ಸನ್ಮಾನಿಸಿ ಗೌರವಿಸಿದ್ದು ಯಡಿಯೂರಪ್ಪನವರ ಒಂದು ವರ್ಷದ ಸಾಧನೆ! ಇದನ್ನು ಬಿಟ್ಟು ಬಿಜೆಪಿ ಸರಕಾರ ಕಳೆದ ಒಂದು ವರ್ಷದಲ್ಲಿ ಸಾಧಿಸಿದ್ದು ಬೇರೆ ಏನು ಇಲ್ಲ. ಆಪರೇಷನ್ ಕಮಲ ಎಂಬ ಕೆಟ್ಟ ಪ್ರವೃತ್ತಿಯನ್ನು ಬಿತ್ತಿ ಬೆಳೆಸಿದ್ದು ಬಿಜೆಪಿಗರು. ಇಂತಹ ಸಂವಿಧಾನಬಾಹಿರ ಹೀನ ಪ್ರವೃತ್ತಿ ಸ್ವತಃ ಬಿಜೆಪಿ ಹೈ ಕಮ್ಯಾಂಡ್ ಬೆಂಬಲಿಸಿ ಪ್ರೋತ್ಸಾಹಿಸುತ್ತಿರುವುದು ಖಂಡನಾರ್ಹ. ದೇಶದಲ್ಲಿರುವ ಎಲ್ಲಾ ಚುನಾಯಿತ ಬಿಜೆಪಿಯೇತರ ಸರ್ಕಾರಗಳನ್ನು ಪಿತೂರಿ ಮಾಡಿ ಉರುಳಿಸುವ ಷಡ್ಯಂತ್ರ ಬಿಜೆಪಿ ನಾಯಕರ ರಕ್ತದಲ್ಲಿ ಹರದಾಡುವ ವೈರಾಣು. ಅಧಿಕಾರಕ್ಕೆ ಬರಲು, ಅಧಿಕಾರದಲ್ಲಿ ಉಳಿಯಲು ಮೋದಿ ಮುಂತಾದವರು ಏನು ಬೇಕಾದರೂ ಮಾಡಲು ಸಿದ್ಧ. ಕನಿಷ್ಠ ನೈತಿಕತೆಯೂ ಇಲ್ಲದ ದುಷ್ಟರು! ಯಡಿಯೂರಪ್ಪನವರ ಇಡೀ ವರ್ಷದ ಸಾಧನೆ ಕೇವಲ ಅಕ್ರಮ ಸಂಪಾದನೆ ಮಾಡಿದ ಕೆಲವರನ್ನು ಇನ್ನಷ್ಟು ಸಂಪಾದನೆ ಮಾಡಲು ಅವಕಾಶ ಮಾಡಿರುವುದು.

ಯಡಿಯೂರಪ್ಪ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದಾಗ ರಾಜ್ಯದ ಬಹುತೇಕ ಜಿಲ್ಲೆಗಳು ಭೀಕರ ಪ್ರವಾಹಕ್ಕೆ ತುತ್ತಾಗಿ ಜನ ಜಾನುವಾರುಗಳು ಕೊಚ್ಚಿಕೊಂಡು ಹೋಗಿದ್ದವು. ಪ್ರವಾಹಕ್ಕೆ ತುತ್ತಾಗಿ ತಮ್ಮ ನೆಲೆ ಕಳೆದುಕೊಂಡ ಜನರಿಗೆ ಇದುವರೆಗೂ ವ್ಯವಸ್ಥಿತವಾದ ಪರಿಹಾರ ದೊರೆತಿಲ್ಲ. ಈಗಂತೂ ರಾಜ್ಯದ ದುಡಿಯುವ ಜನತೆ ಭಯಾನಕವಾದ ಕೊರಾನಾ ವೈರಸ್ ಉಸಿರು ಹಿಂಡುತ್ತದೆ. ಯಡಿಯೂರಪ್ಪನವರ ಸರಕಾರ ಇಂತಹ ಅನಾಹುತವನ್ನು ಎದುರಿಸಲು ಯಾವುದೇ ಸಮರ್ಥಕ ಸಿದ್ಧತೆ ಮಾಡಿಕೊಂಡಿರಲಿಲ್ಲ. ಕನಿಷ್ಠ ಮಾನವೀಯ ಆರೈಕೆಯನ್ನು ಸಹ ಒದಗಿಸಲಾಗಿಲ್ಲ. ಕಳ್ಳ ಕದಿಮರಿಗೆ ಕೊಟ್ಟ ಭರವಸೆಯನ್ನು ತಪ್ಪದೆ ಈಡೇರಿಸುವ ಯಡಿಯೂರಪ್ಪನವರಿಗೆ ರಾಜ್ಯದ ಜನತೆಗೆ ನೀಡಿದ ಭರವಸೆ ಏಕೆ ಮರೆತು ಹೋಗುತ್ತದೆ. ತಮ್ಮ ಬೆಂಬಲಿಗರಿಗೆ, ಕೊಟ್ಟ ಮಾತನ್ನು ಉಳಿಸಿಕೊಂಡಂತೆ ರಾಜ್ಯದ ರೈತರಿಗೆ, ಕೂಲಿಕಾರರಿಗೆ, ದಲಿತರಿಗೆ, ಕಾರ್ಮಿಕರಿಗೆ, ಕೊರೋನಕ್ಕೆ ಒಳಗಾದ ಬಡ ರೋಗಿಗಳಿಗೆ ಅಗತ್ಯ ನೆರವು ನೀಡಲು ಸಾಧ್ಯವಾಗದಿರುವುದು ಏಕೆ?

ರೈಲ್ವೇ ಖಾಸಗೀಕರಣ ವಿರೋಧಿಸಿ ಪ್ರತಿಭಟನೆ



ರೈಲ್ವೇ ಖಾಸಗೀಕರಣ ವಿರೋಧಿಸಿ ಹಾಗೂ ಸಾರ್ವಜನಿಕ ಉದ್ದಿಮೆಗಳ ಸರ್ವನಾಶಕ್ಕೆ ಪಣ ತೊಟ್ಟಿರುವ ಕೇಂದ್ರದ ನರೇಂದ್ರ ಮೋದಿ ಸರಕಾರದ ವಿರುದ್ಧ ಸಿಐಟಿಯು ನೇತೃತ್ವದಲ್ಲಿ ಮಂಗಳೂರು ನಗರದಲ್ಲಿ 31 ಜುಲೈ 2020 ಪ್ರತಿಭಟನಾ ಪ್ರದರ್ಶನವನ್ನು ನಡೆಸಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಸಿಐಟಿಯು ಕರ್ನಾಟಕ ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿಯವರು ಮಾತನಾಡುತ್ತಾ, 'ದೇಶದ ಅಭಿವೃದ್ಧಿಗೆ ಮಾರಕವಾದ ಕೇಂದ್ರದ ನರೇಂದ್ರ ಮೋದಿ ಸರಕಾರವು ದೇಶದ ಅಮೂಲ್ಯ ಸಂಪತ್ತುಗಳಾದ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣಗೊಳಿಸುವ ಮೂಲಕ ದೇಶದ ಆರ್ಥಿಕತೆಯನ್ನು ಕೊಳ್ಳೆ ಹೊಡೆಯುತ್ತಿದೆ. ಕಲ್ಲಿದ್ದಲು, ವಿಮೆ, ರಕ್ಷಣೆ, ಬ್ಯಾಂಕ್, ಬಂದರು, ವಿಮಾನ ನಿಲ್ದಾಣ, ಸಾರಿಗೆ ಸೇರಿದಂತೆ ಎಲ್ಲವನ್ನೂ ಖಾಸಗೀಕರಣಗೊಳಿಸಿದ ಮೋದಿ ಸರಕಾರ ಇದೀಗ ಅತ್ಯಂತ ಲಾಭದಾಯಕ ಸಂಸ್ಥೆಯಾದ ರೈಲ್ವೇಯನ್ನು ಖಾಸಗೀಕರಣಗೊಳಿಸಲು ಹೊರಟಿರುವುದು ತೀರಾ ಖಂಡನೀಯವಾಗಿದೆ. ಜನಸಾಮಾನ್ಯರು ಅತ್ಯಲ್ಪ ವೆಚ್ಚದಲ್ಲಿ ಇಡೀ ದೇಶವನ್ನು ಸುತ್ತಾಡಲು ಇರುವ ಏಕೈಕ ವ್ಯವಸ್ಥೆಯಾದ ರೈಲ್ವೇಯು ಸ್ವಾತಂತ್ರ ಪೂರ್ವದಲ್ಲಿದ್ದು, ದೇಶವನ್ನು ಒಂದಾಗಿಸಲು ಅಪಾರ ಕೊಡುಗೆ ನೀಡಿದೆ.ಅತ್ಯಂತ ಲಾಭದಾಯಕವಾದ ರೈಲ್ವೇಯನ್ನು ಸರ್ವನಾಶಗೈಯ್ಯಲು ಹೊರಟಿರುವ ಮೋದಿ ಸರಕಾರವು ನಿಜಕ್ಕೂ ದೇಶದ್ರೋಹಿ ಸರಕಾರವಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿಐಟಿಯು ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು ಮಾತನಾಡುತ್ತಾ, 'ಕೊರೋನಾ ಸಂಧರ್ಭದಲ್ಲಿ ಪ್ರಧಾನಿಯವರು ಪ್ರಸ್ತಾಪಿಸಿದ ಆತ್ಮನಿರ್ಭರದ ಅರ್ಥ ಸ್ವಾವಲಂಬನೆಯಾಗಿದ್ದು, ಆ ಮೂಲಕ ದೇಶದ ಸಾರ್ವಜನಿಕ ಸಂಸ್ಥೆಗಳನ್ನು ಉಳಿಸಿ ಬೆಳೆಸಬೇಕಾಗಿದೆ. ಆದರೆ ಮೋದಿ ಸರಕಾರವು ಅದಕ್ಕೆ ವ್ಯತಿರಿಕ್ತವಾಗಿ ವರ್ತಿಸುತ್ತಿದ್ದು, ಆತ್ಮನಿರ್ಭರದ ಹೆಸರಿನಲ್ಲಿ ಇಡೀ ದೇಶವನ್ನೇ ಲೂಟಿಗೈಯ್ಯುತ್ತಿದೆ. ಅಪಾರ ಭೂ ಸಂಪತ್ತನ್ನು ಹೊಂದಿರುವ ರೈಲ್ವೇ ಸಂಪೂರ್ಣ ಖಾಸಗೀಕರಣ ಗೊಂಡರೆ ಮುಂದಿನ ಅಪಾಯವನ್ನು ದೇಶದ ಜನತೆ ಅರ್ಥೈಸಬೇಕಾಗಿದೆ' ಎಂದು ಹೇಳಿದರು.

ಸಿಐಟಿಯು ದ.ಕ. ಜಿಲ್ಲಾಧ್ಯಕ್ಷರಾದ ಜೆ. ಬಾಲಕೃಷ್ಣ ಶೆಟ್ಟಿಯವರು ಮಾತನಾಡುತ್ತಾ, 'ಈ ಮೊದಲೇ ದೇಶದ ಆರ್ಥಿಕತೆಯನ್ನು ಸರ್ವನಾಶಗೈದ ನರೇಂದ್ರ ಮೋದಿ ಸರಕಾರವು ಕೊರೋನಾ ಸಂಧರ್ಭದಲ್ಲೂ ಮತ್ತಷ್ಟು ಜನರನ್ನು ಸಂಕಷ್ಟಕ್ಕೆ ದೂಡುವ ಮೂಲಕ ಅರ್ಥ ವ್ಯವಸ್ಥೆಯನ್ನೇ ಬುಡಮೇಲುಗೊಳಿಸಿದೆ' ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಸಿಐಟಿಯು ಜಿಲ್ಲಾ ಮುಖಂಡರಾದ ಜಯಂತಿ ಬಿ. ಶೆಟ್ಟಿ, ಭಾರತಿ ಬೋಳಾರ, ಜಯಲಕ್ಷ್ಮಿ, ಬಾಬು ದೇವಾಡಿಗ ಸಿಐಟಿಯು ಮಂಗಳೂರು ನಗರ ನಾಯಕರಾದ ಸುರೇಶ್ ಬಜಾಲ್, ಅಶೋಕ್ ಸಾಲ್ಯಾನ್, ಕೃಷ್ಣಪ್ಪ ಗೌಡ, ನಾಗೇಶ್ ಕೋಟ್ಯಾನ್, ಹರೀಶ್ ಪೂಜಾರಿ, ದಯಾನಂದ ಕೊಪ್ಪಲಕಾಡು, ಮುಝಾಫರ್, ತಿಮ್ಮಯ್ಯ ಕೊಂಚಾಡಿ ಮುಂತಾದವರು ಭಾಗವಹಿಸಿದ್ದರು.

ಸುನಿಲ್ ಕುಮಾರ್ ಬಜಾಲ್

ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ನೇತೃತ್ವದಲ್ಲಿ ಗ್ರಾಮ ಪಂಚಾಯಿತಿ ಎದುರು ಪ್ರತಿಭಟನೆ

ಶಿವಮೊಗ್ಗ ಜಿಲ್ಲೆ ಹೊಸನಗರ ತಾಲೂಕು ನಿಟ್ಟೂರು ಗ್ರಾಮ ಪಂಚಾಯಿತಿ ಎದುರಿನಲ್ಲಿ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಬೇಡಿಕೆಗಳ ಮನವಿ ಪತ್ರವನ್ನು ಸಲ್ಲಿಸಲಾಯಿತು.

ಕೊರೋನಾ ಸಾಂಕ್ರಾಮಿಕ ರೋಗದ ತೀವ್ರ ಬಿಕ್ಕಟ್ಟಿನ ಸಂದರ್ಭದಲ್ಲಿ ಆದಿವಾಸಿಗಳಿಗೆ ಪ್ರತಿವರ್ಷವೂ ಕೊಡುತ್ತಿರುವ ಪೌಷ್ಟಿಕ ಆಹಾರವನ್ನು ವರ್ಷಪೂರ್ತಿ ಕೊಡಬೇಕು ಮತ್ತು ರೇಷನ್ ಉಚಿತವಾಗಿ ನೀಡಬೇಕು, ಆರೋಗ್ಯ ವ್ಯವಸ್ಥೆ ಕಾಪಾಡಲು ಸಂಚಾರಿ ಆರೋಗ್ಯ ಘಟಕ ಗಳು ಕಾರ್ಯನಿರ್ವಹಿಸಬೇಕು, ಉದ್ಯೋಗ ವ್ಯವಸ್ಥೆ ಮತ್ತು ನಿರುದ್ಯೋಗ ಭತ್ತೆ ಸಿಗಬೇಕು, ಭೂಮಿ ವಸತಿ ಪ್ರಶ್ನೆಗಳನ್ನು ಸಹ ಇತ್ಯರ್ಥ ಗೊಳಿಸಬೇಕು, ಆನ್ಲೈನ್ ಶಿಕ್ಷಣವು ಆದಿವಾಸಿ ಮಕ್ಕಳ ಪಾಲಿಗೆ ಅತ್ಯಂತ ಸಮಸ್ಯಾತ್ಮಕ ವಾಗಿದ್ದು ಪರ್ಯಾಯ ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕು, ಪಶ್ಚಿಮಘಟ್ಟ ಕುಸಿತದ ಬಗ್ಗೆ ಅಗತ್ಯ ರಕ್ಷಣಾತ್ಮಕ ಕ್ರಮ ಕೈಗೊಳ್ಳಲು ಅಧ್ಯಯನ ನಡೆಸಬೇಕು, ಮುಂತಾದ ಬೇಡಿಕೆಗಳಿಗಾಗಿ ರಾಜ್ಯದ ಎಲ್ಲ ಕಡೆಗಳಲ್ಲಿ ಆದಿವಾಸಿಗಳ ಪ್ರತಿಭಟನೆ ನಡೆದಿದೆ.



ಪ್ರತಿಭಟನೆಯ ನೇತೃತ್ವವನ್ನು ಜಿಲ್ಲಾಧ್ಯಕ್ಷ ಮಂಜುನಾಥ್ ಕಪದೂರು, ಪ್ರಧಾನ ಕಾರ್ಯದರ್ಶಿ ಸುರೇಶ್ ಕುಂಬಳೆ, ಸಹ ಕಾರ್ಯದರ್ಶಿ ಮಂಜುಳಾ ಮುಂ. ವಹಿಸಿದ್ದರು

ವರದಿ:
ವಾ.ಉ.

ವ್ಯತ್ಯಸ್ಥ ತುಟ್ಟಿಭತ್ತೆಗಾಗಿ ಆಗ್ರಹಿಸಿ ಕಾರ್ಮಿಕರ ಪ್ರತಿಭಟನೆ

ಕರ್ನಾಟಕ ರಾಜ್ಯ ಸರಕಾರವು ಕೈಗಾರಿಕಾ ಘಟಕಗಳು ಎಪ್ರಿಲ್ 1 ರಿಂದ 2021 ಮಾರ್ಚ್ 31ರ ವರೆಗೆ ವ್ಯತ್ಯಸ್ಥ ತುಟ್ಟಿಭತ್ತೆ (ವಿಡಿಎ)ಯನ್ನು ಮುಂದೂಡುವ ಆದೇಶ ಹೊರಡಿಸಿದ್ದು, ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಲಭ್ಯವಾಗಿದ್ದ ಕಿಂಚಿತ್ ಗಳಿಕೆಯನ್ನೂ ಕಾರ್ಮಿಕರಿಗೆ ಸಿಗದಂತೆ ಮಾಡಿದೆ. ಇದನ್ನು ವಿರೋಧಿಸಿ ಕಾರ್ಮಿಕ ಸಂಘಟನೆಗಳು ಒಟ್ಟಾಗಿ ಜುಲೈ 29 ರಂದು ಮಂಗಳೂರು, ಉಡುಪಿ ಮತ್ತು ಕುಂದಾಪುರದಲ್ಲಿ ಪ್ರತಿಭಟನೆ ನಡೆಸಿದವು. ತುಟ್ಟಿಭತ್ತೆ ಪಾವತಿ ಮುಂದೂಡಿರುವ ಆದೇಶದ ಪ್ರತಿಗಳನ್ನು ಪ್ರತಿಭಟನಾಕಾರರು ಸುಟ್ಟದ್ದಲ್ಲದೆ, ಆದೇಶವನ್ನು ಸರ್ಕಾರ ಹಿಂದೆಗೆಯಬೇಕೆಂದು ಆಗ್ರಹಿಸಿದವು. ಅಲ್ಲದೆ ಸಂಬಂಧಪಟ್ಟ ಅಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಮಂಗಳೂರಿನಲ್ಲಿ ಸಹಾಯಕ ಕಾರ್ಮಿಕ ಆಯುಕ್ತರ ಕಚೇರಿ ಮುಂದೆ ಸಿಐಟಿಯು, ಎಐಟಿಯುಸಿ, ಎಚ್‌ಎಂಎಸ್ ಮತ್ತು ಬಿಎಂಎಸ್‌ನ ಕಾರ್ಮಿಕ ಮುಖಂಡರ ನೇತೃತ್ವದಲ್ಲಿ ನಡೆದ ಧರಣಿಯನ್ನುದ್ದೇಶಿಸಿ ಸಿಐಟಿಯು ದ.ಕ.ಜಿಲ್ಲಾ



ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ಎಐಟಿಯುಸಿಯ ಸೀತಾರಾಮ ಬೇರಿಂಜೆ, ಎಚ್‌ಎಂಎಸ್‌ನ ಮಹಮ್ಮದ್ ರಫಿ ಮಾತನಾಡಿದರು. ಸರಕಾರೀ ಆದೇಶಕ್ಕೆ ವ್ಯತಿರಕ್ತವಾಗಿ ಕಾರ್ಮಿಕ ಸಂಘಟನೆಗಳ ವಿನಂತಿ ಮೇರೆಗೆ ಗಣೇಶ್ ಬೀಡಿ, ಭಾರತ್ ಬೀಡಿ ಮಾಲಕರು ಜುಲೈ 1 ರಿಂದ ವ್ಯತ್ಯಸ್ಥ ತುಟ್ಟಿಭತ್ತೆ ನೀಡಲು ಒಪ್ಪಿದ್ದು ಅವರನ್ನು ಶ್ಲಾಘಿಸಲಾಯಿತು. ಅಲ್ಲದೆ ಇತರ ಬೀಡಿ ಮಾಲಕರು ಕೂಡಾ ತುಟ್ಟಿಭತ್ತೆ ಜ್ಯಾರಿಗೊಳಿಸಲು ಸಹಮತ ವ್ಯಕ್ತಪಡಿಸಿದ್ದಾರೆ. ಪ್ರತಿಭಟನೆಯಲ್ಲಿ ಸಿಐಟಿಯು ಮುಂದಾಳುಗಳಾದ ಯು.ಜಯಂತ ನಾಯ್ಕ್, ಸದಾಶಿವ ದಾಸ್, ಜಯಂತಿ ಬಿ.ಶೆಟ್ಟಿ, ರಾಮಣ್ಣ ವಿಟ್ಲ, ಭಾರತಿ ಬೋಳಾರ್, ರಾಧಾ ಮೂಡಬಿದ್ರಿ, ಗಿರಿಜಾ ಮೂಡಬಿದ್ರಿ, ಎಐಟಿಯುಸಿ ಮುಂದಾಳುಗಳಾದ ಎಚ್.ವಿ.ರಾವ್, ವಿ.ಕುಕ್ಯಾನ್, ಕರುಣಾಕರ್, ಸುರೇಶ್ ಸರಸ್ವತಿ, ಎಚ್‌ಎಂಎಸ್‌ನ ಮುಂದಾಳು ಪ್ರವೀಣ್ ಭಾಗವಹಿಸಿದರು.

ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ನಡೆದ ಧರಣಿ ಸತ್ಯಾಗ್ರಹಕ್ಕೆ ಸಿಐಟಿಯು ಮತ್ತು ಎಐಟಿಯುಸಿ ಮುಂದಾಳುಗಳು ನೇತೃತ್ವ ನೀಡಿದ್ದರು. ಸಿಐಟಿಯು ಉಡುಪಿ ಜಿಲ್ಲಾ ಮುಖಂಡರಾದ ಶೇಖರ್, ಕೆ.ವಿ.ಭಟ್ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಸಿಐಟಿಯು ತಾಲೂಕು ಮುಖಂಡರಾದ ರಾಮ ಕಾರ್ಕಡ, ಕವಿರಾಜ್ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕುಂದಾಪುರದಲ್ಲಿ ಸಿಐಟಿಯು ಕುಂದಾಪುರ ತಾಲೂಕು ಸಮಿತಿ ನೇತೃತ್ವದಲ್ಲಿ ತಾಲೂಕಿನ ವಿವಿಧ ಹಂಚು ಕಾರ್ಖಾನೆಗಳಲ್ಲಿ ನಡೆದ ಪ್ರತಿಭಟನೆಯಲ್ಲಿ ಸಾವಿರಾರು ಕಾರ್ಮಿಕರು ಸರಕಾರೀ ಆದೇಶದ ಪ್ರತಿಗಳನ್ನು ದಹಿಸಿ ಪ್ರತಿಭಟನೆ ವ್ಯಕ್ತಪಡಿಸಿದರು. ಕುಂದಾಪುರ ಕೇಂದ್ರದಲ್ಲಿ ನಡೆದ ಧರಣಿಯನ್ನುದ್ದೇಶಿಸಿ ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಎಚ್.ನರಸಿಂಹ ಮಾತನಾಡಿದರು. ಈ ಸಂದರ್ಭದಲ್ಲಿ ಹಂಚು ಕಾರ್ಮಿಕ ಮುಖಂಡರಾದ ಪ್ರಕಾಶ್ ಕೋಣಿ, ಚಂದ್ರ ದೇವಾಡಿಗ ಉಪಸ್ಥಿತರಿದ್ದರು. ●



ಜನವಾದಿ ಮಹಿಳಾ ಸಂಘಟನೆಯಿಂದ ಮಂಗಳೂರಿನಲ್ಲಿ ಧರಣಿ:

ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ಒತ್ತಾಯಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ದ.ಕ.ಜಿಲ್ಲಾ ಸಮಿತಿಯಿಂದ ಪ್ರತಿಭಟನೆ.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಷ್ಟ್ರೀಯ ಬೇಡಿಕೆ ದಿನಾಚರಣೆ ಅಂಗವಾಗಿ ಮಂಗಳೂರು ತಾಲೂಕು ಕಚೇರಿಯ ಮುಂದೆ 28 ಜುಲೈ 2020 ರಂದು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ಒತ್ತಾಯಿಸಿ ಪ್ರತಿಭಟನಾ ಪ್ರದರ್ಶನ ನಡೆಯಿತು. ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಜೆಎಂಎಸ್ ದ.ಕ. ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಜಯಂತಿ ಬಿ.ಶೆಟ್ಟಿಯವರು ಕೋವಿಡ್-19 ಎಂಬ ಸಾಂಕ್ರಮಿಕ ರೋಗ ನಮ್ಮ ದೇಶ ಮತ್ತು ರಾಜ್ಯದಲ್ಲಿ ವ್ಯಾಪಕವಾಗಿ ಹೆಚ್ಚುತ್ತಿದ್ದು, ಈ ಸಾಂಕ್ರಾಮಿಕ ರೋಗವನ್ನು ಎದುರಿಸಿ ಜನತೆಗೆ ಧೈರ್ಯ ಮತ್ತು ಶಕ್ತಿಯನ್ನು ಕೊಡಬೇಕಾದ ಕೇಂದ್ರ ಮತ್ತು ರಾಜ್ಯ ಸರಕಾರವು ಸಂಪೂರ್ಣ ವಿಫಲವಾಗಿದೆ. ಇದರಿಂದಾಗಿ ಕುಟುಂಬದ ಹೊಣೆಯನ್ನು ಹೊತ್ತಿರುವ ಮಹಿಳೆಯರು ಅತೀವ ಕಷ್ಟಕ್ಕೊಳಗಾಗಿದ್ದಾರೆ. ಹಲವಾರು ಖಾಸಗಿ ಆಸ್ಪತ್ರೆಗಳು ಜನರನ್ನು ಸುಲಿಗೆ ಮಾಡುತ್ತಿದೆ. ಕೋವಿಡೇತರ ಆರೋಗ್ಯ ಸಮಸ್ಯೆಗಳಿಗೆ ಸೂಕ್ತ ಚಿಕಿತ್ಸಾ ವ್ಯವಸ್ಥೆ ಇಲ್ಲದೆ ಜನರು ಪರದಾಡುತ್ತಿದ್ದಾರೆ. ವೈದ್ಯಕೀಯ ಸಿಬ್ಬಂದಿ, ಆಶಾ ಅಂಗನವಾಡಿ ಮತ್ತಿತರ ಫ್ರಂಟ್‌ಲೈನ್ ವಾರಿಯರ್ಸ್‌ಗಳಿಗೆ ಸೂಕ್ತ ಸೌಲಭ್ಯ ಮತ್ತು ಸರಿಯಾದ ವೇತನ ನೀಡುತ್ತಿಲ್ಲ. ದೇಶದ ಮಹಿಳೆಯರು ಹೆರಿಗೆ ಸಂಬಂಧಿತ ಸಮಸ್ಯೆಗಳಿಂದ ಯಾತನೆಯನ್ನು ಅನುಭವಿಸುತ್ತಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಲಕ್ಷಾಂತರ ಕೋಟಿ ರೂಪಾಯಿ ಪ್ಯಾಕೇಜನ್ನು ಘೋಷಣೆ ಮಾಡಿದರೂ ಜನಸಾಮಾನ್ಯರಿಗೆ ಪ್ರಯೋಜನವಾಗುತ್ತಿಲ್ಲ. ಇದರ ಲಾಭವನ್ನು ಕಾರ್ಪರೇಟ್ ಬಂಡವಾಳಶಾಹಿಗಳು ಪಡಕೊಂಡಿದ್ದಾರೆ. ಸರಕಾರ ಕೂಡಲೇ ದೇಶದ ಸಾಮಾನ್ಯ ಜನರ ಸಮಸ್ಯೆಗಳಿಗೆ ಸ್ಪಂದಿಸದಿದ್ದರೆ ಚಳುವಳಿಯನ್ನು ತೀವ್ರಗೊಳಿಸುವುದಾಗಿ ತಿಳಿಸಿದರು.

ಸಭೆಯಲ್ಲಿ ಎಸ್‌ಎಫ್‌ಐ ಮುಖಂಡರಾದ ಮಾಧುರಿ ಬೋಳಾರ್ ಮಾತನಾಡಿ ಮಹಿಳೆಯರ ಮತ್ತು ಮಕ್ಕಳಿಗೆ ಸುರಕ್ಷಾ ಕ್ರಮಗಳನ್ನು ಅನುಸರಿಸಿ ಪೌಷ್ಠಿಕ ಆಹಾರ ಪದಾರ್ಥಗಳನ್ನು ಕೇರಳ ಮಾದರಿಯಲ್ಲಿ ವಿತರಿಸಬೇಕೆಂದು ಒತ್ತಾಯಿಸಿದರು. ಜೆಎಂಎಸ್‌ನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಭಾರತಿ ಬೋಳಾರ್ ಸ್ವಾಗತಿಸಿ ಜೆಎಂಎಸ್ ಮುಖಂಡರಾದ ವಿಲಾಸಿನಿ ತೊಕ್ಕೊಟ್ಟು ಧನ್ಯವಾದ ನೀಡಿದರು. ಪ್ರತಿಭಟನೆಯ ನಂತರ ಜಿಲ್ಲಾಧಿಕಾರಿಗಳ ಮೂಲಕ ಕರ್ನಾಟಕ ಸರಕಾರಕ್ಕೆ ಮನವಿಯನ್ನು ಅರ್ಪಿಸಲಾಯಿತು. ಜೆಎಂಎಸ್ ಮುಖಂಡರಾದ ಲೋಲಾಕ್ಷಿ ಬಂಟ್ವಾಳ, ಪ್ರಮೀಳಾ ದೇವಾಡಿಗ, ಭವ್ಯಾ ಮುಚ್ಚೂರು, ರೋಹಿಣಿ ಜಲ್ಲಿಗುಡ್ಡೆ ಉಪಸ್ಥಿತರಿದ್ದರು.





ಮಂಗಳೂರಿನಲ್ಲಿ ವಿದ್ಯುತ್ ಮೀಟರ್ ರೀಡರುಗಳ ಪ್ರತಿಭಟನೆ:

ಕರ್ನಾಟಕ ರಾಜ್ಯ ವಿದ್ಯುತ್ ಕಾರ್ಮಿಕರ ಫಡೆರೇಶನ್ (ಸಿಐಟಿಯು ಸಂಯೋಜಿತ) ನೇತೃತ್ವದಲ್ಲಿ ಜುಲೈ 30 ರಂದು ಮಂಗಳೂರಿನ ಮೆಸ್ಕಾಂ ಪ್ರಧಾನ ಕಚೇರಿ ಎದುರು ಮಾಪಕ ಓದುಗರು ತಮ್ಮ ನೇಮಕಾತಿಯನ್ನು ಖಾಯಂಗೊಳಿಸಬೇಕೆಂದು ಹಾಗೂ ಇತರ ಬೇಡಿಕೆಗಳನ್ನು ಮುಂದಿಟ್ಟು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯನ್ನುದ್ದೇಶಿಸಿ ರಾಜ್ಯ ವಿದ್ಯುತ್ ಕಾರ್ಮಿಕ ಫೆಡರೇಶನ್ನಿನ ಮುಖಂಡರಾದ ಶಿವಕುಮಾರ್ ಎಸ್.ಎಂ, ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿ ಮಾತನಾಡಿದರು.

ರಾಜ್ಯಾದ್ಯಂತ ಕಟ್ಟಡ ಕಾರ್ಮಿಕರಿಂದ ಪ್ರತಿಭಟನೆ



ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಫೆಡರೇಷನ್ (ಸಿಐಟಿಯು) ನೇತೃತ್ವದಲ್ಲಿ ರಾಜ್ಯಾದ್ಯಂತ ಕಾರ್ಮಿಕ ಇಲಾಖೆಯ ಕಚೇರಿಗಳ ಎದುರು ಈ ಕೆಳಕಂಡ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಪ್ರತಿಭಟನೆಗಳನ್ನು ನಡೆಸಿ ಈ ಕೆಳಕಂಡಂತೆ ಮನವಿ ಸಲ್ಲಿಸಿದೆ. ಈಗಾಗಲೇ ಬಿಡಿಬಿಡಿಯಾಗಿ ಮನವಿಗಳನ್ನು ಹಲವು ಬಾರಿ ನಮ್ಮ ವಿವಿಧ ಸಮಿತಿಗಳು ಮಂಡಳಿಗೆ ಸಂಬಂಧಿಸಿದ ಕಾರ್ಮಿಕ ಇಲಾಖೆಗೆ ಸಲ್ಲಿಸಿದ್ದರೂ ಯಾವುದೇ ಪ್ರತಿಫಲ ಸಿಕ್ಕಿಲ್ಲ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಕೋವಿಡ್ ತೀವ್ರವಾಗಿ ಏರುತ್ತಿರುವಾಗಲೇ, ಈ ಸನ್ನಿವೇಶದಲ್ಲಿ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೀಗಾಗಿ ಅನಿವಾರ್ಯವಾಗಿ ದೈಹಿಕ ಅಂತರ ಕಾಪಾಡಿಕೊಂಡೆ ಈ ಹೋರಾಟದಲ್ಲಿ ಪಾಲ್ಗೊಂಡು ಈ ಮನವಿಯನ್ನು ಸಲ್ಲಿಸುತ್ತಿದ್ದಾರೆ. ತಾವು ಈ ಬೇಡಿಕೆಗಳ ಬಗ್ಗೆ ತುರ್ತು ಕ್ರಮವಹಿಸಬೇಕು. ರಾಜ್ಯ ಸರ್ಕಾರ ಮತ್ತು ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯು ನಮ್ಮ ಬೇಡಿಕೆಗಳ ಕುರಿತು ತುರ್ತಾಗಿ ಸ್ಪಂದಿಸದಿದ್ದಲ್ಲಿ ಮುಂಬರುವ ಆಗಸ್ಟ್ 10 ರಂದು ಕಾರ್ಮಿಕ ಕಚೇರಿ ಮತ್ತು ಕಲ್ಯಾಣ ಮಂಡಳಿ ಮುತ್ತಿಗೆಯಂತಹ ತೀವ್ರ ಸ್ವರೂಪದ ಚಳವಳಿಗೆ ಮುಂದಾಗಬೇಕಾಗುತ್ತದೆ ಎನ್ನುವ ಮುನ್ಸೂಚನೆಯೊಂದಿಗೆ ಈ ಮನವಿಯನ್ನು ಈ ದಿನ ನೀಡುತ್ತಿದ್ದೇವೆ.

ಪ್ರಮುಖ ಬೇಡಿಕೆಗಳು

1.ಪರಿಹಾರ ಅವಧಿ ವಿಸ್ತರಿಸಬೇಕು:

ಮಂಡಳಿಯಿಂದ ಘೋಷಿಸಿರುವ ರೂ.5,000/– ಕೋವಿಡ್ ಪರಿಹಾರ ವಿತರಣೆ ಅವಧಿ ವಿಸ್ತರಿಸಬೇಕು ಎಂದು ಕೋರಿ ಹಲವಾರು ಮನವಿಗಳನ್ನು ಜೂನ್ 30ಕ್ಕಿಂತ ಪೂರ್ವದಲ್ಲೇ ನೀಡಿದ್ದರೂ, ಕಲ್ಯಾಣ ಮಂಡಳಿ ಯಾವುದೇ ಕ್ರಮವಹಿಸಲಿಲ್ಲ. ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ಸಾರಿಗೆ ಸೌಕರ್ಯ ಇಲ್ಲದಿದ್ದರಿಂದ, ಬ್ಯಾಂಕ್ ಖಾತೆ ಸರಿಪಡಿಸಿ ಪರಿಹಾರಕ್ಕೆ ಅರ್ಜಿ ಸಲ್ಲಿಸಲು ಸಾಧ್ಯವಾಗಿಲ್ಲ. ಇದರಿಂದ ಸಾವಿರಾರು ಗ್ರಾಮೀಣ ಪ್ರದೇಶದ ಕಾರ್ಮಿಕರು ರೂ.5000/– ಪರಿಹಾರದಿಂದ ವಂಚಿತರಾಗಿದ್ದಾರೆ. ಹೀಗಾಗಿ ಕನಿಷ್ಟ ಒಂದು ತಿಂಗಳಾದರೂ ಈ ಅವಧಿಯನ್ನು ಮತ್ತೆ ವಿಸ್ತರಿಸಬೇಕೆಂದು ಕೋರುತ್ತೇವೆ. ಇದಲ್ಲದೆ ರಾಜ್ಯದೆಲ್ಲಡೆ ಶೇ.15–20 ರಷ್ಟು ಅರ್ಜಿ ಸಲ್ಲಿಸಿದ ಕಾರ್ಮಿಕರಿಗೆ ಇದುವರೆಗೂ ಪರಿಹಾರ ಧನ ಪಾವತಿಯಾಗಿಲ್ಲ. ಬ್ಯಾಂಕ್ ವಿವರ ಸೇರಿದಂತೆ ಅಗತ್ಯ ದಾಖಲೆಗಳನ್ನು ನೀಡಿದ್ದರೂ ಕಾರ್ಮಿಕರ ಖಾತೆಗಳಿಗೆ ಹಣ ಜಮಾ ಆಗಿಲ್ಲ. ಹೀಗಾಗಿ ಶೀಘ್ರವೇ ಅವರ ಖಾತೆಗಳಿಗೆ ಜಮೆ ಮಾಡಲು ಅಗತ್ಯ ಕ್ರಮವಹಿಸಬೇಕು.

2.ಹೆಚ್ಚುವರಿ ಕೊವೀಡ್ ಪರಿಹಾರ ಘೋಷಿಸಬೇಕು:

ಲಾಕ್‌ಡೌನ್ ಸಮಯದಲ್ಲಿ ಮಂಡಳಿಯಿಂದ ರೂ.5000/– ಪರಿಹಾರ ಪ್ರಕಟಿಸಿದ್ದು ಸ್ವಾಗತಾರ್ಹ. ಅದಕ್ಕಾಗಿ ಕಾರ್ಮಿಕ ಸಚಿವರು ಹಾಗೂ ಮಂಡಳಿಯನ್ನು ಅಭಿನಂದಿಸುತ್ತೇವೆ. ಆದರೆ ಕೋವಿಡ್ ಮತ್ತು ಲಾಕ್‌ಡೌನ್ 4 ತಿಂಗಳುಗಳ ಕಾಲ ಮುಂದುವರೆದಿದೆ. ಈ ಅವಧಿಯಲ್ಲಿ ಲಕ್ಷಾಂತರ ಕಾರ್ಮಿಕರು ಕೆಲಸವಿಲ್ಲದೆ ಕಂಗಾಲಾಗಿದ್ದಾರೆ. ಹೀಗಾಗಿ ಎಲ್ಲಾ ಕಟ್ಟಡ ಕಾರ್ಮಿಕರಿಗೆ ವಾರಕ್ಕೆ ರೂ.2,000/– ನಂತೆ ಕನಿಷ್ಟ 3 ತಿಂಗಳವರೆಗೆ ಕೋವಿಡ್ ಪರಿಹಾರ ಘೋಷಿಸಬೇಕು ಎಂದು ಮೇ 30 ರಂದು ಕಲ್ಯಾಣ ಮಂಡಳಿ ಮುಂದೆ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದ್ದೆವು. ಆದರೂ ಇದುವರೆಗೂ ಹೆಚ್ಚುವರಿ ಧನಸಹಾಯವನ್ನು ಮಂಡಳಿ ಘೋಷಿಸಿಲ್ಲ. ಆದ್ದರಿಂದ ಕೂಡಲೇ ಮೊತ್ತದ ಪರಿಹಾರ ಕೋವಿಡ್ ಪರಿಹಾರ ಪ್ಯಾಕೇಜ್ ಪ್ರಕಟಿಸಬೇಕೆಂದು ಕೋರುತ್ತೇವೆ ಮತ್ತು ಬೆಂಗಳೂರಿನಲ್ಲಿ ನೀಡಿದಂತೆ ರಾಜ್ಯದ ಎಲ್ಲಾ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಕಾರ್ಮಿಕ ಸಂಘಗಳು ಮತ್ತು ಇಲಾಖೆ ಮೂಲಕ ರೇಷನ್ ಕಿಟ್ ನೀಡಬೇಕು.

3.ಮದುವೆ–ಪಿಂಚಣಿ–ಮರಣ ಪರಿಹಾರ ಅವಧಿ ವಿಸ್ತರಿಸಿ:

ಕೋವಿಡ್ ಅವಧಿಯಲ್ಲಿ ಸಾಕಷ್ಟು ಕಾರ್ಮಿಕ ಕುಟುಂಬಗಳಲ್ಲಿ ಮದುವೆಗಳು ಸರಳವಾಗಿಯೇ ನಡೆದಿವೆ. ಇಂತಹ ಸನ್ನಿವೇಶದಲ್ಲಿ ಕೆಲವರ ನವೀಕರಣ ಕೂಡ ಬಾಕಿ ಇದ್ದವು. ಇದಲ್ಲದೆ ಪಿಂಚಣಿಗಾಗಿ ಅರ್ಜಿ ಸಲ್ಲಿಸಬೇಕಾದವರು ಈ ಅವಧಿಯಲ್ಲಿ ಅರ್ಜಿಗಳನ್ನು ಸಲಿಸಲು ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ಮದುವೆ, ಪಿಂಚಣಿ ಹಾಗೂ ವೈದ್ಯಕೀಯ ಸೇರಿ ಅವಶ್ಯಕವಿರುವ ಸೌಲಭ್ಯಗಳಿಗೆ ಅರ್ಜಿ ಹಾಕಲು ಇರುವ ಅವಧಿಯನ್ನು ಕೋವಿಡ್ ಅವಧಿ ಎಂದು ಪರಿಗಣಿಸಿ ವಿಸ್ತರಿಸಬೇಕು ಮತ್ತು ವಿವಿಧ ಸಹಾಯಧನಕ್ಕಾಗಿ ಸಲ್ಲಿಸಿದ ಸಾವಿರಾರು ಅರ್ಜಿಗಳು ವಿವಿಧ ಕಾರ್ಮಿಕ ಕಚೇರಿಗಳಲ್ಲಿ ತಪಾಸಣೆ, ಸಿಬ್ಬಂದಿ ಕೊರತೆಯ ನೆಪದಲ್ಲಿ ತಡೆಹಿಡಿಯಲ್ಪಟ್ಟಿವೆ, ಇವುಗಳನ್ನೆಲ್ಲ ಒಂದು ಪೈಲೆಟ್ ಯೋಜನೆಯಡಿಯಲ್ಲಿ ನಿರ್ದಿಷ್ಟ ಕಾಲಾಮಿತಿಯಲ್ಲಿ ಶೀಘ್ರ ವಿಲೇವಾರಿ ಮಾಡಲು ಕ್ರಮವಹಿಸಬೇಕು.

4. ಸೇವಾಸಿಂಧು ಕೇಂದ್ರಗಳು ಮತ್ತು ಕಾರ್ಮಿಕ ಇಲಾಖೆಯಲ್ಲಿ ಲಂಚಗುಳಿತನಕ್ಕೆ ಕಡಿವಾಣ ಹಾಕಿ:

ರಾಜ್ಯಾದ್ಯಂತ ಇರುವ ಸೇವಾಸಿಂಧು ಕೇಂದ್ರಗಳು ನಿಗದಿಪಡಿಸಿದ ಶುಲ್ಕಕ್ಕಿಂತ ಹೆಚ್ಚು ಶುಲ್ಕ ಪಡೆದೇ ಕಾರ್ಮಿಕರನ್ನು ಮನಬಂದಂತೆ ಶೋಷಣೆ ಮಾಡುತ್ತಿದ್ದಾರೆ. ಇಂತಹ ಕೇಂದ್ರಗಳ ವಿರುದ್ಧ ಈ ಹಿಂದೆ ದೂರುಗಳನ್ನು ನೀಡಿದಾಗ ಅಂತಹ ಕೇಂದ್ರಗಳನ್ನು ಬಂದ್ ಮಾಡಲಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಕೆಲ ಕಾರ್ಮಿಕ ಇಲಾಖೆ ಸಿಬ್ಬಂದಿ ಶಾಮೀಲಾಗಿ ಸೇವಾ ಸಿಂಧು ಕೇಂದ್ರಗಳ ಏಜೆಂಟರ ರೀತಿ ಕೆಲಸ ಮಾಡುತ್ತಿದ್ದಾರೆ. ಸೇವಾ ಸಿಂಧು ಕೇಂದ್ರಗಳಿಗೆ ಕಾರ್ಮಿಕರಿಂದ ಸುಲಿಗೆ ಮಾಡುವುದು ಬಿಟ್ಟು ಬೇರೆ ಯಾವ ಸಾಮಾಜಿಕ ಕಳಕಳಿ, ಸೇವಾ ಮನೋಭಾವ ಇರುವುದಿಲ್ಲ. ಹೀಗಾಗಿ ಪುನಃ ನವೀಕರಣಕ್ಕೆ ಕಾರ್ಮಿಕ ಸಂಘಗಳೇ ಅವರಿಗೆ ಸಹಾಯ ಮಾಡಬೇಕು. ಹೀಗಾಗಿ ಕಾರ್ಮಿಕರಿಂದ ಹಣ ಸುಲಿಗೆ ಮಾಡುತ್ತಿರುವ ಅಂತಹ ಕೇಂದ್ರಗಳನ್ನು ಮುಚ್ಚಿಸಲು ಕ್ರಮವಹಿಸಬೇಕು.

ಇದಲ್ಲದೆ ರಾಜ್ಯದ ಹತ್ತಾರು ಕಾರ್ಮಿಕ ನಿರೀಕ್ಷರ ಕಚೇರಿ ಜಿಲ್ಲಾ ಕಾರ್ಮಿಕಾಧಿಕಾರಿಗಳ ಕಚೇರಿಗಳಲ್ಲಿ ಸಿಬ್ಬಂದಿ ಸಹಾಯದಿಂದ ನಕಲಿ ಏಜೆಂಟರ ಕಾಟ ಮಿತಿ ಮೀರಿದೆ. ಪ್ರತಿ ಅರ್ಜಿಗೆ ನೂರಾರು ರೂಪಾಯಿಗಳು, ಸೌಲಭ್ಯಗಳ ಅರ್ಜಿಗೆ ಕನಿಷ್ಟ ಒಂದು ಸಾವಿರದಿಂದ ಐದು ಸಾವಿರದವರೆಗೂ ಲಂಚಪಡೆದು ಅರ್ಜಿಗಳನ್ನು ಕೆಲವೇ ದಿನಗಳಲ್ಲಿ ವಿಲೇವಾರಿ ಮಾಡುತ್ತಿರುವ ನೂರಾರು ಪ್ರಕರಣಗಳು ನಡೆಯುತ್ತಿವೆ. ಇದಕ್ಕೆ ಕಡಿವಾಣ ಹಾಕಲೇಬೇಕು ಎಂಬುದು ನಮ್ಮ ಆಗ್ರಹವಾಗಿದೆ. ಇದು ನಿಯಂತ್ರಣ ಆಗಬೇಕಾದರೆ ನೋಂದಣಿ ಮತ್ತು ನವೀಕರಣ ಹಾಗು ಸೌಲಭ್ಯಗಳಿಗೆ ಅರ್ಜಿ ಹಾಕುವ ಕೆಲಸವನ್ನು ರಾಜ್ಯದಲ್ಲಿ ಕಟ್ಟಡ ಕಾರ್ಮಿಕನ್ನು ಶಿಸ್ತುಬದ್ದವಾಗಿ, ಪ್ರಾಮಾಣಿಕವಾಗಿ ಸಂಘಟಿಸುತ್ತಾ ಮತ್ತು ಅವರಲ್ಲಿ ಕಾನೂನು ಮತ್ತು ಸಂಘಟನಾತ್ಮಕ ತಿಳುವಳಿಕೆ ನೀಡುವಲ್ಲಿ ಹತ್ತಾರು ವರ್ಷಗಳಿಂದ ಕೆಲಸ ಮಾಡುತ್ತಿರುವ ಕೇಂದ್ರ ಕಾರ್ಮಿಕ ಸಂಘಟನೆಗಳ ಸಂಯೋಜಿತ ಕಟ್ಟಡ ಕಾರ್ಮಿಕ ಸಂಘಟನೆಗಳ ಮೂಲಕ ಜಾರಿಗೊಳಿಬೇಕು. ಇದನ್ನು ತುರ್ತಾಗಿ ಜಾರಿಗೊಳಿಸಬೇಕೆಂಬುದು ನಮ್ಮ ಒತ್ತಾಯವಾಗಿದೆ.

5. ನೋಂದಣಿ ಮತ್ತು ನವೀಕರಣ ಅರ್ಜಿಗಳನ್ನು ಶೀಘ್ರ ವಿಲೇವಾರಿ ಮಾಡಿ:

ರಾಜ್ಯದಲ್ಲಿ ನಮ್ಮ ಸಂಘಟನೆ ನೇತೃತ್ವದಲ್ಲಿ ಸುಮಾರು 50ಕ್ಕಿಂತ ಹೆಚ್ಚಿನ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ನಮ್ಮ ಕಾರ್ಯಕರ್ತರೆ ಅರ್ಜಿಗಳನ್ನು ನಮ್ಮ ಸಂಘಟನಾ ಜಾಲದ ಮೂಲಕ ಸಂಬಂಧಿಸಿದ ಕಾರ್ಮಿಕ ನಿರೀಕ್ಷಕರ ಮೂಲಕ ಸಲ್ಲಿಸುತ್ತಿದ್ದಾರೆ. ಆದರೆ ಇವುಗಳನ್ನು ಮೂರು ತಿಂಗಳಿಂದ ಆರು ತಿಂಗಳಾದರೂ ಇಲಾಖಾ ಸಿಬ್ಬಂದಿ ವಿಲೇವಾರಿ ಮಾಡಿರುವುದಿಲ್ಲ. ಬದಲಾಗಿ ನಕಲಿ ಏಜೆಂಟರು ಮತ್ತು ಲಂಚ ನೀಡಿದ ವ್ಯಕ್ತಿಗಳ ಮೂಲಕ ಕೇವಲ ಮೂರು ದಿನಗಳಿಂದ ಒಂದು ವಾರದೊಳಗೆ ನೋಂದಣಿ ಕಾರ್ಡುಗಳನ್ನು ವಿತರಿಸಲಾಗುತ್ತಿದೆ. ಹಲವೆಡೆ ಇದಕ್ಕೆ ಕಾರ್ಮಿಕ ನಿರೀಕ್ಷಕರು ನೇರವಾಗಿ ಶಾಮೀಲಾಗಿದ್ದಾರೆ. ಸಲ್ಲಿಸಲಾಗುವ ಅರ್ಜಿಗಳಿಗೆ ಹಿರಿತನವಾಗಲಿ (ಸಿನಿಯಾರಿಟಿ) ಮತ್ತು ಯಾವುದೇ ಕಾಲಮಿತಿ ಇಲ್ಲದಿರುವುದೇ ಇದಕ್ಕೆ ಕಾರಣ. ಹಾಗಾಗಿ ಹೊಸ ಅರ್ಜಿ ನೋಂದಣಿ, ನವೀಕರಣ ಮತ್ತು ಸೌಲಭ್ಯಗಳ ಅರ್ಜಿಗಳಿಗೆ ಕ್ರಮಬದ್ದ ಸಂಖ್ಯೆಗಳನ್ನು ನೀಡಿ ಅವುಗಳು ಒಂದು ನಿಗದಿತ ಅವಧಿಯೊಳಗೆ ವಿಲೇವಾರಿ ಮಾಡುವ ಕ್ರಮವನ್ನು ಮಂಡಳಿಯು ಕಡ್ಡಾಯವಾಗಿ ಜಾರಿಗೊಳಿಸಬೇಕು.

ನವೀಕರಣಕ್ಕಾಗಿ ಅರ್ಜಿ ಸಲ್ಲಿಸುವಾಗ ವೃತ್ತ (ಕಣ್ತಪ್ಪಿನಿಂದ) ಬದಲಾದ ಅರ್ಜಿಗಳನ್ನು ತಿರಸ್ಕೃತಗೊಳಿಸಲಾಗುತ್ತಿದೆ, ಇದು ಸರಿಯಲ್ಲ. ಬದಲಾಗಿ ಆರಂಭದಲ್ಲಿ ಯಾವ ವೃತ್ತದಲ್ಲಿ ನೋಂದಣಿ ಆಗಿರುತ್ತಾರೋ ಅಂತಹ ವೃತ್ತಗಳಿಗೆ ವರ್ಗಾವಣೆ ಮಾಡುವುದು ಆಗಬೇಕು. ಇದರಿಂದ ಫಲಾನುಭವಿ ಎರಡನೇ ಅರ್ಜಿ ಸಲ್ಲಿಸುವ ಹೊರೆ ತಪ್ಪುತ್ತದೆ. ಸೌಲಭ್ಯಗಳಿಗಾಗಿ (ಕ್ಲೇಮ್ಸ್) ಸಲ್ಲಿಸುವ ಅರ್ಜಿಗಳು ಸೂಕ್ತ ದಾಖಲಾತಿಗಳಿಲ್ಲದ ಅಥವಾ ವಿನಾಕಾರಣ ತಿರಸ್ಕೃತಗೊಂಡಿದ್ದರೆ ಅಂತಹವರಿಗೆ ಪುನರ್ ಸಲ್ಲಿಸಲು ಅವಕಾಶವಿರಬೇಕು, ಅಗತ್ಯವಿದ್ದಲ್ಲಿ ಅವುಗಳ ಪರಿಶೀಲನೆಗೆ 'ಮೇಲ್ಮನವಿ ಸಮಿತಿ'ಗಳನ್ನು ಸಹಾಯಕ ಕಾರ್ಮಿಕ ಆಯುಕ್ತರು ಇಲ್ಲವೇ ಜಿಲ್ಲಾ ಕಾರ್ಮಿಕಾಧಿಕಾರಿಗಳ ನೇತೃತ್ವದಲ್ಲಿ ಕಾರ್ಮಿಕ ಸಂಘಗಳನ್ನು ಒಳಗೊಂಡು ಸಮಿತಿ ರಚಿಸಬೇಕು. ಮಂಡಳಿಯಿಂದ ಕೆಳಹಂತದಲ್ಲಿರುವ ಕಾರ್ಮಿಕ ಇಲಾಖಾ ಅಧಿಕಾರಿಗಳಿಗೆ ಮತ್ತು ಅಲ್ಲಿನ ಸಿಬ್ಬಂದಿಗೆ ಹಾಗೂ ಕಟ್ಟಡ ಕಾರ್ಮಿಕ ಸಂಘಗಳ ನಾಯಕರುಗಳಿಗೆ ಪಾರದರ್ಶಕವಾಗಿ ಪ್ರಾಮಾಣಿಕವಾಗಿ ಕೆಲಸ ಮಾಡುವಂತೆ ಉತ್ತೇಜಿಸಲು ಜಾಗೃತಿ ಸಭೆಗಳನ್ನು ಆಯೋಜಿಸಬೇಕು. ಈ ವಿಚಾರದಲ್ಲಿ ಬೆಂಗಳೂರಿನ ಕಲ್ಯಾಣ ಮಂಡಳಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ಮಾಡುತ್ತಿರುವ ಕೆಲಸ ಅಭಿನಂದನಾರ್ಹವಾದದು. ಇದೇ ವಾತಾವರಣ ರಾಜ್ಯದೆಲ್ಲೆಡೆ ನಿರ್ಮಾಣವಾದರೆ ಮಂಡಳಿ ಬಗ್ಗೆ ಇರುವ ಗೌರವ ಇಮ್ಮಡಿಗೊಳ್ಳುತ್ತದೆ ಎಂಬುದು ನಮ್ಮ ಭಾವನೆ.

6. ಖಾಲಿ ಇರುವ ಸಿಬ್ಬಂದಿಗಳ ಹುದ್ದೆ ಭರ್ತಿ ಮಾಡಬೇಕು:

ರಾಜ್ಯದಲ್ಲಿರುವ ಕಾರ್ಮಿಕರ ನಿರೀಕ್ಷಕರ ಮತ್ತು ಕಾರ್ಮಿಕಾಧಿಕಾರಿಗಳ ಕಚೇರಿಗಳಲ್ಲಿ ಖಾಲಿ ಇರುವ ವಿವಿಧ ಕಾರ್ಮಿಕ ವೃತ್ತ ನಿರೀಕ್ಷಕರು ಹುದ್ದೆಗಳು ಸೇರಿ ಇತರೆ ಸಿಬ್ಬಂದಿ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಿರುವುದು ಸ್ವಾಗತಾರ್ಹ ಈ ಪ್ರಕ್ರಿಯೆಯನ್ನು ಒಂದು ನಿಗದಿತ ಅವಧಿಯೊಳಗೆ ಮುಕ್ತಾಯಗೊಳಿಸಲು ಕ್ರಮವಹಿಸಬೇಕು ಆ ಮೂಲಕ ಮಂಡಳಿ ಕೆಲಸ ಮತ್ತು ಸಾವಿರಾರು ಅರ್ಜಿಗಳ ವಿಲೇವಾರಿಗೆ ಸಹಾಯವಾಗಲಿದೆ.

7. ಕಲ್ಯಾಣ ಮಂಡಳಿಯಲ್ಲಿ ಪ್ರಾತಿನಿಧ್ಯ ಸಿಗಬೇಕು:

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (ಸಿಐಟಿಯು) ಕಳೆದ 20 ವರ್ಷಗಳಿಂದ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ ಸ್ಥಾಪನೆಗಾಗಿ ಮತ್ತು ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿರುವ ಸಂಘಟನೆಯಾಗಿದೆ. ರಾಜ್ಯದ 24 ಜಿಲ್ಲೆಗಳಲ್ಲಿ ಸುಮಾರು 50 ಸಾವಿರ ಕಟ್ಟಡ ನಿರ್ಮಾಣ ಕಾರ್ಮಿಕರನ್ನು ಸದಸ್ಯರನ್ನಾಗಿ ಒಳಗೊಂಡಿರುವ ಮತ್ತು ಕ್ರಮಬದ್ದವಾಗಿ ಕಾರ್ಮಿಕ ಇಲಾಖೆಗೆ ಆನ್ಯೂವೆಲ್ ರಿಟರ್ನ್ಸ್‌ಗಳನ್ನು ಸಲ್ಲಿಸುತ್ತಿರುವ ಮತ್ತು ಕಾರ್ಮಿಕರಲ್ಲಿ ಸಾಮಾಜಿಕ ಕಳಕಳಿ ಮತ್ತು ಜಾಗೃತಿ ಮೂಡಿಸುತ್ತಿರುವ ಸಂಘಟನೆಯಾಗಿದೆ. ಅಖಿಲ ಭಾರತ ಮಟ್ಟದಲ್ಲಿ ಸಂಘಟನೆಗೆ ಸಂಯೋಜನೆ ಗೊಂಡಿದೆ. ಜತೆಗೆ ಆ ಸಂಘಟನೆಯು ಅಖಿಲ ಭಾರತ ಮಟ್ಟದಲ್ಲಿ ಕಾರ್ಮಿಕ ಸಚಿವಾಲಯದಡಿಯಲ್ಲಿರುವ ಕೇಂದ್ರೀಯ ಕಟ್ಟಡ ಕಾರ್ಮಿಕ ಸಲಹಾ ಸಮಿತಿಯಲ್ಲಿ ನಿರಂತರವಾಗಿ ಇಬ್ಬರು (ದೇಬಂಜನ್ ಚಕ್ರವರ್ತಿ ಮತ್ತು ಮಾಲತಿ ಚಿಟ್ಟಿಬಾಬು) ಸದಸ್ಯರು ನಮ್ಮ ಸಂಘಟನೆಯನ್ನು ಪ್ರತಿನಿಧಿಸುತ್ತಾ ಬಂದಿದ್ದಾರೆ.

ಮಂಗಳೂರು – ಉಡುಪಿ:

ಲಾಕ್‌ಡೌನ್‌ನಿಂದ ಸಂತ್ರಸ್ತರಾದ ಕಟ್ಟಡ ಕಾರ್ಮಿಕರಿಗೆ ಘೋಷಣೆ ಮಾಡಿದ ರೂ.5000 ಪರಿಹಾರ ಹಾಗೂ ಕಟ್ಟಡ ಹಾಗೂ ನಿರ್ಮಾಣ ಕಾರ್ಮಿಕರ ಬೇಡಿಕೆಗಳನ್ನು ಜಾರಿಗೊಳಿಸಬೇಕೆಂದು ರಾಜ್ಯಾದ್ಯಂತ ಕಟ್ಟಡ ಹಾಗೂ ನಿರ್ಮಾಣ ಕಾರ್ಮಿಕರು ಸಿಡಬ್ಲ್ಯೂಎಫ್‌ಐ ನೇತೃತ್ವದಲ್ಲಿ ಉಡುಪಿ ಮತ್ತು ಮಂಗಳೂರಿನಲ್ಲಿ ಜುಲೈ 30 ರಂದು ಪ್ರತಿಭಟನೆ ನಡೆಸಿದರು.

ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಸಿಡಬ್ಲ್ಯೂಎಫ್‌ಐ ಉಡುಪಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಡೆದ ಪ್ರತಿಭಟನಾ ಪ್ರದರ್ಶನವನ್ನುದ್ದೇಶಿಸಿ ಮುಖಂಡರಾದ ಬಾಲಕೃಷ್ಣ ಶೆಟ್ಟಿ ಮಾತನಾಡಿದರು. ದೊಡ್ಡ ಸಂಖ್ಯೆಯಲ್ಲಿ ಕಟ್ಟಡ ಕಾರ್ಮಿಕರು ಭಾಗವಹಿಸಿದ್ದರು. ●



ಮಂಗಳೂರಿನ ಕೊರೋನ ಕತೆಗಳು

ಮಂಗಳೂರಿನ ಖಾಸಗಿ AJ ಮೆಡಿಕಲ್ ಕಾಲೇಜಿನಲ್ಲಿ ಸತ್ತು 24 ತಾಸು ದಾಟಿದರೂ ಕೊರೋನ ಪರೀಕ್ಷೆಯ ವರದಿ ಬರದೆ ಅಸಹಾಯಕರಾಗಿದ್ದ ಪಡುಬಿದ್ರೆಯ ಸಾಲಿಯಾನ್ ಕುಟುಂಬದ ಕತೆ ನಿನ್ನೆ ಹೇಳಿದ್ದೆ. ಅದು ಇಂದು ಮತ್ತಷ್ಟು ಭಯಾನಕವಾಗಿ ಮುಕ್ತಾಯಗೊಂಡಿದೆ.

ನಾಡದೋಣಿಯಲ್ಲಿ ಮೀನುಗಾರಿಕೆ ವೃತ್ತಿ ಮಾಡುವ ಪಡುಬಿದ್ರೆಯ 50 ರ ಹರೆಯದ ಬಡವ ಸಾಲಿಯಾನರಿಗೆ ಡೆಂಗ್ಯೂ ಜ್ವರ ಬಾಧಿಸಿತ್ತು. ಬೈಕಂಪಾಡಿಯ ತನ್ನ ಕುಟುಂಬದ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಅವರಿಗೆ ಜ್ವರ ನಿಯಂತ್ರಣ ಮೀರಿತ್ತು. ವೆನ್ ಲಾಕ್ ಆಸ್ಪತ್ರೆಯನ್ನು ಕೋವಿಡ್ ಚಿಕಿತ್ಸೆಗೆ ಮಾತ್ರ ಮೀಸಲಿರಿಸಿ, ಖಾಸಗಿ ಮೆಡಿಕಲ್ ಕಾಲೇಜು ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ಎಂದು ಜಿಲ್ಲಾಡಳಿತ ಪ್ರಕಟನೆ ಹೊರಡಿಸಿದ್ದರಿಂದ, ಸಾಲಿಯಾನ್ ಕುಟುಂಬಸ್ಥರು ಅವರನ್ನು ಕೆ ಎಮ್ ಸಿ ಮೆಡಿಕಲ್ ಕಾಲೇಜು ಆಸ್ಪತ್ರೆಗೆ ಕೊಂಡೊಯ್ದರು. ಅಲ್ಲಿ ಹಾಸಿಗೆಗಳು ಭರ್ತಿಯಾಗಿವೆ ಎಂದು ದಾಖಲಿಸಿಕೊಳ್ಳಲು ನಿರಾಕರಿಸಲಾಯಿತು. ಅದಾಗಲೆ ತೀವ್ರ ಅಸ್ವಸ್ಥರಾಗಿ ಪ್ರಜ್ಞಾಶೂನ್ಯರಾಗಿದ್ದ ಸಾಲಿಯಾನರನ್ನು ಮಂಗಳೂರಿನ ಮತ್ತೊಂದು ಖಾಸಗಿ ಮೆಡಿಕಲ್ ಕಾಲೇಜು A J ಗೆ ಕರೆದೊಯ್ಯಲಾಯಿತು. ಅಲ್ಲಿ ದಾಖಲಿಸಿಕೊಳ್ಳುವಷ್ಟರಲ್ಲಿ ಸಾಲಿಯಾನರ ಉಸಿರು ನಿಂತಿತ್ತು. ಎ ಜೆ ಯ ವೈದ್ಯರು ಅದನ್ನು ಅಧಿಕೃತವಾಗಿ ಘೋಷಿಸಿದರಷ್ಟೆ. ಅಲ್ಲಿಂದ ಬಡ ಮೀನುಗಾರ ಕುಟುಂಬದ ಕರುಣಾಜನಕ ಕತೆ ಆರಂಭಗೊಂಡಿತು.

ಆಸ್ಪತ್ರೆಗೆ ದಾಖಲಿಸುವಾಗಲೆ ಮೃತ ಪಟ್ಟಿದ್ದರೂ, ಮೃತ ದೇಹದ ಕೋವಿಡ್ ಪರೀಕ್ಷೆ ಕಡ್ಡಾಯ ಎಂದು ಮೆಡಿಕಲ್ ಕಾಲೇಜು ಆಡಳಿತ ಸಾಲಿಯಾನರ ಮೃತದೇಹವನ್ನು (ಜುಲೈ 27) ವಶಕ್ಕೆ ಪಡೆದುಕೊಂಡಿತು. ನಂತರ 24 ತಾಸು ವರದಿಯ ಕುರಿತು ಕುಟುಂಬಕ್ಕೆ ಯಾವುದೇ ಮಾಹಿತಿ ನೀಡದೆ ಶವಾಗಾರದ ಬಳಿ ಕಾಯಿಸಲಾಯಿತು. ಆ ಮೇಲೆ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದ ನಂತರ ಸಂಜೆ 6 ಗಂಟೆಗೆ ವರದಿ ಕೋವಿಡ್ ಪಾಸಿಟಿವ್ ಎಂದು ಹೇಳಲಾಯಿತು.

ಕೋವಿಡ್ ವರದಿ ಬಂದ ನಂತರವೂ ಅಂತ್ಯಕ್ರಿಯೆಯ ಕುರಿತು ಸರಿಯಾದ ಮಾಹಿತಿ ದೊರಕದೆ ಸಾಲಿಯಾನ್ ಕುಟುಂಬಸ್ಥರು ರಾತ್ರಿಯವರೆಗೆ ಆಸ್ಪತ್ರೆಯ ಮುಂದೆ ಪರದಾಡಿದರು. ಕೊನೆಗೆ ಬೆಳಿಗ್ಗೆ 8 :30 ಕ್ಕೆ ಅಂತ್ಯಕ್ರಿಯೆ ನಡೆಸುವುದಾಗಿ ಕುಟುಂಬಕ್ಕೆ ತಿಳಿಸಲಾಯಿತು. ಆ ನಡುವೆ ಶವಾಗಾರದ ವೆಚ್ಚ ಎಂದು 2,500 ರೂಪಾಯಿ ಕುಟುಂಬಸ್ಥರಿಂದ ಪಡೆಯಲಾಯಿತು.

ಇಂದು ಬೆಳಿಗ್ಗೆ 8 :00 ಗಂಟೆಗೆ ಎ ಜೆ ಮೆಡಿಕಲ್ ಆಸ್ಪತ್ರೆಗೆ ಕುಟುಂಬಸ್ಥರು ಬಂದು ತಲುಪಿದರೂ ಅವರಿಗೆ ಸರಿಯಾದ ಮಾಹಿತಿ ನೀಡಲು ಅಲ್ಲಿ ಯಾರೂ ಇರಲಿಲ್ಲ. ಆಸ್ಪತ್ರೆಯವರು ಮೃತದೇಹದ ಪರೀಕ್ಷೆ, ಕೋವಿಡ್ ಪರೀಕ್ಷೆ ಎಂದು, 8,500 ರೂಪಾಯ ಬಿಲ್ ಕೊಟ್ಟು ಪಾವತಿಸುವಂತೆ ತಿಳಿಸಿದರು. ಅಂತ್ಯ ಕ್ರಿಯೆಗೆ ಬೇಕಾದ ಕಿಟ್ ಗಳನ್ನು ಖರೀದಿಸುವಂತೆ ಸೂಚಿಸಿದರು. ತಾಲೂಕು ಆಡಳಿತದ ಪ್ರತಿನಿಧಿಗಳು ಬಂದು ಮೃತ ದೇಹವನ್ನು ಅಂತ್ಯಕ್ರಿಯೆಗೆ ಸಾಗಿಸಲಿದ್ದಾರೆ ಎಂದಷ್ಟೆ ಮಾಹಿತಿ ನೀಡಿದರು. ಕುಟುಂಬದ ಸಂಪರ್ಕಕ್ಕೆ ಜಿಲ್ಲಾಡಳಿತದ ಯಾವ ಪ್ರತಿನಿಧಿಗಳೂ ಲಭ್ಯರಿರಲಿಲ್ಲ.

ಸಾಲಿಯಾನರ ಬಡ ಕುಟುಂಬದ ಪರವಾಗಿ ಬಂದಿದ್ದವರು ಈ ಕುರಿತು ನಮಗೆ ಮತ್ತೆ ಮಾಹಿತಿ ನೀಡಿ, ಸಹಾಯ ಮಾಡುವಂತೆ ವಿನಂತಿಸಿದರು. ನಾವು ಸತತ ಆರು ಗಂಟೆಗಳ ಕಾಲ ಜಿಲ್ಲಾಡಳಿತದ ಬೆನ್ನು ಹತ್ತಿದೆವು. ಜಿಲ್ಲಾ ಆರೋಗ್ಯ ಅಧಿಕಾರಿಗೆ ಖಾಸಗಿ ಮೆಡಿಕಲ್ ಆಸ್ಪತ್ರೆಗಳಲ್ಲಿ ಮೃತರಾದ ಕೋವಿಡ್ ಸೋಂಕಿತರ ಮೃತದೇಹದ ವಿಲೇವಾರಿ ನಡೆಸುವುದು, ಅದರ ಖರ್ಚುವೆಚ್ಚ, ಕೋವಿಡ್ ಪರೀಕ್ಷೆ, ಮೃತದೇಹವನ್ನು ಪರೀಕ್ಷಿಸಿದ್ದಕ್ಕೆ ಬಿಲ್ ವಿಧಿಸಿರುವ ಕುರಿತು, ಅದನ್ನು ಯಾರು ಭರಿಸಬೇಕು ಎಂಬುದರ ಕುರಿತು ಸರಿಯಾದ ಸ್ಪಷ್ಟತೆ ಇರಲಿಲ್ಲ. ತಹಶೀಲ್ದಾರ್ ರನ್ನು ಸಂಪರ್ಕಿಸುವಂತೆ ಸೂಚಿಸಿದರು.

"ಮಂಗಳೂರಿನಲ್ಲಿ ನಾಲ್ಕೈದು ಕೋವಿಡ್ ಸಾವುಗಳು ಸಂಭವಿಸಿವೆ, ಕೋವಿಡ್ ಪಾಸಿಟಿವ್ ಮೃತದೇಹಗಳಿಗೆ ಒಂದು ಸ್ಮಶಾನ ಮಾತ್ರ ಮೀಸಲಿಡಲಾಗಿದೆ. ಒಂದು ಮೃತ ದೇಹದ ದಹನಕ್ಕೆ ಮೂರು ತಾಸು ಹಿಡಿಯುವುದರಿಂದ ಒಂದಿಷ್ಟು ತಡವಾಗುತ್ತಿದೆ. ಖರ್ಚು ವೆಚ್ಚವನ್ನು ಜಿಲ್ಲಾಡಳಿತವೇ ಭರಿಸಲಿದೆ" ಎಂದು ತಹಶೀಲ್ದಾರ್ ತಿಳಿಸಿದರು. ಮಧ್ಯಾಹ್ನ ಕಳೆದರೂ ಅಂತ್ಯ ಸಂಸ್ಕಾರದ ಕುರಿತು ಮಾಹಿತಿ ನೀಡಲು ಯಾರೂ ಲಭ್ಯರಾಗದೆ ಮೃತ ಸಾಲಿಯಾನ್ ಕಡೆಯವರು ಆಸ್ಪತ್ರೆಯ ಶವಾಗಾರದ ಮುಂದೆ ಅಕ್ಷರಶ ಗತಿ ಇಲ್ಲದವರಂತೆ ನಿಂತು ಬಿಟ್ಟರು. ಮತ್ತೆ ನಾವು ಅಧಿಕಾರಿಗಳ ಬೆನ್ನು ಹತ್ತಿದ ಮೇಲೆ ಹೆಣ ಕೊಂಡೊಯ್ಯುವ ಓರ್ವ ಆಂಬುಲೆನ್ಸ್ ಚಾಲಕನ ನಂಬರ್ ಮಾತ್ರ ತಹಶೀಲ್ದಾರ್ ಕಡೆಯಿಂದ ದೊರಕಿತು. ಎಲ್ಲಾ ಒದ್ದಾಟದ ನಂತರ ಸಂಜೆ ಆರು ಗಂಟೆಗೆ ಅಂತ್ಯ ಸಂಸ್ಕಾರ ನಡೆಸುವುದಾಗಿ ತಿಳಿಸಲಾಯಿತು.

ಈ ನಡುವೆ ಖಾಸಗಿ ಮೆಡಿಕಲ್ ಕಾಲೇಜಿನವರು "ಇನ್ನೇನು ಹೆಣ ಕೊಂಡಯ್ಯಲು ಆಂಬುಲೆನ್ಸ್ ಬರುತ್ತದೆ. ಅದರ ಚಾಲಕ ಸಿಬ್ಬಂದಿಗಳಿಗೆ, ಹೆಣ ಸುಡುವವರಿಗೆ ಒಟ್ಟು 6 ಪಿಪಿಇ ಕಿಟ್ ಖರೀದಿಸಬೇಕಿದೆ. ತಲಾ 1,500 ರ ರಂತೆ, ಒಟ್ಟು 9 ಸಾವಿರ ರೂಪಾಯಿ ಪಾವತಿಸಿ" ಎಂದು ಆದೇಶಿಸಿಸಿದರು. ಈ ಕುರಿತು ನಾನು ತಹಶೀಲ್ದಾರರ ಗಮನ ಸೆಳೆದಾಗ "ಇದೇನು ಹೊಸ ಕತೆ, ಮೆಡಿಕಲ್ ಕಾಲೇಜಿನವರು ಉಚಿತವಾಗಿ ಪಿಪಿಇ ಕಿಟ್ ಒದಗಿದಬೇಕಲ್ಲಾ!" ಎಂದು ಮಾತು ತೇಲಿಸಿದರೆ ಹೊರತು ಸಮಸ್ಯೆ ಬಗೆ ಹರಿಸಲಿಲ್ಲ.

ಇದು ದಕ್ಷಿಣ ಕನ್ನಡ ಜಿಲ್ಲೆಯ ಬಡವರ, ಜನಸಾಮಾನ್ಯರ ಕೊರೋನಾ ಕಾಲದ ಕತೆ. ಜಿಲ್ಲಾಡಳಿತದ ಉಚಿತ ಚಿಕಿತ್ಸೆಯ ಮಾತು ನಂಬಿ ಸಾಲಿಯಾನರನ್ನು ಬದುಕಿಸಲು ಖಾಸಗಿ ಮೆಡಿಕಲ್ ಕಾಲೇಜಿಗೆ ಕರೆದೊಯ್ದ ತಪ್ಪಿಗೆ, ಯಾವ ಚಿಕಿತ್ಸೆಯ ಅಗತ್ಯವೂ ಇಲ್ಲದ ಮೃತ ದೇಹಕ್ಕೆ ಸುಮಾರು 20 ಸಾವಿರ ರೂಪಾಯಿಗೂ ಹೆಚ್ಚು ಹಣವನ್ನು ಕಳೆದುಕೊಳ್ಳಬೇಕಾಯ್ತು. (ಬಡ ಮೀನುಗಾರ ಕುಟುಂಬಕ್ಕೆ ಇದು ದೊಡ್ಡ ಮೊತ್ತ) ಅದಕ್ಕಿಂತ ಹೆಚ್ಚಾಗಿ ಸಾವಿನ ನೋವಿನ ಜೊತೆಗೆ 48 ಗಂಟೆಗಳ ಕಾಲ ಘೋರ ನರಕಯಾತನೆ ಅನುಭವಿಸಬೇಕಾಯ್ತು.

ದಕ್ಷಿಣ ಕನ್ನಡ ಜಿಲ್ಲಾಡಳಿತಕ್ಕೆ ಮೆಡಿಕಲ್ ಕಾಲೇಜು ಆಸ್ಪತ್ರೆಗೆ ತೆರಳಿದ ಬಡವರಿಗೆ ಉಚಿತ ಚಿಕಿತ್ಸೆಕೊಡಲಾಗದಿದ್ದರೂ, ಉಚಿತ ಅಂತ್ಯಕ್ರಿಯೆ ನಡೆಸಲಾಗುವುದಿಲ್ಲ ಎಂಬುದು ನಾಚಿಕೆಗೇಡು. ಅದೂ ಅಲ್ಲದೆ ಐನೂರು, ಆರು ನೂರು ರೂಪಾಯಿ ಬಾಳುವ ಪಿಪಿಇ ಕಿಟ್ ಗಳನ್ನು ಖಾಸಗಿ ಮೆಡಿಕಲ್ ಕಾಲೇಜುಗಳು 1,500 ರೂಪಾಯಿಯಂತೆ ಮಾರಾಟ ಮಾಡುವುದು, ಮೃತ ಪಟ್ಟವರ ಕಡೆಯವರಿಗೆ ಕಡ್ಡಾಯವಾಗಿ ಆರೇಳು ಕಿಟ್ ಖರೀದಿಸುವಂತೆ ಮಾಡುವುದು ಸಾವಿನ ಮನೆಯಲ್ಲಿ ಗಳ ಹಿರಿದಂತೆ. ಈ ರೀತಿ ಉಣ್ಣಲು ಕೂತ ಜಿಲ್ಲಾಡಳಿತ, ಜನಪ್ರತಿನಿಧಿಗಳು, ಖಾಸಗಿ ಆಸ್ಪತ್ರೆಯ ಆಡಳಿತಗಳು ಮೃತ ಸಾಲಿಯಾನರ ಬಡ, ಅನಾಥ ಹೆಂಡತಿ ಮಕ್ಕಳ ಮುಖವನ್ನೊಮ್ಮೆ ನೋಡಿ ಬರಲಿ. ಆ ಮೇಲೆ ಕನ್ನಡಿಯಲ್ಲಿ ತಮ್ಮದೇ ಮುಖಗಳನ್ನೊಮ್ಮೆ ನೋಡಿಕೊಳ್ಳಲಿ.

-ಮುನೀರ್ ಕಾಟಿಪಳ್ಳ

ಕೋವಿಡ್ 19 ಸಂತ್ರಸ್ತ ಕಲಾವಿದರಿಗೆ ನೆರವಿಗೆ ಸಮುದಾಯ ಮನವಿ

ಕೋವಿಡ್-19 ಮಹಾರೋಗ ನಾಡನ್ನು ಕಾಡುತ್ತಿರುವ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ಜಾರಿ ಮಾಡಬೇಕಾಗಿ ಬಂದ 75 ದಿನಗಳ ಲಾಕ್ಡೌನ್ ಸಮಾಜದ ಉಳಿದೆಲ್ಲಾ ಶ್ರಮಿಕರಂತೆ ಸಾಂಸ್ಕೃತಿಕ ಲೋಕದ ಕಲಾವಿದರನ್ನೂ ಆತಂಕಕ್ಕೆ ದೂಡಿದೆ. ರಾಜ್ಯ ಸರ್ಕಾರವು ನೆರವು ನೀಡಲು ಮುಂದಾಗಿದ್ದು ಪ್ರತಿಯೊಬ್ಬ ಕಲಾವಿದರಿಗೂ ರೂ.2000/ ಗಳನ್ನು ಮಂಜೂರು ಮಾಡಿರುವುದು ಸ್ವಾಗತಾರ್ಹವಾದದ್ದು. ಆದರೆ ಸರ್ಕಾರದ ಮಾಹಿತಿಯ ಪ್ರಕಾರವೇ ಕೇವಲ 17,000 ಜನರಿಗೆ ಮಾತ್ರ ಆ ಹಣವನ್ನು ವಿತರಿಸಲಾಗಿದೆ ಎಂಬ ವಿಷಯ ನಿರಾಸೆಯನ್ನು ಉಂಟುಮಾಡಿದೆ. ದಿನದಿಂದ ದಿನಕ್ಕೆ ಮಹಾರೋಗವು ವ್ಯಾಪಕವಾಗಿ ಹಬ್ಬುತ್ತಿರುವ ಹಿನ್ನೆಲೆಯಲ್ಲಿ ಆ ಮೊತ್ತ ಯಾವುದಕ್ಕೂ ಸಾಕಾಗದೇ ಬದುಕು ನಡೆಸುವುದೇ ಕ್ಲಷ್ಟ ಎಂಬ ಸ್ಥಿತಿಗೆ ಕಲಾ ಪ್ರಪಂಚದ ಜನ ಬಂದಿದ್ದಾರೆ ಎಂಬ ವಾಸ್ತವವನ್ನು ಕನ್ನಡ ಸಂಸ್ಕೃತಿ ಇಲಾಖೆಯು ಸಹಾನುಭೂತಿಯಿಂದ ಗಮನಿಸಬೇಕೆಂದು ಕೋರುತ್ತೇವೆ. ಆದ್ದರಿಂದ ಅರ್ಜಿ ಸಲ್ಲಿಸುವ ಎಲ್ಲಾ ಕಲಾವಿದರಿಗೂ ತಿಂಗಳಿಗೆ ರೂ.2000/- ದಂತೆ ಕನಿಷ್ಠ ಆರು ತಿಂಗಳಿಗೆ ನೆರವು ನೀಡಬೇಕೆಂದು ಸಮುದಾಯ ಕರ್ನಾಟಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಿದೆ.

ಮೆಗಾ ಯೋಜನೆಗಳಿಗೆ ಅನುದಾನ ಬೇಡ

ವಿವಿಧ ಕಲಾ ಪ್ರಾಕಾರಗಳ ಪ್ರದರ್ಶನಕ್ಕಾಗಿ ಕಲಾತಂಡ ಅಥವಾ ಕಲಾವಿದರಿಗೆ ಇಲಾಖೆಯ ಅನುದಾನ ನೀಡುವ ಪರಿಪಾಟ ಬಹಳ ವರ್ಷಗಳಿಂದ ಪ್ರಚಲಿತ ಇದೆ. ಸಾಮಾಜಿಕ ನ್ಯಾಯ ಹಾಗೂ ಪ್ರಾದೇಶಿಕ ಅಸಮಾನತೆಯನ್ನು ತೊಡೆದುಹಾಕುವ ದೃಷ್ಟಿಯಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿರುವ ಕಲಾತಂಡ ಅಥವಾ ಕಲಾವಿದರಿಗೂ ಸರಿಸಮಾನವಾಗಿ ಅನುದಾನ ನೀಡುವುದು ಸರಿಯಾದ ಹಾಗೂ ನ್ಯಾಯಯುತವಾದ ಮಾರ್ಗವಾಗುತ್ತದೆ ಎಂದು ಸಮುದಾಯ ಕರ್ನಾಟಕ ಅಭಿಪ್ರಾಯ ಪಟ್ಟಿದೆ. ಈಗಿನ ಕೋವಿಡ್-19 ಮತ್ತು ಲಾಕ್ಡೌನ್‌ನಂತಹ ವಿಷಮ ಸನ್ನಿವೇಶದಲ್ಲಿ ಕಲಾವಿದರ, ಮುಖ್ಯವಾಗಿ ಕಲಾ ಪ್ರದರ್ಶನಗಳನ್ನೇ ತಮ್ಮ ಬದುಕನ್ನಾಗಿ ಮಾಡಿಕೊಂಡಿರುವ ಕಲಾವಿದರ ಬದುಕು ತೀರಾ ಕಷ್ಟದಲ್ಲಿದ್ದಾರೆ.

ಮಹಾರೋಗವು ನಿರೀಕ್ಷೆಯನ್ನೂ ಮೀರಿ ದಿನದಿಂದ ದಿನಕ್ಕೆ ಬಿಗಡಾಯಿಸುತ್ತಿರುವ ಹಿನ್ನೆಲೆಯಲ್ಲಿ ಕಲಾವಿದರು ಕಂಗಾಲಾಗಿ ದಿನನಿತ್ಯದ ಅಗತ್ಯಗಳಿಗಾಗಿ ಪರದಾಡಬೇಕಾದ ಪರಿಸ್ಥಿತಿ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಾಡಿನ ಸಾಂಸ್ಕೃತಿಕ ಸ್ವಾಸ್ಥ್ಯವನ್ನು ಕಾಪಾಡಬೇಕಾದ ಗುರುತರ ಹೊಣೆಗಾರಿಕೆಯನ್ನು ಹೊಂದಿದ್ದು, ಕಲಾವಿದರ ಬದುಕು ತೀರಾ ಹದಗೆಡದಂತೆ ರಕ್ಷಿಸಬೇಕಾದ ಜವಾಬ್ದಾರಿಯನ್ನೂ ಹೊರಬೇಕಾಗಿದೆ. ಇಲಾಖೆಯ ಸರ್ಕಾರದಿಂದ ಪಡೆಯುವ ಅನುದಾನವನ್ನು ರಾಜ್ಯದ ಎಲ್ಲಾ ಕಲಾವಿದರಿಗೂ ಸಮಾನವಾಗಿ ವಿತರಿಸಬೇಕಾದ ಅನಿವಾರ್ಯತೆಯನ್ನು ಎದುರಿಸುತ್ತಿದೆ.


ಈ ಹಿನ್ನೆಲೆಯಲ್ಲಿ ಯಾವುದೇ ಒಂದು ಪ್ರದೇಶಕ್ಕೋ ಅಥವಾ ಒಂದೆರಡು ನಗರಕ್ಕೋ ಮೆಗಾ ಯೋಜನೆಗಳ ಹೆಸರಿನಲ್ಲಿ ಅನುದಾನ ನೀಡುವುದು ಸಾಂಸ್ಕೃತಿಕ ರಂಗದಲ್ಲಿ ಅಸಮಾಧಾನವನ್ನು ಹುಟ್ಟುಹಾಕುವ ಸಾಧ್ಯತೆ ಇದೆ. ಆದಕಾರಣ, ನಾಡು ಮತ್ತು ದೇಶ ಎದುರಿಸುತ್ತಿರುವ ಅಸಾಧಾರಣ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಅನುದಾನವನ್ನು ಸಮಾನವಾಗಿ ಪ್ರಾದೇಶಿಕವಾಗಿ ವಿತರಿಸುವ ಮೂಲಕ ಕಲಾಪ್ರಪಂಚದ ಉಳಿವಿಗೆ ಕ್ರಮ ಕೈಗೊಳ್ಳಬೇಕೆಂದು ಸಹ ಸಮುದಾಯ ಕರ್ನಾಟಕ ಮುಖ್ಯ ಮಂತ್ರಿಗಳಿಗೆ ಕೊಟ್ಟ ಮನವಿಯಲ್ಲಿ ಕೋರಿದೆ.

ಮಾಸಾಶನ ಕಲಾವಿದರ ಸಂಕಟ

ಕೋವಿಡ್-19ರ ಸಂಕಷ್ಟಕ್ಕೆ ಸಿಲುಕಿ ನಲುಗುತ್ತಿರುವವರಲ್ಲಿ ಕಲಾ ಪ್ರಪಂಚದ ಎಷ್ಟೋ ಮಂದಿ ಇದ್ದಾರೆ. ಕಳೆದ 5 ತಿಂಗಳಿನಿಂದ ಯಾವುದೇ ರೀತಿಯ ಕಲಾಪ್ರಾಕಾರಗಳ ಪ್ರದರ್ಶನ, ಪ್ರಸ್ತುತಿಗಳಿಲ್ಲದೆಯೇ ಅದನ್ನೇ ನಂಬಿ ಬದುಕುತ್ತಿರುವ ರಂಗಕರ್ಮಿಗಳು, ಚಿತ್ರಕಲಾವಿದರು, ಸಂಗೀತಗಾರರು, ಮುಂತಾದವರು ಕಂಗಾಲಾಗಿದ್ದಾರೆ. ಇಂತಹ ಗೋಳಿನ ಸಮಯದಲ್ಲಿ ಮಾಸಾಶನಗಳನ್ನು ಪಡೆಯುತ್ತಿರುವವರಿಗೆ ಮತ್ತೊಮ್ಮೆ ದಾಖಲೆಗಳನ್ನು ಕೊಡಲು ಇಲಾಖೆಯು ಕೇಳಿದೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಕ್ರಮವು ಇಲಾಖೆಯ ಕಾರ್ಯವೈಖರಿಯ ಬಗ್ಗೆ ಸಾರ್ವಜನಿಕರಲ್ಲಿ ತಪ್ಪು ಅಭಿಪ್ರಾಯವನ್ನು ಮೂಡಿಸುತ್ತದೆ. ಅಲ್ಲದೇ ಮಾಸಾಶನ ಪಡೆಯುವವರಲ್ಲಿ ಹಿರಿಯ ವಯಸ್ಸಿನ ಎಷ್ಟೋ ಜನರಿದ್ದಾರೆ. ಸುರಕ್ಷೆಯ ದೃಷ್ಟಿಯಿಂದ ಮನೆಯಲ್ಲಿರಿ ಎಂದು ಹೇಳುತ್ತಿರುವಾಗಲೇ ದಾಖಲೆಗಳನ್ನೂ ತನ್ನಿ ಎನ್ನುವುದು ಎಷ್ಟು ಸರಿ. ಇದರ ಬಗ್ಗೆ ದೇ ಮನವಿಯಲ್ಲಿ ಸಮುದಾಯ ಕರ್ನಾಟಕ ತನ್ನ ಅಸಮಾಧಾನ ವ್ಯಕ್ತಪಡಿಸಿದೆ. ಕಲಾವಿದರು ಈ ಹಿಂದೆ ಸಲ್ಲಿಸಿರುವ ದಾಖಲೆಗಳನ್ನು ಇಲಾಖೆಯಲ್ಲೇ ಹುಡುಕುವ ಮೂಲಕ ಕಲಾವಿದರಿಗೆ ಆಗುತ್ತಿರುವ ತೊಂದರೆಯನ್ನು ನಿಲ್ಲಿಸಬೇಕೆಂದು ಕೋರಿದೆ.

ದೆಹಲಿಯಲ್ಲಿರುವ ಕನ್ನಡ ಅಧ್ಯಯನ ಪೀಠ:

ದೆಹಲಿಯ ಜೆ.ಎನ್.ಯು ನಲ್ಲಿರುವ ಕನ್ನಡ ಅಧ್ಯಯನ ಪೀಠವನ್ನು ಉಳಿಸಿಕೊಳ್ಳಬೇಕು. ಹಾಗೂ ಅದನ್ನು ಮುಂದುವರೆಸಲು ಅಗತ್ಯವಾದ ಕ್ರಮ ಕೈಗೊಳ್ಳಬೇಕು. ಕನ್ನಡ ಭಾಷೆ,ಸಂಸ್ಕೃತಿ, ಗಳ ಆಳ ಅಗಲಗಳ ಅರಿವು ಅಧ್ಯಯನ ಇರುವ ಸೂಕ್ತ ವ್ಯಕ್ತಿಗಳು ಅದನ್ನು ಮುನ್ನಡೆಸಬೇಕೆಂದು ಸಹ ಸಮುದಾಯ ಕರ್ನಾಟಕ ಮುಖ್ಯ ಮಂತ್ರಿಗಳಿಗೆ ಕೊಟ್ಟ ಮನವಿಯಲ್ಲಿ ಒತ್ತಾಯಿಸಿದೆ.





ಜಮ್ಮು ಮತ್ತು ಕಾಶ್ಮೀರದ ಗತಿ ಇಡೀ ದೇಶಕ್ಕೂ ಕಾದಿದೆ...

ಪ್ರಕಾಶ ಕಾರಟ್



ಜಮ್ಮು ಮತ್ತು ಕಾಶ್ಮೀರವನ್ನು ಕಳಚಿ ಹಾಕಿದ ಕ್ರಮದ ಕರಾಳ ವಾರ್ಷಿಕದ ಸಂದರ್ಭದಲ್ಲಿ ಈ ರಾಜ್ಯವನ್ನು ಒಂದು ವಿಶಾಲ ಸೆರೆಮನೆಯಾಗಿ ಪರಿವರ್ತಿಸಿದ ಘಾತಕ ಕೃತ್ಯವನ್ನು ನಾವು ನೆನಪಿಸಿ ಕೊಳ್ಳಬೇಕಾಗಿದೆ. ಜಮ್ಮು ಮತ್ತು ಕಾಶ್ಮೀರದ ಮೇಲೆ ಒಂದು ವರ್ಷದ ಹಿಂದೆ ಆರಂಭಿಸಿದ ದಾಳಿಯನ್ನು ಪ್ರತ್ಯೇಕವಾಗಿ ಕಾಣಬಾರದು. ಇದು ಮೋದಿ ಸರಕಾರದ ಎರಡನೇ ಅವಧಿಯಲ್ಲಿ ಆರಂಭಿಸಿರುವ ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಒಕ್ಕೂಟ ತತ್ವದ ಮೇಲಿನ ಮತ್ತಷ್ಟು ತೀವ್ರ ದಾಳಿಗಳ ಮುನ್ಸೂಚನೆಯಾಗಿತ್ತು. ಜಮ್ಮು ಮತ್ತು ಕಾಶ್ಮೀರದಲ್ಲಿ ಪಿಎಸ್‌ಎ ಬಳಕೆಯು ಸರ್ವಾಧಿಕಾರಶಾಹಿ ಆಳ್ವಿಕೆಯನ್ನು ಗಟ್ಟಿಗೊಳಿಸಿರುವ ಯು.ಎ.ಪಿ.ಎ. ಮತ್ತು ರಾಜದ್ರೋಹದ ಕಾಯ್ದೆಯ ವ್ಯಾಪಕ ಬಳಕೆಯ ಪೂರ್ವಭಾಯೆಯಾಗಿತ್ತು.

ಈ ಆಗಸ್ಟ್ 5 ರಂದು ಸಂಸತ್ತು ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನವನ್ನು ನೀಡುವ ಸಂವಿಧಾನದ ಕಲಮು 370ನ್ನು ಅನೂರ್ಜಿತಗೊಳಿಸುವ ಕುಖ್ಯಾತ ಕ್ರಮಗಳನ್ನು ಕೈಗೊಂಡು ಒಂದು ವರ್ಷವಾಗುತ್ತಿದೆ. ಅಂದು ತಂದ ಹಾನಿಕಾರಕ ಶಾಸನ ಅ ರಾಜ್ಯವನ್ನು ಹರಿದು ಹಂಚಿ ಎರಡು ಕೇಂದ್ರಾಡಳಿತ ಪ್ರದೇಶಗಳನ್ನು ಸೃಷ್ಟಿಸಿತು–ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್.

ಕಾಶ್ಮೀರದ ಜನತೆಗೆ ಅವರು ಭಾರತವನ್ನು ಸೇರುವ ಸಮಯದಲ್ಲಿ, ಸ್ವಾಯತ್ತತೆಯ ವಚನವನ್ನು ನೀಡಲಾಗಿತ್ತು. ಅದರ ಫಲಿತಾಂಶವಾಗಿ ಸಂವಿಧಾನದಲ್ಲಿ ವಿಶೇಷ ಸ್ಥಾನಮಾನವನ್ನು ಕೊಡಲಾಯಿತು. ಹಿಂದುತ್ವ ಆಳರಸರು ಒಂದೇ ಏಟಿನಲ್ಲಿ ಆ ವಚನವನ್ನು ಭಂಗ ಮಾಡಿದರು. ಅಷ್ಟೇ ಅಲ್ಲ, ಜಮ್ಮು ಮತ್ತು ಕಾಶ್ಮೀರದ ಜನತೆಯು ಮೇಲೆ ಅವಮಾನವನ್ನೂ ಹೇರಲು ಭಾರತೀಯ ಒಕ್ಕೂಟದ ಒಂದು ರಾಜ್ಯವೆಂಬ ಅವರ ಅಸ್ತಿತ್ವವನ್ನು ಕೂಡ ಇಲ್ಲವಾಗಿಸಲಾಯಿತು.

ಈ ಕಾನೂನುಬಾಹಿರ ಸಂವಿಧಾನ ತಿದ್ದುಪಡಿಯನ್ನು ಮತ್ತು ಶಾಸನವನ್ನು ಗೃಹಮಂತ್ರಿ ಅಮಿತ್ ಷಾ ಸಂಸತ್ತಿನಲ್ಲಿ ಪಾಸು ಮಾಡಿಕೊಂಡು ಭಾರತದ ಏಕೈಕ ಮುಸ್ಲಿಂ ಬಹುಳ ರಾಜ್ಯವನ್ನು ಮುಗಿಸಿ ಬಿಟ್ಟ ವಿಜಯೋತ್ಸಾಹದ ಪ್ರದರ್ಶನ ನೀಡಿದರು. ಈ ಕರಾಳ ವಾರ್ಷಿಕದ ಸಂದರ್ಭದಲ್ಲಿ ಈ ರಾಜ್ಯವನ್ನು ಒಂದು ವಿಶಾಲ ಸೆರೆಮನೆಯಾಗಿ ಪರಿವರ್ತಿಸಿದ ಘಾತಕ ಕೃತ್ಯವನ್ನು ನಾವು ನೆನಪಿಸಿಕೊಳ್ಳಬೇಕಾಗಿದೆ. ಸುಮಾರು 40,000 ಪಡೆಗಳನ್ನು ತಂದು ನಿಲ್ಲಿಸಲಾಯಿತು, ರಾಜ್ಯವ್ಯಾಪಿ ಕರ್ಫ್ಯೂ ಹೇರಲಾಯಿತು, ಎಲ್ಲ ಸಂಪರ್ಕಗಳನ್ನು (ಮೊಬೈಲ್ ಮತ್ತು ಟೆಲಿವಿಷನ್ ಕೂಡ) ಕಡಿದು ಹಾಕಲಾಯಿತು, ಮನೆಗಳಿಂದ ಹೊರಗೆ ಹೋಗುವುದನ್ನು ನಿಷೇಧಿಸಲಾಯಿತು ಮತ್ತು ಮಾಧ್ಯಮಗಳನ್ನು ಮುಚ್ಚಲಾಯಿತು. ಬಿಜೆಪಿಯನ್ನು ಬಿಟ್ಟು ಬೇರೆಲ್ಲ ರಾಜಕೀಯ ಪಕ್ಷಗಳ ಮುಖಂಡರು ಮತ್ತು ಕಾರ್ಯಕರ್ತರನ್ನು, ಮತ್ತು ಇತರ ಸಾರ್ವಜನಿಕ ವ್ಯಕ್ತಿಗಳನ್ನು, ಒಂದೋ ಕರಾಳ ಸಾರ್ವಜನಿಕ ಸುರಕ್ಷಿತತೆ ಕಾಯ್ದೆ(ಪಿಎಸ್‌ಎ) ಅಡಿಯಲ್ಲಿ ಬಂಧಿಸಲಾಯಿತು, ಇಲ್ಲವೇ ಅವರವರ ಮನೆಗಳಲ್ಲಿ ಯಾವುದೇ ಲಿಖಿತ ಆದೇಶಗಳಿಲ್ಲದೆ ಸ್ಥಾನಬದ್ಧತೆಯಲ್ಲಿ ಇಡಲಾಯಿತು.

ಪ್ರಜಾಪ್ರಭುತ್ವದ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ಗಂಟಲು ಹಿಸುಕಿ ಹಾಕುವಲ್ಲಿ ಮೋದಿ ಆಳ್ವಿಕೆ ಇಲ್ಲಿ ಹೊಸ ದಾಖಲೆಗಳನ್ನೇ ನಿರ್ಮಿಸಿದೆ. ತಿಂಗಳಾನುಗಟ್ಟಲೆ ಇಂಟರ್‌ನೆಟ್ ಮುಚ್ಚಲಾಯಿತು. ಒಂದು ವರ್ಷದ ನಂತರವೂ ಕಾಶ್ಮೀರ 2ಜಿ ಜಾಲವನ್ನಷ್ಟೇ ಹೊಂದಿದೆ, ದೇಶದ ಉಳಿದ ಭಾಗಗಳಂತೆ 4ಜಿ ಜಾಲವನ್ನು ಹೊಂದಿಲ್ಲ. ಇಡೀ ರಾಜ್ಯವನ್ನು ಮುಚ್ಚಿ ಹಾಕಿದ್ದು ಅಲ್ಲಿನ ಆರ್ಥವ್ಯವಸ್ಥೆ ಮತ್ತು ವಾಣಿಜ್ಯವನ್ನು ವಿಪರೀತವಾಗಿ ಬಾಧಿಸಿದೆ. ಮಹಾಸೋಂಕಿನಿಂದಾಗಿ ಹಾಕಿದ ಎರಡನೇ ಲಾಕ್‌ಡೌನ್‌ನೊಂದಿಗೆ ರೈತರು ಮತ್ತು ಸಾಮಾನ್ಯ ಜನರ ಜೀವನೋಪಾಯಗಳ ಮೇಲೆ ಕುಠಾರಾಘಾತ ಬಂತು. ಕೆಲವು ಮುಖಂಡರನ್ನು ಮತ್ತು ಕಾರ್ಯಕರ್ತರನ್ನು ಬಿಡುಗಡೆ ಮಾಡಿದ್ದರೂ, ಬಹಳಷ್ಟು ಮಂದಿ ಜೈಲುಗಳಲ್ಲಿದ್ದಾರೆ, ಇಲ್ಲವೇ ಮೆಹಬೂಬ ಮುಫ್ತಿಯವರಂತೆ ಸ್ಥಾನಬದ್ಧತೆಯಲ್ಲಿದ್ದಾರೆ. ಬಿಡುಗಡೆಯಾದವರಲ್ಲಿ ಕೆಲವರು ಕೂಡ ಗೃಹಬಂಧನದಲ್ಲಿ ಇದ್ದಾರೆ.

ಮಹಾಸೋಂಕಿನ ಲಾಕ್‌ಡೌನನ್ನು ಜಮ್ಮು ಮತ್ತು ಕಾಶ್ಮೀರವನ್ನು ಒಂದು ಕೇಂದ್ರಾಡಳಿತ ಪ್ರದೇಶವಾಗಿ ಪುನರ್ರೂಪಿಸುವ ಕ್ರಮಗಳನ್ನು ತರಲು ಬಳಸಲಾಗಿದೆ. ಕುಂಠಿತ ವಿಧಾನಸಭೆಯ ಕ್ಷೇತ್ರಗಳ ಪುನರ್ವಿಂಗಡಣೆಯ ಕೆಲಸವನ್ನು ಆರಂಭಿಸಲಾಗಿದೆ; ಒಂದು ಹೊಸ ನಿವಾಸಿ ಧೋರಣೆಯನ್ನು ಜಾರಿಗೊಳಿಸಲಾಗಿದೆ, ಇದು ಜಮ್ಮು ಮತ್ತು ಕಾಶ್ಮೀರಕ್ಕೆ ಹೊರಗಿನಿಂದ ಬಂದವರಿಗೆ ನೌಕರಿ ಮತ್ತು ಜಮೀನು ಖರೀದಿಗೆ ಅನುವು ಮಾಡಿ ಕೊಡುವ ನಿವಾಸಿ ಸ್ಥಾನಮಾನವನ್ನು ಕೊಡುತ್ತದೆ. ಇದು ಕಾಶ್ಮೀರ ಕಣಿವೆಯ ಜನಸಂಖ್ಯಾ ಸಂಯೋಜನೆಯನ್ನು ಬದಲಿಸುವ ಒಂದು ಪರಿಯೋಜನೆಯ ಆರಂಭ. ಒಂದು ಮಾಧ್ಯಮ ಧೋರಣೆಯನ್ನು ಪ್ರಕಟಿಸಲಾಗಿದೆ. ಇದು ಮಾಧ್ಯಮಗಳನ್ನು ಬೆದರಿಸುವ ಮತ್ತು ಪತ್ರಕರ್ತರ ಬಾಯಿ ಮುಚ್ಚಿಸುವ ನಗ್ನ ಪ್ರಯತ್ನವಲ್ಲದೇ ಬೇರೇನೂ ಅಲ್ಲ.



ಆಗಸ್ಟ್ 5 ನ್ನು ಅಯೋಧ್ಯೆಯಲ್ಲಿ ರಾಮ ಮಂದಿರದ "ಭೂಮಿಪೂಜೆ'ಯ ದಿನವಾಗಿ ಉದ್ದೇಶಪೂರ್ವಕವಾಗಿ ಆರಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರದ ಧ್ವಂಸ ಮತ್ತು ಬಾಬ್ರಿ ಮಸೀದಿಯ ಸ್ಥಳದಲ್ಲಿ ಮಂದಿರದ ನಿರ್ಮಾಣ –ಇವೆರಡೂ ಹಿಂದುತ್ವ ಶಕ್ತಿಗಳ ಮೂಲ ಅಜೆಂಡಾದ ಭಾಗ.

ಚಿತ್ರಕೃಪೆ: thepoliticalfix.substack.com/p/the-political-fix-article-370-gone

ಜಮ್ಮು ಮತ್ತು ಕಾಶ್ಮೀರದ ಮೇಲೆ ಒಂದು ವರ್ಷದ ಹಿಂದೆ ಆರಂಭಿಸಿದ ದಾಳಿಯನ್ನು ಪ್ರತ್ಯೇಕವಾಗಿ ಕಾಣಬಾರದು. ಇದು ಮೋದಿ ಸರಕಾರದ ಎರಡನೇ ಅವಧಿಯಲ್ಲಿ ಆರಂಭಿಸಿರುವ ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಒಕ್ಕೂಟ ತತ್ವದ ಮೇಲಿನ ಮತ್ತಷ್ಟು ತೀವ್ರ ದಾಳಿಗಳ ಮುನ್ಸೂಚನೆಯಾಗಿತ್ತು. ಜಮ್ಮು ಮತ್ತು ಕಾಶ್ಮೀರವನ್ನು ಒಂದು ರಾಜ್ಯವಾಗಿ ಕಳಚಿ ಹಾಕಿದ ಮೇಲೆ ಕೈಗೊಂಡ ಮುಂದಿನ ಶಾಸನಾತ್ಮಕ ಕ್ರಮ ಎಂದರೆ ಸಂಸತ್ತಿನಲ್ಲಿ ಸಿಎಎ ಅಂಗೀಕಾರ ಮತ್ತು ಸಿಎಎ–ಎನ್‌ಆರ್‌ಸಿ ಪ್ರತಿಭಟನೆಗಳ ವಿರುದ್ಧ ದೇಶದೆಲ್ಲೆಡೆಗಳಲ್ಲಿ ದಮನವನ್ನು ಹರಿಯ ಬಿಟ್ಟದ್ದು. ಸರ್ವಾಧಿಕಾರಶಾಹಿ ಆಳ್ವಿಕೆಯನ್ನು ಯು.ಎ.ಪಿ.ಎ. ಮತ್ತು ರಾಜದ್ರೋಹದ ಕಾಯ್ದೆಯ ವ್ಯಾಪಕ ಬಳಕೆ ಗಟ್ಟಿಗೊಳಿಸಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಸಾರ್ವಜನಿಕ ಸುರಕ್ಷಿತತೆಯ ಕಾಯ್ದೆಯ ಬಳಕೆ ಇದರ ಪೂರ್ವಭಾಯೆಯಾಗಿತ್ತು. ಪತ್ರಕರ್ತರ ಮೇಲೆ ಕೇಸುಗಳನ್ನು ಹಾಕುವುದು ಜಮ್ಮು ಮತ್ತು ಕಾಶ್ಮೀರದಲ್ಲಿ ವ್ಯವಸ್ಥಿತವಾಗಿ ನಡೆಸಿದುದನ್ನು ಅನುಸರಿಸಿ ಬಂತು. ಅಲ್ಲಿನ ಇಬ್ಬರು ಪತ್ರಕರ್ತರು ಈಗಲೂ ಯುಎಪಿಎ ಅಡಿಯ;ಲ್ಲಿ ಜೈಲಿನಲ್ಲಿದ್ದಾರೆ.

ಎಚ್ಚರಿಕೆ ಸ್ಪಷ್ಟವಾಗಿದೆ– ಭಾರತದ ಉಳಿದ ಭಾಗಗಳಲ್ಲಿ ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು, ರಾಜ್ಯಗಳ ಹಕ್ಕುಗಳು ಮತ್ತು ಜಾತ್ಯತೀತತೆ ಇವೆಲ್ಲಕ್ಕೂ ಜಮ್ಮು ಮತ್ತು ಕಾಶ್ಮೀರದ ಗತಿ ಕಾದಿದೆ.

ಆಗಸ್ಟ್ 5ನ್ನು ಅಯೋಧ್ಯೆಯಲ್ಲಿ ರಾಮ ಮಂದಿರದ "ಭೂಮಿಪೂಜೆ'ಯ ದಿನವಾಗಿ ಉದ್ದೇಶಪೂರ್ವಕವಾಗಿ ಆರಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರದ ಧ್ವಂಸ ಮತ್ತು ಬಾಬ್ರಿ ಮಸೀದಿಯ ಸ್ಥಳದಲ್ಲಿ ಮಂದಿರದ ನಿರ್ಮಾಣ –ಇವೆರಡೂ ಹಿಂದುತ್ವ ಶಕ್ತಿಗಳ ಮೂಲ ಅಜೆಂಡಾದ ಭಾಗ. ಪ್ರಧಾನ ಮಂತ್ರಿ ಒಂದು ಮತೀಯ ಪೂಜಾಸ್ಥಳದ ಅಡಿಗಲ್ಲು ಹಾಕುವ ಸಮಾರಂಭದಲ್ಲಿ ಮೊದಲ ಇಟ್ಟಿಗೆ ಇಡಲು ಹೋಗುತ್ತಿದ್ದಾರೆ, ಆಮೂಲಕ ಪ್ರಭುತ್ವದ ಜಾತ್ಯತೀತ ನೀತಿಯನ್ನು ಉಲ್ಲಂಘಿಸುತ್ತಿದ್ದಾರೆ. ಸುಪ್ರಿಂ ಕೋರ್ಟಿನ ಸಂದಿಗ್ಧ ನೆಲೆಯ ತೀರ್ಪಿನಿಂದಾಗಿ ಅಯೋಧ್ಯೆಯಲ್ಲಿ ಮಂದಿರ ನಿರ್ಮಾಣವನ್ನು ಕಾನೂನುಬದ್ಧ ಗೊಳಿಸಲಾಗಿದೆ. ಮಸೀದಿಯ ಧ್ವಂಸವನ್ನು " ಕಾನೂನಿನ ಒಂದು ಗಂಭೀರ ಉಲ್ಲಂಘನೆ' ಎಂದ ನ್ಯಾಯಾಲಯ, ಬಹುಸಂಖ್ಯಾತರ ನಂಬಿಕೆಗೆ ಮಣೆ ಹಾಕಿ ಮಂದಿರ ನಿರ್ಮಾಣಕ್ಕೆ ಮಂಜೂರಾತಿ ನೀಡಿದೆ. ಅದೇ ಸುಪ್ರಿಂ ಕೋರ್ಟಿಗೆ ಕಲಮು 370ನ್ನು ಕಾನೂನುಬಾಹಿರವಾಗಿ ಕೈಯಾಡಿಸಿ ಒಂದು ರಾಜ್ಯವನ್ನು ಕಳಚಿ ಹಾಕಿದ ಸಂವಿಧಾನಿಕ ತಿದ್ದುಪಡಿಯ ಮೇಲೆ ಒಂದು ತೀರ್ಪು ನೀಡಲು ಸಮಯವೇ ಸಿಕ್ಕಿಲ್ಲ. ಇದು ನ್ಯಾಯಾಂಗ ನುಣಿಚೆಕೆಯ ಇನ್ನೊಂದು ಉದಾಹರಣೆ.

ಮೇಲೆರಗಿ ಬರುತ್ತಿರುವ ಹಿಂದುತ್ವ ಶಕ್ತಿಗಳನ್ನು ನೇರವಾಗಿ ಎದುರಿಸಿ ಹಿಮ್ಮೆಟ್ಟಿಸಬೇಕಾಗಿದೆ. ಜಮ್ಮು ಮತ್ತು ಕಾಶ್ಮೀರದ ವಿಚಾರದಲ್ಲಿ ಹಲವು ಜಾತ್ಯತೀತ ಪ್ರತಿಪಕ್ಷಗಳು ಜಮ್ಮು ಮತ್ತು ಕಾಶ್ಮೀರಕ್ಕೆ ಮತ್ತೆ ವಿಶೇಷ ಸ್ಥಾನಮಾನವನ್ನು ಮತ್ತು ರಾಜ್ಯದ ದರ್ಜೆಯನ್ನು ಕೊಡಬೇಕು ಎಂದು ಒಂದು ದೃಢ ನಿಲುವು ತಳೆಯಬೇಕೆಂಬ ಇಚ್ಛೆಯನ್ನು ಹೊಂದಿಲ್ಲ. ಅವರು ಈ ವಿಷಯವನ್ನು ರಾಜಕೀಯ ಸೆರೆಯಾಳುಗಳ ಬಿಡುಗಡೆ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ಮರುಸ್ಥಾಪನೆಗಷ್ಟೇ ಇಳಿಸ ಬಯಸುತ್ತಾರೆ. ಇದು ಒಂದು ರಾಜಿ ಮಾಡಿಕೊಳ್ಳುವ ನಿಲುವು. ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಒಕ್ಕೂಟತತ್ವಕ್ಕೆ ಹೋರಾಟ ನಡೆಸಬೇಕಾದರೆ ಒಂದು ಸ್ಪಷ್ಟ ನಿಲುವು ಅಗತ್ಯ–ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನದೊಂದಿಗೆ ರಾಜ್ಯದ ದರ್ಜೆಯನ್ನು ಮತ್ತೆ ಕೊಡಬೇಕು. ಹಾಗೆ ಮಾಡದಿದ್ದರೆ ಒಂದು ಜಾತ್ಯತೀತ ಪ್ರಜಾಪ್ರಭುತ್ವವಾಗಿ ಭಾರತ ಮತ್ತಷ್ಟು ಕುಗ್ಗುತ್ತದೆ.

ಬಿಜೆಪಿ ಆಡಳಿತದ ಒಂದು ವರ್ಷ

ಅಮಾನವೀಯ ಕ್ರೌರ್ಯವನ್ನು ಮೆರೆದ ಸರ್ವಾಧಿಕಾರಿ ಕಾರ್ಪೊರೇಟ್ ಪರ ಆಡಳಿತ

ಯೆಡಿಯೂರಪ್ಪ ಅವರ ನಾಯಕತ್ವದ ಬಿಜೆಪಿ ಸರಕಾರ ಹೇಗೆ ಹೇಗೋ ಅಧಿಕಾರಕ್ಕೆ ಬಂದು ಹೇಗೆ ಹೇಗೋ ಒಂದು ವರ್ಷ ಮುಗಿಸಿದೆ. ಮೊದಲ ವಾರ್ಷಿಕದಂದೇ ಸರಕಾರಕ್ಕೆ ಮತ್ತೆ ಅಪಾಯ ಎದುರಾಗಿದೆ. ಆದರೆ ಮುಖ್ಯಮಂತ್ರಿಗಳು ಮೊದಲ ವರ್ಷ ಮುಗಿಸಿದ್ದೇ ದೊಡ್ಡ ಸಾಧನೆ ಎಂಬಂತೆ ಸಂಭ್ರಮಾಚರಣೆ ಮಾಡಿದ್ದಾರೆ. ರಾಜ್ಯದ ಕೊವಿಡ್ ಸೋಂಕು ಪರಿಸ್ಥಿತಿ ದಿನೇ ಹದಗೆಡುತ್ತಿರುವ ಹಿನ್ನೆಲೆಯಲ್ಲಿ ಇದು 'ಸೂತಕದ ಮನೆಯಲ್ಲಿ ಸಂಭ್ರಮ'ದಂತೆ ಕಾಣುತ್ತಿದೆ. ಎಲ್ಲ ದಿನಪತ್ರಿಕೆಗಳಲ್ಲಿ 4–5 ಇಡೀ ಪುಟದ ಜಾಹೀರಾತುಗಳನ್ನು ಪ್ರಕಟಿಸಿದ್ದಾರೆ. 'ಸವಾಲುಗಳ ಒಂದು ವರ್ಷ, ಪರಿಹಾರದ ಸ್ಪರ್ಶ' ಎಂಬ 115 ಪುಟದ ಪುಸ್ತಕ ಪ್ರಕಟಿಸಿದ್ದಾರೆ. ಮೂರು ಪ್ರಾಕೃತಿಕ ವಿಪತ್ತುಗಳನ್ನು ಎದುರಿಸಿ ತಮ್ಮ ಸರಕಾರ ಮಾಡಿದ ಭಾರಿ ಸಾಧನೆಗಳನ್ನು ಬಣ್ಣಿಸಿದ ಅವರ ಮಾಧ್ಯಮ ಸಲಹೆಗಾರ ಸಂಪಾದಿಸಿದ ಪುಸ್ತಕಕ್ಕೆ 'ಪುಟಕ್ಕಿಟ್ಟ ಚಿನ್ನ' ಎಂದು ಹೆಸರಿಡಲಾಗಿದೆ. ಆದರೆ ಅವರ 'ಚಿನ್ನ' ಬಡವರ ಮಡಿಲಿಗೆ ಬಿದ್ದಿಲ್ಲ, ಅದನ್ನು ಉಳ್ಳವರ ಕಾರ್ಪೊರೆಟ್ ಗಳ ಮಡಿಲಿಗೆ ಹಾಕಿದ್ದೇ ಸರಕಾರದ ಸಾಧನೆ. ಬರಗಾಲ, ನೆರೆ, ಕೊವಿಡ್ ನ ಪ್ರಾಕೃತಿಕ ವಿಪತ್ತುಗಳ ಪರಿಹಾರ ಬಹುಸಂಖ್ಯಾತ ಬಾಧಿತರನ್ನು ಬಡವರನ್ನು ಸ್ಪರ್ಶಿಸಲೂ ಇಲ್ಲ. ಬದಲಿಗೆ ಇದು ಕೊವಿಡ್ ಬಿಕ್ಕಟ್ಟಿನ ದುರುಪಯೋಗ ಪಡೆದು ರೈತರ, ಕಾರ್ಮಿಕರ, ಬಡವರ ಇದ್ದ ಬದ್ದ ಹಕ್ಕುಗಳನ್ನು ಮತ್ತು ಕಾನೂನಿನ ರಕ್ಷಣೆಗಳನ್ನು ಕಿತ್ತು ಹಾಕುವ ಅನಮಾನವೀಯ ಕ್ರೌರ್ಯ ಪ್ರದರ್ಶಿಸಿದ ಕಾರ್ಪೊರೇಟ್–ಪರ ಆಡಳಿತವಾಗಿತ್ತು ಎಂದು ಈ ಲೇಖನ ಅಂಕೆ ಸಂಖ್ಯೆಗಳೊಂದಿಗೆ ವಾದಿಸುತ್ತದೆ.

ಯು. ಬಸವರಾಜ್

ಕುದುರೆ ವ್ಯಾಪಾರದ ಮೂಲಕ ಅಕ್ರಮ ಹಾದಿಯಲ್ಲಿ ಅಧಿಕಾರಕ್ಕೆ ಬಂದ ಯೆಡಿಯೂರಪ್ಪನವರ ನೇತೃತ್ವದ ಬಿಜೆಪಿ ರಾಜ್ಯ ಸರಕಾರ ಜುಲೈ 26, 2020 ಕ್ಕೆ ಒಂದು ವರ್ಷವನ್ನು ಪೂರೈಸಿದೆ. ಅತ್ಯಂತ ಸಂಕಷ್ಟದ ಅವಧಿಯಲ್ಲೂ ಉತ್ತಮ ಆಡಳಿತ ಮತ್ತು ನಿರ್ವಹಣೆ ಮಾಡಿದ್ದೇನೆಂದು ಅವರು ಹೇಳಿಕೊಂಡಿದ್ದಾರೆ. ಈ ಸರಕಾರದಿಂದ ಲಾಭ ಪಡೆದವರು ಮತ್ತು ಅವರ ಮಾಧ್ಯಮಗಳು ಅವರಿಗೆ ಶಹಬಾಷ್ ಗಿರಿಯನ್ನು ಕೊಡಬಹುದಾಗಿದೆ.

ಆದರೆ, ವಾಸ್ತವಿಕವಾಗಿ ಯೆಡಿಯೂರಪ್ಪನವರ ಈ ಒಂದು ವರ್ಷದ ದುರಾಡಳಿತ ಕರ್ನಾಟಕದ ದುಡಿಯುವ ಜನತೆಯ ಮಟ್ಟಿಗೆ ಅತ್ಯಂತ ಅಮಾನವೀಯವಾದ ಮತ್ತು ನಿರ್ಧಯಿಯಾದ, ಕ್ರೌರ್ಯವನ್ನು ಮೆರೆದ ಸರ್ವಾಧಿಕಾರಿ ಮತ್ತು ಲೂಟಿಕೋರ ಕಾರ್ಪೊರೇಟ್ ಕಂಪನಿಗಳ ಪರವಾದ ಆಡಳಿತವಾಗಿತ್ತು ಎಂದು ವಿಶ್ಲೇಷಿಸ ಬಹುದಾಗಿದೆ.

ಅಮಾನವೀಯ ಆಡಳಿತ

ಯೆಡಿಯೂರಪ್ಪನವರ ಈ ಒಂದು ವರ್ಷದ ಆಡಳಿತದ ಅವಧಿಯಲ್ಲಿ ಕರ್ನಾಟಕ ರಾಜ್ಯವು ಮೂರು ಪ್ರಕೃತಿ ವಿಕೋಪಗಳು ಕಂಡಿತು.

ಇವರು ಪ್ರಮಾಣ ವಚನ ಸ್ವೀಕರಿಸಿದ ಸಂದರ್ಭದಲ್ಲಿ ಕರ್ನಾಟಕವನ್ನು ಬರಗಾಲ ಆವರಿಸುತ್ತಿತ್ತು. ಮುಂದೆ ಮಳೆಯಿಲ್ಲದ ಈ ಬರಗಾಲವು ರಾಜ್ಯದ 25 ಜಿಲ್ಲೆಗಳ 119 ತಾಲೂಕುಗಳಿಗೆ ವ್ಯಾಪಿಸಿತು. ಇದರಿಂದ, ರಾಜ್ಯದ ಗ್ರಾಮೀಣ ಪ್ರದೇಶವು ಬಹುತೇಕ ಬೆಳೆ ಹಾಗೂ ಉದ್ಯೋಗ ಹಾನಿಯಿಂದ ನಲುಗುವಂತಾಯಿತು. ಇದು ಸುಮಾರು 20 ಸಾವಿರ ಕೋಟಿ ರೂಗಳಷ್ಟು ಬೆಳೆ ಹಾಗೂ ಉದ್ಯೋಗಹಾನಿಯನ್ನು ಉಂಟು ಮಾಡಿತ್ತು.

ಅದೇ ಸಂದರ್ಭದಲ್ಲಿ ರಾಜ್ಯದ ಉತ್ತರ ಹಾಗೂ ಕರಾವಳಿ ಪ್ರದೇಶವು, ಮತ್ತೊಂದು ಪ್ರಕೃತಿ ವಿಕೋಪಕ್ಕೆ, ಅತಿವೃಷ್ಟಿಗೆ ಮತ್ತು ಪ್ರವಾಹಕ್ಕೆ ತುತ್ತಾಯಿತು. ನೂರಕ್ಕೂ ಹೆಚ್ಚು ಜನರ ಹಾಗೂ ಸಾವಿರಾರು ಜಾನುವಾರುಗಳ ಪ್ರಾಣಹಾನಿಯನ್ನು ಉಂಟು ಮಾಡಿತು. ದೊಡ್ಡ ಪ್ರಮಾಣದಲ್ಲಿ ಆಸ್ತಿಪಾಸ್ತಿಗಳು ಹಾನಿಗೀಡಾದವು, ದಶಲಕ್ಷಾಂತರ ಕುಟುಂಬಗಳು ತೊಂದರೆಗೀಡಾದವು. ಒಟ್ಟಾರೆ ಇದರಿಂದಾಗಿ ಸುಮಾರು 50 ಸಾವಿರ ಕೋಟಿ ರೂ.ಗಳಿಗೂ ಅಧಿಕ ಹಾನಿಯನ್ನು ಈ ಪ್ರದೇಶ ಅನುಭವಿಸಿತು. ಸಾಮಾನ್ಯವಾಗಿ ಹಾನಿಯನ್ನು ಕಡಿಮೆ ಅಂದಾಜು ಮಾಡುವ ರಾಜ್ಯ ಸರಕಾರಕ್ಕೂ, ಅದನ್ನು 35 ಸಾವಿರ ಕೋಟಿ ರೂ.ಗೂ ಅಧಿಕ ಹಾನಿಯೆಂದು ಲೆಕ್ಕಿಸಬೇಕಾಗಿ ಬಂತು.

ಈ ಅತೀವೃಷ್ಟಿ ಹಾಗೂ ಅನಾವೃಷ್ಟಿಯ ಅವಧಿಯಲ್ಲಿ ರಾಜ್ಯದ ಗ್ರಾಮೀಣ ಸಮುದಾಯದ ಬಹು ಸಂಖ್ಯಾತ ಬಡ ರೈತರು, ಕೃಷಿ ಕೂಲಿಕಾರರು ಮತ್ತು ಕಸುಬುದಾರರು ಉದ್ಯೋಗಹೀನರಾದರು. ಇವರ ಸಂಖ್ಯೆಯು 80 ಲಕ್ಷ ಕುಟುಂಬಗಳಷ್ಟಾಗಿತ್ತು.

ಕೋವಿಡ್ – 19 ವೈರಾಣು ಮಗದೊಂದು ಪ್ರಕೃತಿ ವಿಕೋಪವಾಗಿ ರಾಜ್ಯವನ್ನು ಕಾಡುತ್ತಿದೆ. ಕಳೆದ ಫೆಬ್ರವರಿ ತಿಂಗಳಿಂದ ಇದು ಇಡೀ ರಾಜ್ಯವನ್ನೇ ಅಂದರೆ 6.5 ಕೋಟಿ ಜನತೆಯನ್ನು ಬಾಧಿಸಿದೆ. ಗ್ರಾಮೀಣ ಹಾಗೂ ನಗರದ ಎಲ್ಲಾ ದುಡಿಯುವ ಜನರು ಮತ್ತು ಹಿರಿಯ ನಾಗರೀಕರು ಅತ್ಯಂತ ತೀವ್ರ ಸಂಕಷ್ಟ ಅನುಭವಿಸಿದ್ದಾರೆ. ಇದು ಮತ್ತು ಇದನ್ನು ನಿಯಂತ್ರಿಸಲು ಕೇಂದ್ರ ಮತ್ತು ರಾಜ್ಯ ಸರಕಾರಗಳು ಯಾವುದೇ ಪೂರ್ವಭಾವಿ ಯೋಜನೆಯಿಲ್ಲದೇ, ಏಕಾಏಕಿ ಜಾರಿಗೆ ತಂದ ಲಾಕ್ ಡೌನ್ ಗಳಿಂದಾಗಿ ಕೋಟ್ಯಾಂತರ ಕುಟುಂಬಗಳು ಕಳೆದ 4–5 ತಿಂಗಳು ಉದ್ಯೋಗ ಹಾನಿಯನ್ನು ಮತ್ತು ಜೀವ ಭಯವನ್ನು ಅನುಭವಿಸಿದವು.

ಇದರಿಂದ, ಈ ಕುಟುಂಬಗಳು ಒಟ್ಟಾರೆ ಹಲವು ದಶ ಸಾವಿರ ಕೋಟಿ ರೂ.ಗಳ ನಷ್ಟ ಹೊಂದಿದವು. ದಿನನಿತ್ಯದ ದುಡಿಮೆಯನ್ನೇ ನಂಬಿಕೊಂಡು ಜೀವಿಸುತ್ತಿದ್ದ ರಾಜ್ಯದ ಶೇ.85 ರಷ್ಟು ಕುಟುಂಬಗಳು ಹೊಟ್ಟೆ ಪಡಿಗಾಗಿ ಪರದಾಡಿದವು ಮತ್ತು ಇದ್ದ ಬದ್ದ ಆಸ್ತಿಗಳನ್ನು ಮಾರಾಟ ಮಾಡಿಕೊಂಡು, ದುಬಾರಿ ಬಡ್ಡಿಗೆ ಕೈ ಒಡ್ಡಿ ಬದುಕಲು ಯತ್ನಿಸಿದವು. ಆಸ್ತಿಗಳಿಲ್ಲದ ಮತ್ತು ಸಾಲ ದೊರೆಯದ ಕುಟುಂಬಗಳು ಹಸಿವಿನ ಸಂಕಟವನ್ನು ಅನು ಭವಿಸಿವೆ. ಆರೋಗ್ಯ ಹಾನಿ ಮಾಡಿಕೊಂಡಿವೆ. ಆತ್ಮಹತ್ಯೆಗೂ ಕೆಲವರು ಮುಂದಾಗಿದ್ದಾರೆ.


ಇಂತಹ ಒಂದು ಗಂಭೀರವಾದ ಪ್ರಾಕೃತಿಕ ವಿಕೋಪಗಳನ್ನು ನಿಭಾಯಿಸಲು ಗಂಭೀರ ಇಚ್ಛಾಶಕ್ತಿಯನ್ನು ಹೊಂದಿರದ ಯೆಡಿಯೂರಪ್ಪನವರ ಸರಕಾರದ ನೀತಿಗಳು, ಸ್ಪಷ್ಟವಾಗಿ ಮಾನವೀಯ ವಾದವುಗಳಾಗಿರಲಿಲ್ಲ ಎಂಬುದನ್ನು ಅವರ ಸರಕಾರದ ಅಂಕಿ ಅಂಶಗಳೇ ಬಯಲುಗೊಳಿಸುತ್ತವೆ.

ಈ ಕೆಲ ಉದಾಹರಣೆಗಳನ್ನು ಗಮನಿಸಬಹುದಾಗಿದೆ.

1) ಒಟ್ಟಾರೆ ಈ ಮೂರು ಪ್ರಕೃತಿ ವಿಕೋಪಗಳಲ್ಲಿ ಗ್ರಾಮೀಣ ಹಾಗೂ ನಗರದ ದುಡಿಯುವ ಜನತೆ ತೀವ್ರ ರೀತಿಯ ಉದ್ಯೋಗಹಾನಿ ಅನುಭವಿಸಿದರೆ, ಯೆಡಿಯೂರಪ್ಪರವರ ಸರಕಾರ ನಗರದ ಮಿಲಿಯಾಂತರ ಬಡಕುಟುಂಬಗಳಿಗೆ ಉದ್ಯೋಗವನ್ನೇ ನೀಡಲಿಲ್ಲ ಅಥವಾ ನಿರುದ್ಯೋಗ ಪರಿಹಾರವನ್ನು ಒದಗಿಸಲಿಲ್ಲ. ಅದೇ ರೀತಿ ಗ್ರಾಮೀಣ ಪ್ರದೇಶದ ಸುಮಾರು 80 ಲಕ್ಷ ಕುಟುಂಬಗಳಷ್ಟಿರುವ ಬಡ ರೈತರು, ಕೂಲಿಕಾರರು, ಕಸುಬುದಾರರುಗಳಲ್ಲಿ ಬಹುಸಂಖ್ಯಾತರು ಉದ್ಯೋಗ ಖಾತ್ರಿಯಡಿ ಉದ್ಯೋಗವನ್ನು ಪಡೆಯಲಾಗಲಿಲ್ಲ. ಗ್ರಾಮೀಣ ಕುಟುಂಬಗಳಿಗೆ 150 ದಿನಗಳ ಕಾಲ ಉದ್ಯೋಗ ಒದಗಿಸುವ ಭರವಸೆಯನ್ನು ಸರಕಾರ ಪ್ರಕಟಿಸಿದ್ದರೂ, ಅದು ನೀಡಿರುವುದು ಕೇವಲ 26 ಲಕ್ಷ ಕುಟುಂಬಗಳಿಗೆ ಅಂದರೆ ಒಟ್ಟು ಗ್ರಾಮೀಣ ಬಡ ಕುಟುಂಬಗಳ ಶೇ.30 ಕುಟುಂಬಗಳಿಗೆ ಮಾತ್ರವೇ ಆಗಿದೆ. ಹಾಗೇ ಉದ್ಯೋಗ ನೀಡಿದ್ದು ಕೇವಲ 12.05 ಕೋಟಿ ಮಾನವ ದಿನಗಳಷ್ಟೆ ಅಂದರೆ, ಉದ್ಯೋಗ ಪಡೆದ ತಲಾ ಕುಟುಂಬಕ್ಕೆ ಕೇವಲ ಸರಾಸರಿ 45 ದಿನಗಳ ? ಅಂದರೇ ತಲಾ ವ್ಯಕ್ತಿಗೆ ಕೇವಲ 22 ದಿನಗಳಷ್ಟೇ ಆಗಿದೆ. ತಾನೇ ಘೋಷಿಸಿದಂತೆ ಉದ್ಯೋಗ ನೀಡಿದ ಕುಟುಂಬಗಳಿಗೂ 150 ದಿನಗಳ ಕಾಲ ಉದ್ಯೋಗವನ್ನು ಇಂತಹ ಸಂಕಷ್ಟದಲ್ಲೂ ನೀಡಲಿಲ್ಲ.
2) ರಾಜ್ಯದ ಜನತೆ ಬರಗಾಲ ಹಾಗೂ ಅತಿವೃಷ್ಠಿ ಹಾಗೂ ಪ್ರವಾಹದಿಂದಾಗಿ ಸುಮಾರು 70 ಸಾವಿರ ಕೋಟಿ ರೂಗಳಿಗೂ ಹೆಚ್ಚು ಹಾನಿ ಅನುಭವಿಸಿದರೇ ರಾಜ್ಯ ಸರಕಾರ ತನ್ನ ಪಾಲಾಗಿ ನೀಡಿದುದು ಕೇವಲ 4 ಸಾವಿರ ಕೋಟಿ ರೂ.ಗಳು ಮಾತ್ರವೇ ಆಗಿದೆ. ಇದು ಒಟ್ಟು ಹಾನಿಯ ಶೇ.10 ಕ್ಕಿಂತಲೂ ಕಡಿಮೆಯಾಗಿದೆ. ಹೋಗಲಿ, ಇಂತಹ ಕುಟುಂಬಗಳ ಸಾಲದ ಪರಿಸ್ಥಿತಿಯನ್ನು ನಿರ್ವಹಿಸಲು ಸಹ ಕ್ರಮಗಳನ್ನು ವಹಿಸಲಿಲ್ಲ ಬದಲಿಗೆ ಅವರನ್ನು ಸಾಲದ ಬಾಧೆಗೆ ದೂಡಲಾಗಿದೆ.
3) ಕೋವಿಡ್ ಸಂದರ್ಭದಲ್ಲೂ ಸರಕಾರ ನೀಡಿದ ಪರಿಹಾರವೂ ಕೂಡಾ ಕೇವಲ 1,500 ಕೋಟಿ ರೂಗಳು ಮಾತ್ರವೇ ಆಗಿದೆ.


ಈ ಮೂರು ಪ್ರಾಕೃತಿಕ ವಿಕೋಪದ ಸಂದರ್ಭದಲ್ಲಿ ಲಕ್ಷಾಂತರ ಕೋಟಿ ರೂಗಳಷ್ಟು ಅಪಾರ ಹಾನಿಯನ್ನು ರಾಜ್ಯದ ಜನತೆ ಅನುಭವಿಸಿದರೂ, ಸರಕಾರ ಪರಿಹಾರ ಪ್ರಕಟಿಸಿದ್ದು ಕೇವಲ 5,500 ಕೋಟಿ ರೂಗಳಷ್ಟು ಮಾತ್ರ! ನಿಜವಾಗಲೂ ಜನತೆಗೆ ದೊರೆತಿರುವುದು ಇನ್ನೂ ಕಡಿಮೆಯಾಗಿದೆ.

ಪುಟ 12 ನೋಡಿ





ಕೃಪೆ: ಪಿ. ಮಹಮ್ಮದ್, ವಾ.ಭಾ.



ಆಗಸ್ಟ್ 20 ರಿಂದ 26

ಮೋದಿ ಸರಕಾರದ ಜನ-ವಿರೋಧಿ ನಡೆಗಳ ವಿರುದ್ಧ ದೇಶವ್ಯಾಪಿ ಪ್ರತಿಭಟನಾ ವಾರಾಚರಣೆ

ಕಾರ್ಮಿಕರು, ರೈತರು, ಕೃಷಿಕೂಲಿಕಾರರ ಆಗಸ್ಟ್ 9 ಪ್ರತಿಭಟನೆಗೆ ಬೆಂಬಲ-ಸಿಪಿಐ(ಎಂ) ಕೇಂದ್ರ ಸಮಿತಿ ಕರೆ



ದೇಶದಲ್ಲಿ ಕೊವಿಡ್-19 ಬಾಧಿತರ ಸಂಖ್ಯೆ ತೀವ್ರವಾಗಿ ಏರುತ್ತಿರುವಾಗ ಅದನ್ನು ಎದುರಿಸುವ ಗಂಭೀರ ಪ್ರಯತ್ನಗಳನ್ನು ನಡೆಸದ ಮೋದಿ ಸರಕಾರ, ಅದಕ್ಕೆ ಬದಲಾಗಿ ಒಂದೆಡೆಯಲ್ಲಿ ದೇಶದ ಸಂಪತ್ತನ್ನು, ಈ ಏಳು ದಶಕಗಳಲ್ಲಿ ಜನತೆ ಮತ್ತು ದೇಶ ಕಟ್ಟಿ ಬೆಳೆಸಿದ ರಾಷ್ಟ್ರೀಯ ಆಸ್ತಿಗಳನ್ನು ಖಾಸಗೀ ಲೂಟಿಗೆ ತೆರೆದಿಡುತ್ತಿದೆ, ಇನ್ನೊಂದೆಡೆಯಲ್ಲಿ ದುಡಿಯುವ ಜನಗಳು ಪಡೆದುಕೊಂಡಿರುವ ಕಾನೂನಾತ್ಮಕ ಹಕ್ಕುಗಳ, ಅಧಿಕಾರಗಳ ಮೇಲೆ ದಾಳಿ ನಡೆಸುತ್ತಿದೆ. ಇದು ಈ ಸರಕಾರದ ನಿಜವಾದ ಚಾರಿತ್ರ್ಯವನ್ನು ಎತ್ತಿ ತೋರುತ್ತಿದೆ. ಇದರ ವಿರುದ್ಧ ದೇಶಾದ್ಯಂತ ಪ್ರತಿಭಟನೆಯನ್ನು ಗಟ್ಟಿಗೊಳಿಸಲು ಸಿಪಿಐ(ಎಂ) ಕೇಂದ್ರ ಸಮಿತಿ ನಿರ್ಧರಿಸಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿಯವರು ಜುಲೈ 27ರಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ. ಸಿಪಿಐ(ಎಂ) ಕೇಂದ್ರ ಸಮಿತಿ ಈ ಎರಡು ಕರೆಗಳನ್ನು ನೀಡಿದೆ:

1. ಹದಿನಾರು ಬೇಡಿಕೆಗಳ ಮೇಲೆ ಆಗಸ್ಟ್ 20ರಿಂದ 26 ರವರೆಗೆ ದೇಶಾದ್ಯಂತ ಗ್ರಾಮಗಳಿಂದ ಹಿಡಿದು ರಾಜ್ಯಗಳ ರಾಜಧಾನಿಗಳ ವರೆಗೆ ಎಲ್ಲ ಹಂತಗಳಲ್ಲಿ ಪ್ರತಿಭಟನಾ ವಾರಾಚರಣೆ .
2. ಆಗಸ್ಟ್ 9ರಂದು ಕಾರ್ಮಿಕರ, ರೈತರ ಮತ್ತು ಕೃಷಿಕೂಲಿಕಾರರ ಸಂಘಟನೆಗಳು ನಡೆಸಲು ನಿರ್ಧರಿಸಿರುವ ಅಖಿಲ ಭಾರತ ಪ್ರತಿಭಟನೆಗೆ ಬೆಂಬಲ ಮತ್ತು ಸೌಹಾರ್ದ.

ಕೊವಿಡ್-19 ರಿಂದಾಗಿ ಉಂಟಾಗಿರುವ ಪರಿಸ್ಥಿತಿಗಳಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿಯ ಸಭೆ ಜುಲೈ 25 ಮತ್ತು 26ರಂದು ಮೊತ್ತ ಮೊದಲ ಬಾರಿಗೆ ಆನ್ ಲೈನಿನಲ್ಲಿ ನಡೆದಿದೆ. ಈ ಸಭೆಯ ನಂತರ ಪ್ರಕಟಿಸಿರುವ ಕೇಂದ್ರ ಸಮಿತಿಯ ಹೇಳಿಕೆಯನ್ನು ಈ ಕೆಳಗೆ ಕೊಡಲಾಗಿದೆ:

ಕೊವಿಡ್-19 ಮಹಾಸೋಂಕಿನ ತೀವ್ರ ಏರಿಕೆ

ಪ್ರಧಾನ ಮಂತ್ರಿಗಳು ಇದ್ದಕ್ಕಿದ್ದಂತೆ, ಯಾವುದೇ ಸಿದ್ಧತೆಯಿಲ್ಲದೆ, ಅಯೋಜಿತವಾಗಿ, ಏಕಪಕ್ಷೀಯವಾಗಿ ಘೋಷಿಸಿದ ಲಾಕ್‌ಡೌನ್ ದೇಶದಲ್ಲಿ ಈ ಮಹಾಸೋಂಕನ್ನು ತೀವ್ರವಾಗಿ ಹರಡುವುದನ್ನು ತಡೆಯುವಲ್ಲಿ ಪರಿಣಾಮಕಾರಿಯಾಗಿಲ್ಲ ಎಂಬುದು ಸಾಬೀತಾಗಿದೆ. ಸಂಪೂರ್ಣ ಲಾಕ್‌ಡೌನಿನ ದೀರ್ಘ ಅವಧಿಯನ್ನು ಆರೋಗ್ಯ ಸೌಕರ್ಯಗಳನ್ನು ಹೆಚ್ಚಿಸಲು, ಆರೋಗ್ಯ ಕಾರ್ಯಕರ್ತರಿಗೆ ಪಿ.ಪಿ.ಇ.ಗಳನ್ನು ಒದಗಿಸಲು, ವ್ಯಾಪಕ ತಪಾಸಣೆ, ಸೋಂಕಿತರನ್ನು ಪ್ರತ್ಯೇಕಗೊಳಿಸುವುದು, ಸಂಪರ್ಕಗಳ ಪತ್ತೆ ಮತ್ತು ಕ್ವಾರಂಟೈನ್‌ನ ವೈಜ್ಞಾನಿಕ ವಿಧಾನಗಳನ್ನು ಅನುಸರಿಸಲು ಬಳಸುವಲ್ಲಿ ಕೇಂದ್ರ ಸರಕಾರ ವಿಫಲವಾಗಿದೆ. ಮಹಾಭಾರತದೊಂದಿಗೆ ಹೋಲಿಸಿಕೊಂಡು 21ದಿನಗಳೊಳಗೆ ವಿಜಯ ಗಳಿಸುತ್ತೇವೆ ಎನ್ನುವ ಪ್ರಧಾನಮಂತ್ರಿಗಳ ಜನಮರುಳು ಬಡಾಯಿ ಸಂಪೂರ್ಣ ಭ್ರಮೆ ಎಂದು ಸಾಬೀತಾಯಿತು.

ಬದಲಿಗೆ ಈ ಲಾಕ್‌ಡೌನ್ ಬಹುಪಾಲು ಜನಗಳ ಮೇಲೆ, ಅದರಲ್ಲೂ ದಲಿತರು, ಬುಡಕಟ್ಟು ಜನಗಳು, ಮಹಿಳೆಯರು ಮತ್ತು ವಿಕಲಾಂಗರ ಮೇಲೆ ಹೇಳತೀರದ ಸಂಕಷ್ಟಗಳನ್ನು ಹೇರಿದೆ. ವ್ಯಾಪಕ ಪ್ರಮಾಣದಲ್ಲಿ ಉದ್ಯೋಗ ನಷ್ಟಗಳನ್ನು ಉಂಟು ಮಾಡಿ, ಜೀವನೋಪಾಯಗಳನ್ನು ಹಾಳುಗೆಡವಿ ಹಸಿವು ಮತ್ತು ಸಂಕಟಗಳನ್ನು ಹೆಚ್ಚಿಸಿದೆ. ಆದರೂ ಕೇಂದ್ರ ಸರಕಾರ ತಕ್ಷಣವೇ ನಗದು ವರ್ಗಾವಣೆ ಮತ್ತು ಆಹಾರಧಾನ್ಯಗಳನ್ನು ಉಚಿತವಾಗಿ ಹಂಚಬೇಕು ಎಂಬ ಬೇಡಿಕೆಗಳನ್ನು ಈಡೇರಿಸಲು ನಿರಾಕರಿಸುತ್ತಲೇ ಇದೆ.

ಮಹಾಸೋಂಕಿನ ಹರಡಿಕೆಯನ್ನು ತಡೆಯುವಲ್ಲಿ ವಿಫಲವಾದ ಪ್ರಧಾನ ಮಂತ್ರಿಗಳು ಮತ್ತು ಕೇಂದ್ರ ಸರಕಾರ ಈಗ ಅಷ್ಟೇ ಅಯೋಜಿತವಾಗಿ ಲಾಕ್‌ಡೌನನ್ನು ತೆರವು ಮಾಡುತ್ತ, ತಮ್ಮ ಹೊಣೆಯಿಂದ ಸಂಪೂರ್ಣವಾಗಿ ಜಾರಿಕೊಂಡು ತಾವು ಹೇರಿದ ಕ್ರಮ ಉಂಟುಮಾಡಿದ ಸಮಸ್ಯೆಗಳನ್ನು ಎದುರಿಸುವ ಹೊರೆಯನ್ನು ರಾಜ್ಯ ಸರಕಾರಗಳಿಗೆ ದಾಟಿಸಿ ಜನಗಳನ್ನು ಅವರ ಪಾಡಿಗೆ ಸಂಕಟಪಡಲು ಬಿಟ್ಟಿದ್ದಾರೆ.

ಆರೆಸ್ಸೆಸ್/ಬಿಜೆಪಿ ಅಜೆಂಡಾದ ಅವಿರತ ಅನುಸರಣೆ

ಮಹಾಸೋಂಕನ್ನು ಎದುರಿಸಲು ಮತ್ತು ಜನಗಳಿಗೆ ಪರಿಹಾರ ಒದಗಿಸಲು ಏಕಚಿತ್ತದಿಂದ ಗಮನ ಕೇಂದ್ರೀಕರಿಸುವ ಬದಲು, ಈ ಬಿಜೆಪಿ ಸರಕಾರ ತನ್ನದೇ ಅಜೆಂಡಾವನ್ನು ಅವಿರತವಾಗಿ ಅನುಸರಿಸುತ್ತಿದೆ. ಅದು ನಮ್ಮ ರಾಷ್ಟ್ರೀಯ ಆಸ್ತಿಗಳ ನೇರ ಲೂಟಿ ಮತ್ತು ದುಡಿಯುವ ಜನ-ವಿರೋಧಿ ಪ್ರಹಾರಗಳನ್ನು ನಡೆಸುವ ಒಂದು ಮಾರಣಾಂತಿಕ ಸಂಯೋಜನೆಯಿಂದ ಕೂಡಿದ ಆರ್ಥಿಕ ದಿಕ್ಕಿನಲ್ಲಿ ಸಾಗುತ್ತಿದೆ.

ಸ್ವಯಂ-ಅಡಿಯಾಳುತನ, ಸ್ವಾವಲಂಬನೆಯಲ್ಲ: ಭಾರತದ ಸ್ವಾವಲಂಬನೆಯ ಹೆಸರಿನಲ್ಲಿ ಪ್ರಕಟಿಸಿರುವ ಉತ್ತೇಜನಾ ಪ್ಯಾಕೇಜ್ ವಾಸ್ತವವಾಗಿ ದೇಶೀ ಮತ್ತು ವಿದೇಶೀ ಖಾಸಗಿ ಬಂಡವಾಳಗಳಿಗೆ ಭಾರತ ಸ್ವಯಂ ಅಡಿಯಾಳಾಗುವಂತೆ ಮಾಡಿಕೊಳ್ಳುವುದರ ಒಂದು ನೀಲನಕ್ಷೆಯಾಗಿದೆ. ನಮ್ಮ ಅರ್ಥವ್ಯವಸ್ಥೆಯ ಎಲ್ಲ ವಲಯಗಳನ್ನು ವಿದೇಶಿ ನೇರ ಹೂಡಿಕೆ (ಎಫ್‌ಡಿಐ)ಗೆ ಯಾವುದೇ ಅಡೆ-ತಡೆಯಿಲ್ಲದೆ ತಂತಾನೇ ಬರುವ ದಾರಿಗೆ ತೆರೆದು ಇಟ್ಟಿದೆ. ಇದರಲ್ಲಿ ರೈಲ್ವೆ, ಕಲ್ಲಿದ್ದಲು, ಖನಿಜಗಳು ಮತ್ತು ವಿಮೆಯೂ ಸೇರಿವೆ. ಹೆಚ್ಚಿನ ಸಾರ್ವಜನಿಕ ವಲಯದ ಉದ್ದಿಮೆಗಳನ್ನು, ರೈಲ್ವೆ, ಮದ್ದುಗುಂಡುಗಳ ಕಾರ್ಖಾನೆಗಳು, ಬಿಎಸ್‌ಎನ್‌ಎಲ್ ಮುಂತಾದವುಗಳು, ಮಾತ್ರವಲ್ಲದೆ ವಿದ್ಯುತ್, ಕಲ್ಲಿದ್ದಲು, ಖನಿಜಗಳು, ಪೆಟ್ರೋಲಿಯಂ, ಬ್ಯಾಂಕಿಂಗ್, ವಿಮೆ ಮತ್ತು ಹಣಕಾಸು ವಲಯವನ್ನೂ ಖಾಸಗೀಕರಿಸಲಾಗುತ್ತಿದೆ. ಸಾರ್ವಜನಿಕ ಸಂಪನ್ಮೂಲಗಳ ಈ ಲೂಟಿಯ ಜತೆಗೇ, ಕಾರ್ಮಿಕ ಕಾನೂನುಗಳನ್ನು ಸಡಿಲಗೊಳಿಸುವ ಮೂಲಕ ಕಾರ್ಮಿಕ ವರ್ಗ ಶ್ರಮಪಟ್ಟು ಗಳಿಸಿದ ಹಕ್ಕುಗಳನ್ನು ನಿರಾಕರಿಸಲಾಗುತ್ತಿದೆ. ಹಲವು ರಾಜ್ಯಗಳಲ್ಲಿ ದಿನದ ದುಡಿಯುವ ಅವಧಿಯನ್ನು 8ರಿಂದ 12 ಗಂಟೆಗಳಿಗೆ ಏರಿಸಲಾಗಿದೆ.

ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸಲಾಗುತ್ತಿದೆ: ಕೋಮುವಾದಿ ಧ್ರುವೀಕರಣ ಮತ್ತು ಮುಸ್ಲಿಂ ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯದ ಮೇಲೆ ಗುರಿ ತೀಕ್ಷ್ಣಗೊಳ್ಳುತ್ತಿದೆ ಎಂದು ಕೇಂದ್ರ ಸಮಿತಿ ಆತಂಕದಿಂದ ಗಮನಿಸಿತು. ದಿಲ್ಲಿಯಲ್ಲಿ ಕೋಮು ಹಿಂಸಾಚಾರದಲ್ಲಿ ಆರೆಸ್ಸೆಸ್/ಬಿಜೆಪಿ ಮತ್ತು ಅವುಗಳಿಗೆ ಸೇರಿದ ಸಂಘಟನೆಗಳ ಪಾತ್ರವನ್ನು ಮುಚ್ಚಿ ಹಾಕಲು ಒಂದು ಸಂಪೂರ್ಣ ತಪ್ಪಾದ ಘಟನಾಕ್ರಮವನ್ನು ದಿಲ್ಲಿ ಪೋಲೀಸ್ ಮುಂದೊತ್ತುತ್ತಿದೆ. ಕೇಂದ್ರ ಗೃಹ ಮಂತ್ರಾಲಯದ ಸೂಚನೆಗಳಂತೆ ಇದನ್ನು ಮಾಡಲಾಗುತ್ತಿದೆ. ಸಿಎಎ/ಎನ್‌ಆರ್‌ಸಿ/ಎನ್‌ಪಿಆರ್ ವಿರುದ್ಧ ಶಾಂತಿಯುತ ಪ್ರತಿಭಟನೆಗಳಲ್ಲಿ ಭಾಗವಹಿಸಿದ ಹಲವಾರು ಯುವ ಕಾರ್ಯಕರ್ತರನ್ನು, ವಿದ್ಯಾರ್ಥಿಗಳನ್ನೂ ಮತ್ತು ಹಿಂಸಾಚಾರಗಳಿಗೆ ತುತ್ತಾದವರನ್ನು ಗುರಿಮಾಡಲಾಗುತ್ತಿದೆ, ಅವರನ್ನು ಕರಾಳ ಕಾನೂನಿನ ಅಂಶಗಳ ಅಡಿಯಲ್ಲಿ ಬಂಧಿಸಲಾಗುತ್ತಿದ್ದರೆ, ಅತ್ತ ಈಶಾನ್ಯ ದಿಲ್ಲಿಯಲ್ಲಿ ಕೋಮುವಾದಿ ಹಿಂಸಾಚಾರವನ್ನು ಪ್ರಚೋದಿಸಿದವರನ್ನು, ನೇತೃತ್ವ ಕೊಟ್ಟವರನ್ನು ರಾಜಾರೋಷವಾಗಿ ತಿರುಗಾಡಲು ಬಿಡಲಾಗಿದೆ. ಉತ್ತರಪ್ರದೇಶದಲ್ಲಿ ಕರಾಳ 'ಯುಪಿ ಸಾರ್ವಜನಿಕ ಮತ್ತು ಖಾಸಗಿ ಆಸ್ತಿಗಳಿಗೆ ಹಾನಿ ಭರ್ತಿ ಸುಗ್ರೀವಾಜ್ಞೆ

ಪುಟ 10 ನೋಡಿ

ಕೊವಿಡ್-19 ರಿಂದಾಗಿ ಉಂಟಾಗಿರುವ ಪರಿಸ್ಥಿತಿಗಳಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿಯ ಸಭೆ ಜುಲೈ 25 ಮತ್ತು 26ರಂದು ಮೊತ್ತ ಮೊದಲ ಬಾರಿಗೆ ಆನ್ ಲೈನಿನಲ್ಲಿ ನಡೆಯಿತು.



ಪ್ರತಿಭಟನಾ ಕಾಯಾಚರಣೆಯ ಹಕ್ಕೊತ್ತಾಯಗಳು

ಸಿಪಿಐ(ಎಂ) ಕೇಂದ್ರ ಸಮಿತಿ ಮುಂದಿಟ್ಟಿರುವ
ಆಗಸ್ಟ್ 20-26ರ ದೇಶವ್ಯಾಪಿ ಪ್ರತಿಭಟನಾ ವಾರಾಚರಣೆಯ
16 ಬೇಡಿಕೆಗಳು ಈ ಕೆಳಗಿನಂತಿವೆ:

1. ಆದಾಯ ತೆರಿಗೆ ವ್ಯಾಪ್ತಿಗೆ ಬರದ ಎಲ್ಲ ಕುಟುಂಬಗಳಿಗೆ ತಕ್ಷಣದಿಂದ ಮುಂದಿನ ಆರು ತಿಂಗಳ ವರೆಗೆ ತಿಂಗಳಿಗೆ ರೂ.7500 ನಗದು ವರ್ಗಾವಣೆ.
2. ತಕ್ಷಣದಿಂದಲೇ ಅಗತ್ಯವಿರುವ ಎಲ್ಲರಿಗೂ ಮುಂದಿನ ಆರು ತಿಂಗಳ ವರೆಗೆ ಪ್ರತಿ ವ್ಯಕ್ತಿಗೆ 10 ಕೆ.ಜಿ.ಯಂತೆ ಉಚಿತ ಆಹಾರ ಧಾನ್ಯಗಳ ವಿತರಣೆ
3. ಮನರೇಗವನ್ನು ವಿಸ್ತರಿಸಿ, ಕೂಲಿದರ ಏರಿಸಿ, ವರ್ಷದಲ್ಲಿ ಕನಿಷ್ಟ 200 ದಿನಗಳ ಕೆಲಸದ ಖಾತ್ರಿ ಒದಗಿಸಬೇಕು. ಒಂದು ನಗರ ಉದ್ಯೋಗ ಖಾತ್ರಿ ಕಾಯ್ದೆ ತರಬೇಕು. ಎಲ್ಲ ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯೆ ಪ್ರಕಟಿಸಬೇಕು.
4. ಅಂತರ-ರಾಜ್ಯ ವಲಸೆ ಕೆಲಸಗಾರರ (ಉದ್ಯೋಗ ಮತ್ತು ಸೇವಾಷರತ್ತುಗಳ ನಿಯಂತ್ರಣ) ಕಾಯ್ದೆ 1979ನ್ನು ತೆಗೆದು ಹಾಕುವ ಪ್ರಸ್ತಾಪವನ್ನು ರದ್ದು ಮಾಡಬೇಕು, ಬದಲಿಗೆ, ಈ ಕಾಯ್ದೆಯನ್ನು ಬಲಪಡಿಸಬೇಕು.
5. ಸಾರ್ವಜನಿಕ ಆರೋಗ್ಯಕ್ಕೆ ಕೇಂದ್ರೀಯ ವೆಚ್ಚವನ್ನು ಕನಿಷ್ಟ ಜಿಡಿಪಿಯ 3ಶೇ.ಕ್ಕೆ ಹೆಚ್ಚಿಸಬೇಕು.
6. ಅಗತ್ಯ ಸರಕುಗಳ ಕಾಯ್ದೆಯನ್ನು ತೆಗೆಯುವ ಮತ್ತು ರಾಜ್ಯದಿಂದ ರಾಜ್ಯಕ್ಕೆ ಆಹಾರ ಧಾನ್ಯಗಳನ್ನು ನಿಯಂತ್ರಣಹೀನ ಬೆಲೆನಿರ್ಧಾರದ ಆಧಾರದಲ್ಲಿ ಮುಕ್ತವಾಗಿ ಸಾಗಿಸಲಿಕ್ಕೆ ಅವಕಾಶ ನೀಡಲು ಎಪಿಎಂಸಿ ಕಾಯ್ದೆಯನ್ನು ತಿದ್ದುಪಡಿ ಮಾಡುವ ಸುಗ್ರೀವಾಜ್ಞೆಗಳನ್ನು ರದ್ದು ಮಾಡಬೇಕು.
7. ಈಗಿರುವ ಕಾರ್ಮಿಕ ಕಾನೂನುಗಳನ್ನು ರದ್ದು/ತಿದ್ದುಪಡಿ/ಅಮಾನತು ಮಾಡುವ ಎಲ್ಲ ಪ್ರಸ್ತಾಪಗಳನ್ನು ಹಿಂತೆಗೆದುಕೊಳ್ಳಬೇಕು.
8. ಸಾರ್ವಜನಿಕ ವಲಯದ ಉದ್ದಿಮೆಗಳ , ವಿಶೇಷವಾಗಿ ಭಾರತೀಯ ರೈಲ್ವೆ ಮತ್ತು ವಿದ್ಯುತ್, ಪೆಟ್ರೋಲಿಯಂ, ಕಲ್ಲಿದ್ದಲು, ಬ್ಯಾಂಕ್/ವಿಮೆ, ರಕ್ಷಣಾ ಉತ್ಪಾದನಾ ವಲಯಗಳಲ್ಲಿನ ಉದ್ದಿಮೆಗಳ, ಖಾಸಗೀಕರಣವನ್ನು ರದ್ದು ಮಾಡಬೇಕು.
9. ಪ್ರಧಾನ ಮಂತ್ರಿಗಳ ಹೆಸರನ್ನು ಹೊತ್ತಿರುವ ಒಂದು ಖಾಸಗಿ ಟ್ರಸ್ಟ್ ನಿಧಿಯಲ್ಲಿ ಸಂಗ್ರಹವಾಗಿರುವ ಎಲ್ಲ ನಿಧಿಗಳನ್ನು ಮಹಾಸೋಂಕನ್ನು ಎದುರಿಸುವಲ್ಲಿ ಮುಂಚೂಣಿಯಲ್ಲಿರುವ ರಾಜ್ಯಗಳಿಗೆ ವರ್ಗಾಯಿಸಬೇಕು.
10. ಮಹಾಸೋಂಕನ್ನು ಎದುರಿಸಲು ವಿಪತ್ತು ನಿರ್ವಹಣಾ ಕಾಯ್ದೆಯನ್ನು ಬಳಸುತ್ತಿರುವುದರಿಂದ, ಸಾಂಕ್ರಾಮಿಕಕ್ಕೆ ತುತ್ತಾಗಿರುವವರ ಕುಟುಂಬಗಳಿಗೆ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯ ನಿಯಮಗಳ ಪ್ರಕಾರ ಒಂದು ಏಕ-ಸಮಯದ ಹಣಕಾಸು ನೆರವನ್ನು ಪ್ರಕಟಿಸಬೇಕು.
11. ಪರಿಶಿಷ್ಟ ಜಾತಿ/ಪರಿಶಿಷ್ಟ ಬುಡಕಟ್ಟು/ಒಬಿಸಿ ಮತ್ತು ವಿಕಲಾಂಗರಿಗೆ ಮೀಸಲಾತಿಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಎಲ್ಲ ಖಾಲಿ ಬಿಟ್ಟಿರುವ ಹುದ್ದೆಗಳನ್ನು ಭರ್ತಿ ಮಾಡಬೇಕು.
12. ಅಂತಿಮ ವರ್ಷದ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ಅವರ ಹಿಂದಿನ ಸೆಮೆಸ್ಟರುಗಳ ಸಾಧನೆಗಳ ಆಧಾರದಲ್ಲಿ ಪರೀಕ್ಷಿಸಬೇಕು ಮತ್ತು ಪದವಿಗಳನ್ನು ಕೊಡಬೇಕು.
13. ಜಮ್ಮು ಮತ್ತು ಕಾಶ್ಮೀರದಲ್ಲಿ ಆಗಸ್ಟ್ 2019ರಿಂದ ನಿರ್ಬಂಧದಲ್ಲಿ ಇರುವ ಎಲ್ಲರನ್ನೂ ತಕ್ಷಣ ಬಿಡುಗಡೆ ಮಾಡಬೇಕು. ಎಲ್ಲ ಸಂಪರ್ಕಗಳನ್ನು ಮತ್ತೆ ಸ್ಥಾಪಿಸಬೇಕು ಮತ್ತು ಜನಗಳ ಮುಕ್ತ ಓಡಾಟಕ್ಕೆ ಅವಕಾಶ ಕೊಡಬೇಕು.
14. ಯು.ಎ.ಪಿ.ಎ., ಎನ್.ಎಸ್.ಎ., ರಾಜದ್ರೋಹದ ಕಾಯ್ದೆ ಮುಂತಾದ ಕರಾಳ ಕಾನೂನುಗಳ ಅಡಿಯಲ್ಲಿ ಜೈಲುಗಳಲ್ಲಿ ನಿರ್ಬಂಧಿಸಿ ಇಟ್ಟಿರುವ ಎಲ್ಲ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕು.
15. ಪರಿಸರ ಪರಿಣಾಮ ನಿರ್ಧಾರಣೆ (ಇ.ಐ.ಎ.)2020 ಅಧಿಸೂಚನೆಯನ್ನು ಹಿಂತೆಗೆದುಕೊಳ್ಳಬೇಕು.
16. ಹೆಚ್ಚುತ್ತಿರುವ ದಲಿತರ ವಿರುದ್ಧದ ಹಿಂಸಾಚಾರ, ಮಹಿಳೆಯರ ವಿರುದ್ಧದ ಕುಟುಂಬ ಮತ್ತು ಲೈಂಗಿಕ ಹಿಂಸಾಚಾರಗಳನ್ನು ಎಸಗುತ್ತಿರುವವರನ್ನು ಮತ್ತು ಬುಡಕಟ್ಟು ಜನಗಳ ಶೋಷಣೆ ನಡೆಸುತ್ತಿರುವವರನ್ನು ಶಿಕ್ಷಿಸಬೇಕು.

ಆಗಸ್ಟ್ 20-26

ದೇಶವ್ಯಾಪಿ ಪ್ರತಿಭಟನಾ ವಾರಾಚರಣೆ

ಪುಟ 9 ರಿಂದ

2020'ನ್ನು ಶಾಂತಿಯುತ ಪ್ರತಿಭಟನೆಗಳಲ್ಲಿ ಭಾಗವಹಿಸಿದವರ ಮೇಲೆ ವಿಪರೀತ ದಂಡಗಳನ್ನು ವಿಧಿಸಲು ಮತ್ತು ಅವರ ಆಸ್ತಿಗಳ ಹರಾಜಿಗೆ ಬಳಸಲಾಗುತ್ತಿದೆ.

ಪ್ರಜಾಪ್ರಭುತ್ವ ಮತ್ತು ನಾಗರಿಕ ಹಕ್ಕುಗಳ ಮೇಲೆ ದಾಳಿಗಳು: ಮಹಾಸೋಂಕಿನ ಸನ್ನಿವೇಶದಲ್ಲಿ, ಹಲವು ಮಾನವ ಹಕ್ಕುಗಳ ಕಾರ್ಯಕರ್ತರನ್ನು ಆರೋಗ್ಯ ಸಂಬಂಧಿ ವಿಷಯಗಳ ಆಧಾರದಲ್ಲಿ ಬಿಡುಗಡೆ ಮಾಡಬೇಕೆಂಬ ಆಗ್ರಹಗಳನ್ನು ಈಗಲೂ ತುಚ್ಛೀಕಾರದಿಂದಲೇ ಕಾಣಲಾಗುತ್ತಿದೆ. ಯಾವುದೇ ಭಿನ್ನ ಅಭಿಪ್ರಾಯದ ಅಭಿವ್ಯಕ್ತಿಯನ್ನು 'ದೇಶ–ವಿರೋಧಿ' ಎಂದು ಪರಿಗಣಿಸಲಾಗುತ್ತಿದೆ. ಮಾಧ್ಯಮಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸವಾಲು ಹಾಕುವ ಧೈರ್ಯ ತೋರಿ ಇನ್ನೂ ಉಳಿದಿರುವವರನ್ನು ಕೂಡ ಬಿಡುತ್ತಿಲ್ಲ. ಅವರ ವಿರುದ್ಧ ಸುಳ್ಳು ಕೇಸುಗಳನ್ನು ಹಾಕಲಾಗುತ್ತಿದೆ.

ಸರ್ವಾಧಿಕಾರಶಾಹಿ ಓಟ: ಬಿಜೆಪಿ ನೇತೃತ್ವದ ಸರಕಾರ, ಮಹಾಸೋಂಕಿನ ನೆಪದಲ್ಲಿ ಅಧಿಕಾರದ ಕೇಂದ್ರೀಕರಣದ ಓಟವನ್ನು ಇನ್ನಷ್ಟು ಗಟ್ಟಿಗೊಳಿಸುತ್ತಿದೆ, ನಮ್ಮ ಸಂವಿಧಾನದ ಒಂದು ಮೂಲನೀತಿಯಾದ ಒಕ್ಕೂಟ ತತ್ವವನ್ನು ನಿರಾಕರಿಸುತ್ತಿದೆ ಎಂದೂ ಕೇಂದ್ರ ಸಮಿತಿ ಗಮನಿಸಿತು. ಎಲ್ಲ ನಿರ್ಧಾರಗಳನ್ನು ಪ್ರಧಾನ ಮಂತ್ರಿ ಮತ್ತು ಕೇಂದ್ರ ಸರಕಾರ ಏಕಪಕ್ಷೀಯವಾಗಿ ತೆಗೆದು ಕೊಳ್ಳುತ್ತಿದ್ದಾರೆ ಮತ್ತು ಇಂತಹ ಏಕಪಕ್ಷೀಯ ನಿರ್ಧಾರಗಳ ದುಷ್ಪರಿಣಾಮಗಳನ್ನು ರಾಜ್ಯಗಳ ಮೇಲೆ ಹೊರಿಸಲಾಗುತ್ತಿದೆ.

ರಾಜ್ಯ ಸರಕಾರಗಳು ಮಹಾಸೋಂಕನ್ನು ಎದುರಿಸುವಲ್ಲಿ ಮುಂಚೂಣಿಯಲ್ಲಿದ್ದರೂ, ಅವರಿಗೆ ಸಂಪನ್ಮೂಲಗಳನ್ನು ದೊರಕಿಸಿ ಕೊಡುವ ಬದಲು, ಅವರಿಗೆ ಸಲ್ಲಬೇಕಾದ ಜಿಎಸ್‌ಟಿ ಬಾಕಿಗಳನ್ನೂ ನಿರಾಕರಿಸಲಾಗುತ್ತಿದೆ. ಮಹಾಸೋಂಕನ್ನು ಎದುರಿಸಲೆಂದು ಪ್ರಧಾನ ಮಂತ್ರಿಗಳ ಹೆಸರಿಟ್ಟಿರುವ ಖಾಸಗಿ ಟ್ರಸ್ಟ್‌ನಲ್ಲಿ ಸಂಗ್ರಹವಾಗಿರುವ ಸಾವಿರಾರು ಕೋಟಿ ರೂ.ಗಳನ್ನು ಕೇಂದ್ರ ತಕ್ಷಣವೇ ರಾಜ್ಯಗಳಿಗೆ ವರ್ಗಾಯಿಸಬೇಕು.

ಸಂವಿಧಾನಿಕ ಸಂಸ್ಥೆಗಳು ಶಿಥಿಲ: ಬಿಜೆಪಿ ಸರಕಾರ ಎಲ್ಲ ಸ್ವತಂತ್ರ ಸಂವಿಧಾನಿಕ ಸಂಸ್ಥೆಗಳನ್ನು ಶಿಥಿಲಗೊಳಿಸುವ ಪ್ರಯತ್ನಗಳನ್ನು ಹೆಚ್ಚಿಸುತ್ತಿರುವುದರ ವಿರುದ್ಧ ಕೇಂದ್ರ ಸಮಿತಿ ಜನತೆಯನ್ನು ಎಚ್ಚರಿಸಿದೆ. ಸಂಸತ್ತಿನ ಕಾರ್ಯನಿರ್ವಹಣೆಯನ್ನು ವಿಪತ್ಕಾರೀ ರೀತಿಯಲ್ಲಿ ಮಿತಗೊಳಿಸಲಾಗಿದೆ. ನ್ಯಾಯಾಂಗ ಇತ್ತೀಚಿನ ಸಮಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವೈಖರಿಯ ಬಗ್ಗೆ ಗಂಭೀರ ಪ್ರಶ್ನೆಗಳು ಎದ್ದಿವೆ. ಸಂವಿಧಾನದ ಕಲಮು 370 ಮತ್ತು 35ಎ ರದ್ಧತಿಯನ್ನು ಮತ್ತು ಸಿಎಎ ಯನ್ನು ಪ್ರಶ್ನಿಸುವ ಹಲವಾರು ಮಹತ್ವದ ಅರ್ಜಿಗಳನ್ನು ಇತ್ಯರ್ಥ ಮಾಡದೆ ಬಾಕಿಯಿಡಲಾಗಿದೆ. ಚುನಾವಣಾ ಆಯೋಗದ ಸ್ವತಂತ್ರ ನಿರ್ವಹಣೆ ಹೆಚ್ಚೆಚ್ಚು ಮಬ್ಬುಗೊಳ್ಳುತ್ತಿದೆ. ಜಾರಿ ನಿರ್ದೇಶನಾಲಯ(ಇಡಿ) ಮತ್ತು ಕೇಂದ್ರೀಯ ತನಿಖಾ ಸಂಸ್ಥೆ(ಸಿಬಿಐ) ಹೆಚ್ಚೆಚ್ಚಾಗಿ ಕೇಂದ್ರ ಸರಕಾರದ ರಾಜಕೀಯ ಅಂಗಗಳಂತೆ ಕೆಲಸ ಮಾಡುತ್ತಿವೆ.

ರಾಜ್ಯ ಸರಕಾರಗಳನ್ನು ಅಸ್ಥಿರಗೊಳಿಸುತ್ತಿರುವುದು: ಬಿಜೆಪಿ ಪ್ರಜಾಸತ್ತಾತ್ಮಕವಾಗಿ ಚುನಾಯಿಸಿದ ಬೇರೆ ಪಕ್ಷಗಳ ಸರಕಾರಗಳನ್ನು ಉರುಳಿಸಲು ಮಾಡುತ್ತಿರುವ ಪ್ರಯತ್ನಗಳನ್ನು ಗಮನಿಸಿತು. ತನ್ನ ವಶದಲ್ಲಿರುವ ಮೋಸದ ಸಾಧನಗಳ ಮೂಲಕ ಗಳಿಸಿರುವ ಅಪಾರ ಸಂಪನ್ಮೂಲಗಳನ್ನು ಬಳಸಿಕೊಂಡು ನಗ್ನ ಕುದುರೆ ವ್ಯಾಪಾರದ ಮೂಲಕ ಪಕ್ಷಾಂತರಗಳನ್ನು ಸೃಷ್ಟಿಸಿ ಇದನ್ನು ಮಾಡಲಾಗುತ್ತಿದೆ.

ಕೇರಳದ ಎಲ್‌ಡಿಎಫ್ ಸರಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನಗಳಿಗೆ ಖಂಡನೆ: ಕೇರಳದಲ್ಲಿ ಯು.ಎ.ಇ. ಕಾನ್ಸುಲೇಟ್‌ನ ವಿಳಾಸವಿರುವ ರಾಜತಾಂತ್ರಿಕ ಬ್ಯಾಗೇಜಿನ ಮೂಲಕ ಚಿನ್ನದ ಕಳ್ಳಸಾಗಾಣಿಕೆಯ ಪ್ರಕರಣವನ್ನು ಎಲ್‌ಡಿಎಫ್ ಸರಕಾರವನ್ನು ಅಸ್ಥಿರಗೊಳಿಸಲು ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮತ್ತು ಬಿಜೆಪಿ ಜತೆಗೂಡಿ ಬಳಸಿಕೊಳ್ಳುತ್ತಿವೆ, ಸುಳ್ಳು ಆರೋಪಗಳ ಮೇಲೆ ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸುತ್ತಿವೆ. ಈ ಪ್ರಕರಣ ನಿಷಿದ್ಧ ಚಿನ್ನದ ಮುಟ್ಟುಗೋಲಿಗೆ ಸಂಬಂಧಪಟ್ಟದ್ದು, ಇದು ರಾಜ್ಯ ಸರಕಾರದ ವ್ಯಾಪ್ತಿಗೆ ಸೇರಿದ್ದಲ್ಲ. ಮುಖ್ಯಮಂತ್ರಿಗಳು ಕೇಂದ್ರೀಯ ಸಂಸ್ಥೆಗಳಿಂದ ತನಿಖೆ ನಡೆಸಬೇಕೆಂದು ಕೇಳಿದರು ಮತ್ತು ಎನ್‌ಐಎ ಈಗ ಈ ವಿಷಯದ ತನಿಖೆ ನಡೆಸುತ್ತಿದೆ. ಅದು ಈ ಪ್ರಕರಣದಲ್ಲಿ ತಪ್ಪಿತಸ್ಥರೆಂದು, ಇದರಲ್ಲಿ ಶಾಮೀಲಾದವರೆಂದು ಕಂಡುಕೊಂಡವರ ಮೇಲೆ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳುತ್ತದೆ.

ಎಲ್ಲ ಪ್ರಯತ್ನಗಳನ್ನು ಕೊವಿಡ್–19 ಮಹಾಸೋಂಕಿನ ವಿರುದ್ಧ ಸಮರದಲ್ಲಿ ಕೇಂದ್ರೀಕರಿಸಬೇಕಾಗಿರುವ ಸಮಯದಲ್ಲಿ ಯುಡಿಎಫ್ ಮತ್ತು ಬಿಜೆಪಿಯ ಈ ವಿಚ್ಛಿದ್ರಕಾರಿ ನಡೆಯನ್ನು ಕೇರಳದ ಜನತೆ ಸೋಲಿಸುತ್ತಾರೆ ಎಂಬ ವಿಶ್ವಾಸ ಸಿಪಿಐ(ಎಂ) ಕೇಂದ್ರ ಸಮಿತಿಗೆ ಇದೆ.

ಅಮೆರಿಕ ಸಂಯುಕ್ತ ಸಂಸ್ಥಾನದ ಅಡಿಯಾಳು ಮಿತ್ರನೆಂಬ ಸ್ಥಾನಮಾನ ಇನ್ನಷ್ಟು ಗಟ್ಟಿ : ಭಾರತದ ಪಾರಂಪರಿಕ ಸ್ವತಂತ್ರ ವಿದೇಶಾಂಗ ಧೋರಣೆಯನ್ನು ಕೈಬಿಟ್ಟು ಬಿಜೆಪಿ ಕೇಂದ್ರ ಸರಕಾರ ಸಂಪೂರ್ಣವಗಿ ಅಮೆರಿಕ ಸಂಯುಕ್ತ ಸಮಸ್ಥಾನದೊಂದಿಗೆ ಸೇರಿಕೊಂಡಿದೆ. ಮತ್ತು ಜಗತ್ತಿನಲ್ಲಿ ಅದರ ಸಾಮರಿಕ ಹಿತಗಳನ್ನು ಈಡೇರಿಸುತ್ತಿದೆ. ಇದು ದೇಶದ ಮತ್ತು ನಮ್ಮ ಜನಗಳ ಹಿತವನ್ನು ಸಾಧಿಸುವುದಿಲ್ಲ.

ಶಿಕ್ಷಣ: ಡಿಜಿಟಲ್ ವಿಭಜನೆ ಬೇಡ

ಶಾಲೆ ಮತ್ತು ಕಾಲೇಜು ಶಿಕ್ಷಣದ ಸನ್ನಿವೇಶದ ಬಗ್ಗೆ ವಿವಿಧ ರಾಜ್ಯಗಳ ವರದಿಗಳನ್ನು ಕೇಂದ್ರ ಸಮಿತಿ ವಿಶ್ಲೇಷಿಸಿತು. ಮೂಲರಚನೆಗಳ ಕೊರತೆ, ಕಂಪ್ಯೂಟರುಗಳು, ಸ್ಮಾರ್ಟ್ ಫೋನ್ ಮುಂತಾದ ಉಪಕರಣಗಳ ಅಭಾವ ಒಂದು ಡಿಜಿಟಲ್ ವಿಭಜನೆಯನ್ನು ಸೃಷ್ಟಿಸಿದ್ದು, ವಿದ್ಯಾರ್ಥಿಗಳ ಒಂದು ದೊಡ್ಡ ವಿಭಾಗ ಆನ್‌ಲೈನ್ ತರಗತಿಗಳಲ್ಲಿ ಹಾಜರಿರಲು ಸಾಧ್ಯವಾಗುತ್ತಿಲ್ಲ. ಕೇಂದ್ರ ಸರಕಾರ ತಕ್ಷಣವೇ ಅಂತರ್ಜಾಲ ಮೂಲರಚನೆಗಳನ್ನು, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿಸಲು ಸಂಪನ್ಮೂಲಗಳನ್ನು ಒದಗಿಸಬೇಕು ಮತ್ತು ವಿದ್ಯಾರ್ಥಿಗಳಿಗೆ ತಮ್ಮ ಶಿಕ್ಷಣವನ್ನು ಮುಂದುವರೆಸಲು ಹಾಗೂ ಅಗತ್ಯ ಉಪಕರಣಗಳನ್ನು ಖರೀದಿಸಲು ಹಣಕಾಸು ನೆರವನ್ನು ನೀಡಬೇಕು. ಇದಿಲ್ಲದೆ, ಯಾವುದೇ ಡಿಜಿಟಲ್ ಬೋಧನೆ/ಪರೀಕ್ಷೆ ನಡೆಸಬಾರದು. ಡಿಜಿಟಲ್ ಶಿಕ್ಷಣ ಭೌತಿಕ ಬೋಧನಾ ಕ್ರಮಕ್ಕೆ ಬದಲಿಯಾಗುವುದಿಲ್ಲ.

ಆರ್ಥಿಕ ಪರಿಸ್ಥಿತಿ: ಜನಗಳಿಗೆ ಮತ್ತಷ್ಟು ಸಂಕಟ

ಕೊವಿಡ್–19 ಮಹಾಸೋಂಕಿನ ಹೊಡೆತ ಬೀಳುವ ಮೊದಲೇ ಭಾರತೀಯ ಅರ್ಥವ್ಯವಸ್ಥೆ ಆರ್ಥಿಕ ಹಿಂಜರಿತದತ್ತ ತೀವ್ರಗತಿಯಲ್ಲಿ ಇಳಿಯುತ್ತಿತ್ತು. ಅರ್ಥವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸಲು ಸಾರ್ವಜನಿಕ ಹೂಡಿಕೆಗಳೇ ಏಕಮಾತ್ರ ದಾರಿ ಎಂದು ಆಗ್ರಹಿಸುತ್ತ ಪಕ್ಷ ಮಧ್ಯಪ್ರವೇಶ ಮಾಡುತ್ತ ಬಂದಿದೆ. ಬಹಳ ಅಗತ್ಯವಿರುವ ಮೂಲರಚನೆಗಳನ್ನು ಸಾರ್ವಜನಿಕ ಹೂಡಿಕೆಗಳ ಮೂಲಕ ಕಟ್ಟುವ ಕೆಲಸ ಮಾಡುತ್ತಿದ್ದರೆ ಹೊಸ ಉದ್ಯೋಗಗಳ ಮಟ್ಟ ಬಹಳಷ್ಟು ಹೆಚ್ಚುತ್ತಿತ್ತು, ಇದು ಭಾರತೀಯ ಅರ್ಥವ್ಯವಸ್ಥೆಯಲ್ಲಿ ಆಂತರಿಕ ಬೇಡಿಕೆಗಳನ್ನು ದೊಡ್ಡ ಪ್ರಮಾಣದಲ್ಲಿ ವಿಸ್ತರಿಸ ಬಹುದಾಗಿತ್ತು. ಇದರಿಂದ ಮುಚ್ಚಿದ ಕಾರ್ಖಾನೆಗಳು ಮತ್ತು ನಿಂತು ಹೋಗುತ್ತಿದ್ದ ತಯಾರಿಕೆಗಳು ಚೇತರಿಸಿಕೊಳ್ಳಲು ಸಾಧ್ಯವಾಗುತ್ತಿತ್ತು. ಆದರೆ ನವ–ಉದಾರವಾದೀ ಅಜೆಂಡಾಕ್ಕೆ ಬದ್ಧವಾಗಿರುವುದರಿಂದಾಗಿ ಮೋದಿ ಸರಕಾರ ಜನಗಳ ಖರೀದಿ ಸಾಮರ್ಥ್ಯವನ್ನು ಮತ್ತಷ್ಟು ಕುಗ್ಗಿಸುವ ಧೋರಣೆಯನ್ನೇ ಮುಂದುವರೆಸಿ ಅರ್ಥವ್ಯವಸ್ಥೆಯನ್ನು ಹಿಂಜರಿತದತ್ತ ಮತ್ತಷ್ಟು ನೂಕಿದೆ.

ಭಾರತದ ಜಿಡಿಪಿಯಲಲಿ 4ಶೇ.ದಿಂದ 7ಶೇ, ದ ವರೆಗೂ ಇಳಿಕೆಯಾಗಬಹುದೆಂಬ ನಿರೀಕ್ಷೆ ಜನಗಳ ಶೋಷಣೆಯನ್ನು ಮತ್ತು ಅದರ ಪರಿಣಾಮವಾಗಿ ಅವರ ಸಂಕಟಗಳನ್ನು ಮತ್ತಷ್ಟು ತೀವ್ರಗೊಳಿಸುತ್ತದೆ. ಪೆಟ್ರೋಲಿಯಂ ಉತ್ಪನ್ನಗಳ ಸತತ ಬೆಲೆಯೇರಿಕೆಗಳು, ಏರುತ್ತಿರುವ ಹಣದುಬ್ಬರ ಮತ್ತು ಅಗತ್ಯ ಸರಕುಗಳ ಬೆಲೆಗಳು ಜನರ ಮೇಲೆ ಮತ್ತಷ್ಟು ಹೊರೆಗಳನ್ನು ಹಾಕುತ್ತಿವೆ. ಸರಕಾರ ಹಿಡಿದಿರುವ ದಿಕ್ಕು ಆರ್ಥಿಕ ಚೇತರಿಕೆಗೆ ನೆರವಾಗುವುದೂ ಇಲ್ಲ, ನಮ್ಮ ಜನಗಳಿಗೆ ಒಂದು ಉತ್ತಮ ಜೀವನೋಪಾಯವನ್ನು ಒದಗಿಸುವುದೂ ಇಲ್ಲ. ಇದು ಕಾರ್ಪೊರೇಟ್‌ಗಳಿಗೆ ಹೆಚ್ಚಿನ ಲಾಭಗಳನ್ನು ಒದಗಿಸುವ, ಆಮೂಲಕ ಹೊಲಸು ಮಟ್ಟದಲ್ಲಿರುವ ಆರ್ಥಿಕ ಅಸಮಾನತೆಗಳನ್ನು ಮತ್ತಷ್ಟು ಹೆಚ್ಚಿಸುವ ದಿಕ್ಕು ಮಾತ್ರವೇ ಆಗಿದೆ.

ಭಾರತೀಯ ಕೃಷಿಯನ್ನು ನಾಶಪಡಿಸುವ ಅಪಾಯಕಾರಿ ಸುಗ್ರೀವಾಜ್ಞೆಗಳು

ಆವಶ್ಯಕ ಸರಕುಗಳ ಕಾಯ್ದೆಯನ್ನು ತೆಗೆದು ಹಾಕುವ ಮತ್ತು ಎಪಿಎಂಸಿ ಕಾಯ್ದೆಯನ್ನು ತಿದ್ದುಪಡಿ ಮಾಡುವ ಸುಗ್ರೀವಾಜ್ಞೆಗಳನ್ನು ಹೊರಡಿಸಿರುವುದನ್ನು, ಈ ಮೂಲಕ ಅನಿಯಂತ್ರಿತ ಬೆಲೆನಿರ್ಧಾರಣೆಯ ಆಧಾರದಲ್ಲಿ ಆಹಾರಧಾನ್ಯಗಳನ್ನು ರಾಜ್ಯದಿಂದ ರಾಜ್ಯಕ್ಕೆ ಮುಕ್ತವಾಗಿ ಸಾಗಿಸಲು ಅವಕಾಶ ನೀಡಿರುವುದನ್ನು ಕೇಂದ್ರ ಸಮಿತಿ ಖಂಡಿಸಿದೆ. ಇದು ಭವಿಷ್ಯದಲ್ಲಿ ದೇಶದ ಆಹಾರ ಭದ್ರತೆಯ ಮೇಲೆ ಗಂಭೀರ ದುಷ್ಪರಿಣಾಮಗಳನ್ನು ಬೀರಲಿದೆ. ಕನಿಷ್ಟ ಬೆಂಬಲ ಬೆಲೆಯಲ್ಲಿ ಖರೀದಿಯ ಮೂಲಕ ರೈತರಿಗೆ ಸಿಗುತ್ತಿದ್ದ ಅಲ್ಪ–ಸ್ವಲ್ಪ ರಕ್ಷಣೆಯೂ ಕೊನೆಗೊಳ್ಳುತ್ತದೆ. ಇದು ದೇಶದಲ್ಲಿ ಅಲ್ಪಪ್ರಮಾಣದಲ್ಲಾದರೂ ಇನ್ನೂ ಅಸ್ತಿತ್ವದಲ್ಲಿರುವ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನೂ ನಾಶಪಡಿಸುತ್ತದೆ. ಮುಖ್ಯವಾಗಿ, ಈ ಕ್ರಮಗಳು ದೊಡ್ಡ ಬಹುರಾಷ್ಟ್ರೀಯ ಕೃಷಿವ್ಯಾಪಾರೀ ಕಂಪನಿಗಳು ಮತ್ತು ದೇಶೀ ಕಾರ್ಪೊರೇಟ್‌ಗಳು ಭಾರತದ ಕೃಷಿ ಉತ್ಪನ್ನಗಳು ಮತ್ತು ಮಾರುಕಟ್ಟೆಗಳನ್ನು ಪ್ರವೇಶಿಸಲು ದಾರಿ ತೆರೆದು ಕೊಡುತ್ತವೆ. ಇದು ಭಾರತೀಯ ಕೃಷಿಯ ಧ್ವಂಸಕ್ಕೆ ನೀಡಿರುವ ಆಹ್ವಾನ.

ಬಿಹಾರ ವಿಧಾನಸಭಾ ಚುನಾವಣೆಗಳು

ಬಿಹಾರದ ಬಿಜೆಪಿ–ಜೆಡಿ(ಯು) ಮೈತ್ರಿಕೂಟದ ಸೋಲು ಬಿಹಾರದ ಮತ್ತು ದೇಶದ ಜನತೆಯ ಹಿತದೃಷ್ಟಿಯಿಂದಲೂ ಅತ್ಯಗತ್ಯ. ಎಡಪಕ್ಷಗಳು ಈ ಗುರಿ ಸಾಧನೆಯಲ್ಲಿ ಆಸಕ್ತಿ ಇರುವ ಇತರೆಲ್ಲ ಶಕ್ತಿಗಳೊಂದಿಗೂ ಸಹಕರಿಸುತ್ತವೆ ಎಂದು ಸಿಪಿಐ(ಎಂ), ಸಿಪಿಐ ಮತ್ತು ಸಿಪಿಐ(ಎಂಎಲ್) ಜಂಟಿಯಾಗಿ ಘೋಷಿಸಿವೆ.

ಬಿಜೆಪಿ ಈ ಚುನಾವಣೆಗಳಿಗೆ ಭಾರೀ ಪ್ರಮಾಣದಲ್ಲಿ ಸಿದ್ಧತೆಗಳನ್ನು ಆರಂಭಿಸಿದೆ. ತನ್ನ ಸುಪರ್ದಿಯಲ್ಲಿರುವ ಎಲ್ಲ ಸಂಪನ್ಮೂಲಗಳನ್ನು ಬಳಸಿಕೊಂಡು ಒಂದು ಬೃಹತ್ ಪ್ರಮಾಣದ ಡಿಜಿಟಲ್ ಪ್ರಚಾರವನ್ನು ಅದು ಆರಂಭಿಸಿದೆ.

ಈ ಚುನಾವಣೆಗಳನ್ನು ಡಿಜಿಟಲ್ ಪ್ರಚಾರ ಮತ್ತು ಡಿಜಿಟಲ್ ಮತದಾನದಿಂದಲೇ ನಡೆಸುವ ರಾಜ್ಯ ಚುನಾವಣಾ ಆಯೋಗದ ಪ್ರಸ್ತಾವನೆಗೆ ಬಿಜೆಪಿ ಮತ್ತು ಜೆಡಿ(ಯು)ನ ಬೆಂಬಲವಿದೆ. ಸಿಪಿಐ(ಎಂ) ಮತ್ತು ಎಡಪಕ್ಷಗಳು ಇದನ್ನು ವಿರೋಧಿಸಿವೆ. ಇದು ಬಹುದೊಡ್ಡ ಜನವಿಭಾಗಗಳನ್ನು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲಾಗದಂತೆ ಹೊರಗಿಟ್ಟು ಪ್ರಜಾಪ್ರಭುತ್ವವನ್ನು ಶಿಥಿಲಗೊಳಿಸುತ್ತದೆ. ಅಲ್ಲದೆ, ಇಂತಹ ಪ್ರಚಾರ ಮತ್ತು ಮತದಾನದ 'ವಿಧಾನಗಳು ಅತ್ಯಂತ ಉನ್ನತ ಮಟ್ಟದ ಮೋಸಗಳಿಗೆ ಒಳಗಾಗಬಲ್ಲವು ಎಂಬುದನ್ನು ಅಂತರ‍್ರಾಷ್ಟ್ರೀಯ ಅನುಭವಗಳೂ ಸಾನಬೀತು ಪಡಿಸಿವೆ. ಇದು ಜನಾದೇಶವನ್ನು ವಿಕೃತಗೊಳಿಸುತ್ತದೆ.

ಚುನಾವಣೆಗಳನ್ನು ಸರಿಯಾಗಿ ನಡೆಸಲು ಸರಿಯಾದ ಪರಿಸ್ಥಿತಿಗಳನ್ನು ಖಾತ್ರಿಪಡಿಸುವುದು ಚುನಾವಣಾ ಆಯೋಗದ ಜವಾಬ್ದಾರಿ, ಸರಿಯಾ ಪ್ರಚಾರ ವಿಧಾನಗಳು ಮತ್ತು ಜನರಿಂದ ಭೌತಿಕ ಮತದಾನದ ಮೂಲಕ ಎಲ್ಲ ಸ್ಪರ್ಧಾಳುಗಳಿಗೆ ಸಮಾನ ಮಟ್ಟದ ಅವಕಾಶಗಳು ಇರುವಂತೆ ಮಾಡಬೇಕು.

ತೀವ್ರವಾಗಿ ಏರುತ್ತಿರುವ ಮಹಾಸೋಂಕಿನ ಪರಿಸ್ಥಿತಿಗಳಲ್ಲಿ ಜನಗಳ ಸುರಕ್ಷತತೆಯನ್ನು ಖಾತ್ರಿಪಡಿಸುವುದು ಮತ್ತು ಸಾಮಾನ್ಯ ರೀತಿಯಲ್ಲಿ ಚುನಾವಣೆಗಳನ್ನು ನಡೆಸಲು ಪರಿಸ್ಥಿತಿಗಳನ್ನು ಒದಗಿಸುವ ಕೆಲಸವನ್ನು ಚುನಾವಣಾ ಆಯೋಗ ಮತ್ತು ಆಡಳಿತ ಮಾಡಬೇಕಾಗಿದೆ.

ಬಿಜೆಪಿಯಿಂದ ಹಣಬಲದ ಭಾರೀ ದುರುಪಯೋಗದ ಸನ್ನಿವೇಶದಲ್ಲಿ ಭಾರತದ ಚುನಾವಣಾ ಆಯೋಗ ಚುನಾವಣಾ ಬಾಂಡುಗಳು ಚುನಾವಣಾ ಪ್ರಕ್ರಿಯೆಗಳನ್ನು ವಿಕೃತಗೊಳಿಸಿ, ಮತ್ತು ಜನಗಳು ಸರಿಯಾದ ಮಾಹಿತಿಗಳನ್ನು ಪಡೆದು ಮತದಾನ ನಡೆಸಲಾಗದಂತೆ ವಂಚಿಸಿ ಒಡ್ಡಿರುವ ಅಪಾಯಗಳ ಬಗ್ಗೆ, ತಾನು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವುದನ್ನು ಅನುಸರಿಸಬೇಕು. ಈ ಚುನಾವಣಾ ಬಾಂಡುಗಳನ್ನು ರದ್ದುಗೊಳಿಸಬೇಕು ಮತ್ತು ಭವಿಷ್ಯದಲ್ಲಿ ಯಾವುದೇ ಚುನಾವಣೆಯ ಮೊದಲು ಅದನ್ನು ಹೊರಡಿಸಲು ಅವಕಾಶ ಕೊಡಬಾರದು.

ಜಮ್ಮು ಮತ್ತು ಕಾಶ್ಮೀರ

ಕಲಮು 30 ಮತ್ತು 35ಎ ಯನ್ನು ರದ್ದು ಮಾಡಿ ಒಂದು ವರ್ಷವಾಗುತ್ತಾ ಬಂದರೂ, ಎಲ್ಲ ಪ್ರಮುಖ ಮುಖಂಡರೂ ಸೇರಿದಂತೆ ಸಾವಿರಾರು ಜನಗಳನ್ನು ನಿರ್ಬಂಧದಲ್ಲಿಟ್ಟರೂ, ಜನಗಳ ಸಾಮಾಜಿಕ–ಆರ್ಥಿಕ ಜೀವನವನ್ನು ಸುಮಾರಾಗಿ ಛಿದ್ರಗೊಳಿಸಿಯೇ ಬಿಟ್ಟರೂ ಮತ್ತು ಸಂಪರ್ಕ ಜಾಲವನ್ನು ಕಡಿತಗೊಳಿಸಿದರೂ, ಪರಿಸ್ಥಿತಿ ಇನ್ನೂ ಗಂಭೀರವಾಗಿಯೇ ಇದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಸುಮಾರು ಒಂದು ವರ್ಷದ ಕಾಲ ಹೇರಿದ ರಾಜಕೀಯ ಲಾಕ್‌ಡೌನ್‌ನೊಂದಿಗೆ ರಾಷ್ಟ್ರೀಯ ಲಾಕ್‌ಡೌನನ್ನೂ ಹೇರಿದ ಅವಧಿಯಲ್ಲಿ, ಕೇಂದ್ರ ಸರಕಾರ ಹೊರಗಿಂದ ಬರುವ ಜನಗಳು ಸರಕಾರೀ ನೌಕರಿಗಳನ್ನು ಮತ್ತು ಆಸ್ತಿಗಳನ್ನು ಖರೀದಿಸಲು ಅನುವಾಗುವಂತೆ ನೆಲೆಸಿಗ ಸ್ಥಾನಮಾನದ 'ನಿರೂಪಣೆಯನ್ನು ಬದಲಿಸಿದೆ, ಈ ಮೂಲಕ ಕಾಶ್ಮೀರ ಕಣಿವೆಯಲ್ಲಿ ಜನಸಂಖ್ಯಾ ಸ್ವರೂಪದಲ್ಲಿ ಪರಿವರ್ತನೆಯನ್ನು ತಂದಿದೆ. ಜನಗಳ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಗರಿಕ ಸ್ವಾತಂತ್ರ್ಯಗಳ ಗಂಭೀರ ಉಲ್ಲಂಘನೆಗಳು ಮುಂದುವರೆಯುತ್ತಿವೆ, ಭಿನ್ನ ಅಭಿಪ್ರಾಯಗಳನ್ನು ಹೊಂದಿರುವವರನ್ನು ಎಲ್ಲರನ್ನೂ ರಾಷ್ಟ್ರ–ವಿರೋಧಿಗಳು ಎಂದು ಪರಿಗಣಿಸಲಾಗುತ್ತಿದೆ ಮತ್ತು ಕರಾಳ ಕಾನೂನುಗಳ ಅಡಿಯಲ್ಲಿ ಶಿಕ್ಷಿಸಲಾಗುತ್ತಿದೆ.

ಈಗ ಕೇಂದ್ರಾಡಳಿತ ಪ್ರದೇಶವಾಗಿರುವ ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರಕಟಿಸಿರುವ ಹೊಸ ಮಾಧ್ಯಮ ಧೋರಣೆ ಯಾವುದನ್ನು ಪ್ರಕಟಿಸಬಹುದು, ಯಾವುದನ್ನು ಪ್ರಕಟಿಸಬಾರದು ಎಂಬುದರ ಮೇಲೆ ಅಧಿಕಾರಶಾಹಿ ಮತ್ತು ಭದ್ರತಾ ಅಧಿಕಾರಿಗಳ ಹತೋಟಿಯನ್ನು ಕಾನೂನುಬದ್ಧಗೊಳಿಸಿದೆ. ಆ ಮೂಲಕ ಮುಕ್ತ ವಾಕ್ ಮತ್ತು ಅಭಿವ್ಯಕ್ತಿಯ ಹಕ್ಕಿನ ಸಂವಿಧಾನಿಕ ಖಾತ್ರಿಯನ್ನು ರದ್ದುಗೊಳಿಸಲಾಗಿದೆ.

ಕೇಂದ್ರ ಸಮಿತಿ ಆಗಸ್ಟ್ 2019ರಿಂದ ನಿರ್ಬಂಧದಲ್ಲಿಟ್ಟಿರುವ ಎಲ್ಲರನ್ನೂ ಬಿಡುಗಡೆ ಮಾಡಬೇಕು, ಪೂರ್ಣ ಸಂಪರ್ಕವನ್ನು ಮತ್ತೆ ನೆಲೆಗೊಳಿಸಬೇಕು ಮತ್ತು ಜನಗಳ ಮುಕ್ತ ಓಡಾಟಕ್ಕೆ ಅವಕಾಶ ಕೊಡಬೇಕು ಎಂದು ಆಗ್ರಹಿಸುತ್ತದೆ. ಇದು ಮಹಾಸೋಂಕನನು ಪರಿಣಾಮಕಾರಿಯಾಗಿ ಎದುರಿಸಲೂ ಮತ್ತು ಹೊಡೆತಗಳಿಗೀಡಾದ ಜನಗಳಿಗೆ ಪರಿಹಾರ ಒದಗಿಸಲೂ ಕೂಡ ಅತ್ಯಗತ್ಯವಾಗಿದೆ.

ಕೇಂದ್ರ ಸಮಿತಿ ಆಗ್ರಹಗಳು

ಕೇಂದ್ರ ಸಮಿತಿ ಇಂತಹ ಸಂದರ್ಭಗಳಲ್ಲಿ ಹದಿನಾರು ಅತ್ಯಗತ್ಯ ಬೇಡಿಕೆಗಳನ್ನು ಕೇಂದ್ರ ಸರಕಾರದ ಮುಂದೆ ಇಡುತ್ತದೆ.

(ಪುಟ 9 ನೋಡಿ)

ಕೇಂದ್ರ ಸಮಿತಿ ಕರೆಗಳು

1. ಈ ಹದಿನಾರು ಬೇಡಿಕೆಗಳ ಪಟ್ಟಿಯನ್ನು ಎತ್ತಿ ತೋರಿ **ಆಗಸ್ಟ್ 20 ರಿಂದ 26 ರವರೆಗೆ ಪ್ರತಿಭಟನಾ ವಾರಾಚರಣೆ**ಯನ್ನು ದೇಶಾದ್ಯಂತ, ಅಗತ್ಯ ಮಿತಿಗಳು ಮತ್ತು ಮುನ್ನೆಚ್ಚರಿಕೆಗಳನ್ನು ಅನುಸರಿಸುತ್ತ ನಡೆಸಬೇಕು ಎಂದು ಕೇಂದ್ರ ಸಮಿತಿ ತನ್ನ ಎಲ್ಲ ಘಟಕಗಳಿಗೆ ಕರೆ ನೀಡಿದೆ.

2. ಕೇಂದ್ರ ಸಮಿತಿ ಕಾರ್ಮಿಕರ, ರೈತರ ಮತ್ತು ಕೃಷಿಕೂಲಿಕಾರರ ಸಂಘಟನೆಗಳು ಆಗಸ್ಟ್ 9, 2020 ರಂದು ನಡೆಸಲು ನಿರ್ಧರಿಸಿರುವ ಅಖಿಲ ಭಾರತ ಪ್ರತಿಭಟನೆಗೆ ಬೆಂಬಲ ಮತ್ತು ಸೌಹಾರ್ದವನ್ನು ವ್ಯಕ್ತಪಡಿಸುತ್ತದೆ.

ಶತಮಾನೋತ್ಸವ ಲೇಖನಮಾಲೆ-37

ಮೂರನೇ ಮಹಾಧಿವೇಶನ-ಹಾದಿ ಸರಿಪಡಿಸುವತ್ತ ಒಂದು ಪ್ರಯತ್ನ

1952ರ ಮೊದಲ ಸಾರ್ವತ್ರಿಕ ಚುನಾವಣೆಗಳ ನಂತರ ಕಮ್ಯುನಿಸ್ಟ್ ಪಕ್ಷವು ಪ್ರಮುಖ ಶಕ್ತಿಯಾಗಿ ಹೊರಹೊಮ್ಮಿತು. 16 ಸ್ಥಾನಗಳನ್ನು ಗಳಿಸುವುದರೊಂದಿಗೆ ಪಾರ್ಲಿಮೆಂಟಿನಲ್ಲಿ ಪ್ರಧಾನ ವಿರೋಧ ಪಕ್ಷವಾಗಿ ಹೊರಹೊಮ್ಮಿತು. ಆಂಧ್ರದಲ್ಲಿ ಮೊದಲ ಸ್ಥಾನದಲ್ಲಿದ್ದರೆ, ಕೇರಳದಲ್ಲಿ ಅತ್ಯಂತ ಬಲಿಷ್ಠ ಶಕ್ತಿಯಾಗಿತ್ತು, ತ್ರಿಪುರಾದಲ್ಲಿ ಭಾರಿ ಬಹುಮತದ ಬೆಂಬಲವನ್ನು ಪಕ್ಷ ಪಡೆಯಿತು; ಬಂಗಾಳದಲ್ಲಿ ಪ್ರಮುಖ ವಿರೋಧಿ ಶಕ್ತಿಯಾಗಿ ಹಾಗೂ ಒರಿಸ್ಸಾ ಮತ್ತು ಪಂಜಾಬಿನಲ್ಲಿ ವೇಗವಾಗಿ ಬೆಳೆಯುವ ಶಕ್ತಿಯಾಗಿ ಹೊಮ್ಮಿತು. ಚುನಾವಣೆ ನಡೆದಾದ ಕೂಡಲೇ, ಪಕ್ಷದ ಮೂರನೇ ಮಹಾಧಿವೇಶನವನ್ನು ನಡೆಸುವ ತಯಾರಿಯನ್ನು ಪ್ರಾರಂಭಿಸಲಾಯಿತು. ಡಿಸೆಂಬರ್ 27, 1953 ರಿಂದ ಜನವರಿ 4, 1954 ರ ವರೆಗೆ ಮಧುರೈನಲ್ಲಿ ನಡೆಯಿತು. ಮಹಾಧಿವೇಶನದ ಪರಾಮರ್ಶೆಯು ಗುರುತಿಸಿತು. ಪಕ್ಷದ ಸರಿಯಾದ ಕೇಂದ್ರ ಇಲ್ಲದ ಕಾರಣ ಮಹಾಧಿವೇಶನದಲ್ಲಿ ಆಮೂಲಾಗ್ರವಾದ ಚರ್ಚೆಯಾಗಲಿಲ್ಲ ಎಂದು ಈ ಕುರಿತ ಪರಾಮರ್ಶೆ ಹೇಳಿತು.

ಕನ್ನಡಕ್ಕೆ: ಟಿ. ಸುರೇಂದ್ರ ರಾವ್

ಸಾರ್ವತ್ರಿಕ ವಯಸ್ಕ ಮತದಾನದೊಂದಿಗೆ ಮೊದಲ ಸಾರ್ವತ್ರಿಕ ಚುನಾವಣೆಯು 1952ರಲ್ಲಿ ನಡೆಯಿತು. ತನ್ನ ಅಖಿಲ ಭಾರತ ಸಮ್ಮೇಳನ ಮುಗಿದ ಕೂಡಲೇ, ಕಷ್ಟಕರ ಇತಿಮಿತಿಗಳಿಂದಾಗಿ ಅಡಚಣೆಯಾದಾಗ್ಯೂ ಸಹ, ಕಮ್ಯುನಿಸ್ಟ್ ಪಕ್ಷವು ಈ ಚುನಾವಣೆಗಾಗಿ ಸಿದ್ಧತೆ ನಡೆಸಿತು. ಪಕ್ಷದ ಕೇಂದ್ರ ಸಮಿತಿಯ ಬಹುತೇಕ ಸದಸ್ಯರು ಈ ಚುನಾವಣೆಯಲ್ಲಿ ಪ್ರಚಾರ ಮಾಡಲಾಗಲಿಲ್ಲ, ಏಕೆಂದರೆ ಕಮ್ಯುನಿಸ್ಟ್ ಪಕ್ಷದ ಹೆಚ್ಚು ಪ್ರಾಬಲ್ಯ ಇರುವ ಕಡೆಗಳಲ್ಲೆಲ್ಲಾ ಮಿಲಿಟರಿ ಮತ್ತು ಪೋಲಿಸ್ ಪಡೆಗಳಿಂದ ವ್ಯಾಪಕ ಭಯೋತ್ಪಾದನೆ ಮುಂದುವರಿದಿತ್ತು. ಪಕ್ಷದ ಸಾವಿರಾರು ಮುಖಂಡರು ಮತ್ತು ಸದಸ್ಯರು ಜೈಲಿನಲ್ಲಿದ್ದರು ಮತ್ತು ಕಾಂಗ್ರೆಸ್ ಸರ್ಕಾರವು ಅವರನ್ನು ಬಿಡುಗಡೆ ಮಾಡಲು ನಿರಾಕರಿಸಿತ್ತು. ಸುಮಾರು 50,000 ರಾಜಕೀಯ ವಿರೋಧಿಗಳನ್ನು ಜೈಲಿನಲ್ಲಿ ಇಟ್ಟಿದ್ದೇವೆಂದು ಮತ್ತು ತಮ್ಮ ಮೊದಲ ಮೂರು ವರ್ಷಗಳ ಆಳ್ವಿಕೆಯಲ್ಲಿ 13,000 ಜನರನ್ನು ಹೊಡೆದು ಕೊಂದಿದ್ದೇವೆ ಅಥವಾ ಗಾಯಗೊಳಿಸಿದ್ದೇವೆ ಎಂದು ಸರ್ಕಾರವೇ ಒಪ್ಪಿಕೊಂಡಿತ್ತು. ಹಾಗೆ ಸೆರೆಯಲ್ಲಿದ್ದವರು ಅಥವಾ ಕೊಲ್ಲಲ್ಪಟ್ಟವರು ಬಹುತೇಕ ಕಮ್ಯುನಿಸ್ಟ್ ಪಕ್ಷದವರೇ ಆಗಿದ್ದರು. ಈ ಹಿನ್ನಲೆಯಲ್ಲಿ, 1952ರ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳು ಕಣಕ್ಕಿಳಿದಿದ್ದರು.

ಕಾಂಗ್ರೆಸ್ ಪಕ್ಷವನ್ನು ಧೂಳೀಪಟ ಮಾಡಿ, ಜನರ ಅಭ್ಯರ್ಥಿಗಳನ್ನು ಗೆಲ್ಲಿಸಿ ಮತ್ತು ಜನರ ಸರ್ಕಾರವನ್ನು ಸ್ಥಾಪನೆ ಮಾಡಿ ಎಂದು ಪ್ರಣಾಳಿಕೆ ಬಿಡುಗಡೆ ಮಾಡುವಾಗ ಕಮ್ಯುನಿಸ್ಟ್ ಪಕ್ಷ ಕರೆ ನೀಡಿತ್ತು. ಕಾಂಗ್ರೆಸ್ ಸರ್ಕಾರವು ಭೂಮಾಲಕರ ಮತ್ತು ಏಕಸ್ವಾಮ್ಯದವರ ಪಕ್ಷವಾಗಿದ್ದು ಜನರಿಗೆ ದ್ರೋಹ ಬಗೆದಿದೆ ಎಂದು ಜನರನ್ನು ಎಚ್ಚರಿಸಿದ ಪಕ್ಷವು ಪ್ರತಿಗಾಮಿ ಪಟ್ಟಭದ್ರ ಹಿತಾಸಕ್ತಿಗಳ ಮತ್ತು ಹಿಂದೂ ಮಹಾಸಭಾದಂತಹ ಪಕ್ಷಗಳ ಘೋಷಣೆಗಳಿಂದ ಮೋಸ ಹೋಗಬೇಡಿ ಮತ್ತು ಅವರ ವಿರುದ್ಧ ಮತ ನೀಡಿ ಎಂದು ಕೇಳಿಕೊಂಡಿತು.

ಪ್ರಣಾಳಿಕೆಯಲ್ಲಿ ಪಕ್ಷವು "ಜನತಾ ಪ್ರಜಾಪ್ರಭುತ್ವ ಸರ್ಕಾರವು ಜನರ ಸರ್ಕಾರವಾಗಿ ಬ್ರಿಟಿಷ್ ಸಾಮ್ರಾಜ್ಯದಿಂದ ಸಂಪೂರ್ಣವಾಗಿ ದೂರವಾಗಿರುತ್ತದೆ, ಎಲ್ಲಾ ಬ್ರಿಟಿಷ್ ಬಂಡವಾಳವನ್ನು ಮುಟ್ಟುಗೋಲು ಹಾಕಿಕೊಳ್ಳುತ್ತದೆ ಮತ್ತು ರಾಷ್ಟ್ರೀಕರಿಸುತ್ತದೆ ಹಾಗೂ ಸಾಮ್ರಾಜ್ಯಶಾಹಿಗಳ ಮತ್ತು ಪಾಳೇಗಾರಿ ಜನಗಳ ಪ್ರತಿರೋಧವನ್ನು ಸದೆಬಡಿಯುತ್ತದೆ." ಎಂದು ಹೇಳಿತು. "ಭೂಮಾಲಕರ ಮತ್ತು ರಾಜರುಗಳ ಭೂಮಿಯನ್ನು ಮತ್ತು ಸಲಕರಣೆಗಳನ್ನು ಉಳುವವರಿಗೆ ವರ್ಗಾಯಿಸುತ್ತದೆ ಮತ್ತು ರೈತಾಪಿಗಳ ಸಾಲವನ್ನು ಮನ್ನಾ ಮಾಡುತ್ತದೆ. ಕೃಷಿ ಕೂಲಿಕಾರರಿಗೆ ಸಾಕಷ್ಟು ಕೂಲಿಯ ಜತೆ ಜಮೀನನ್ನೂ ಒದಗಿಸುತ್ತದೆ; ರಾಷ್ಟ್ರೀಕೃತ ಬಂಡವಾಳದಿಂದ ಉದ್ದಿಮೆಗಳನ್ನು ಬೆಳೆಸುತ್ತದೆ, ಕಾರ್ಮಿಕರಿಗೆ ಬದುಕುವ ಸಂಬಳ, ಅವರಿಗೆ ಸಂಘಟಿಸುವ, ಸಾಮೂಹಿಕ ಚೌಕಾಶಿ ಹಾಗೂ ಮುಷ್ಕರ ಮಾಡುವ ಹಕ್ಕುಗಳನ್ನು ಮಾನ್ಯ ಮಾಡುತ್ತದೆ." ಎಂದೂ ಭರವಸೆ ನೀಡಿತು.

ಮುಂದುವರಿದು, ಜನತಾ ಪ್ರಜಾಪ್ರಭುತ್ವ ಸರ್ಕಾರವು ಜಾತಿ ದಬ್ಬಾಳಿಕೆಯನ್ನು ಕೊನೆಗೊಳಿಸುತ್ತದೆ, ಅಸ್ಪೃಶ್ಯತೆಗೆ ಮತ್ತು ಎಲ್ಲಾ ರೀತಿಯ ಜಾತಿ ತಾರತಮ್ಯಗಳನ್ನು ದಂಡಿಸುತ್ತದೆ. ಕೋಮುದ್ವೇಷ ಬಿತ್ತುವವರನ್ನು ದಂಡಿಸುತ್ತದೆ ಎಲ್ಲಾ ಅಲ್ಪಸಂಖ್ಯಾತರ ಹಕ್ಕು ಮತ್ತು ಹಿತಾಸಕ್ತಿಗಳನ್ನು ರಕ್ಷಿಸುತ್ತದೆ. ಮಹಿಳೆಯರು ಎದುರಿಸುತ್ತಿರುವ ಸಾಮಾಜಿಕ ಹಾಗೂ ಆರ್ಥಿಕ ತಾರತಮ್ಯಗಳನ್ನು ತೊಡೆದುಹಾಕುತ್ತದೆ ಮತ್ತು ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ಹಾಗೂ ಸಮಾನತೆಯನ್ನು ಖಾತ್ರಿಪಡಿಸುತ್ತದೆ. ಮಹಿಳೆಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡುತ್ತದೆ. ಜನತಾ ಪ್ರಜಾಪ್ರಭುತ್ವ ಸರ್ಕಾರದ ನಾಯಕತ್ವ ಹೊಂದಿರುವ ಪ್ರಭುತ್ವದಲ್ಲಿ ಎಲ್ಲಾ ಅಂಗಗಳಿಗೆ ಪ್ರತಿನಿಧಿಗಳನ್ನು, ಕೆಳಗಿನಿಂದ ಮೇಲಿನವರೆಗೆ, ಹಿಂದೆ ಕರೆಸುವ ಹಕ್ಕಿನೊಂದಿಗೆ ಜನರೇ ಆರಿಸುತ್ತಾರೆ.

ಚುನಾವಣೆಗಳ ನಂತರ ಕಮ್ಯುನಿಸ್ಟ್ ಪಕ್ಷವು ಪ್ರಮುಖ ಶಕ್ತಿಯಾಗಿ ಹೊರಹೊಮ್ಮಿತು. 16 ಸ್ಥಾನಗಳನ್ನು ಗಳಿಸುವುದರೊಂದಿಗೆ ಪಾರ್ಲಿಮೆಂಟಿನಲ್ಲಿ ಪ್ರಧಾನ ವಿರೋಧ ಪಕ್ಷವಾಗಿ ಹೊರಹೊಮ್ಮಿತು. ಆಂಧ್ರದಲ್ಲಿ ಮೊದಲ ಸ್ಥಾನದಲ್ಲಿದ್ದರೆ, ಕೇರಳದಲ್ಲಿ ಅತ್ಯಂತ ಬಲಿಷ್ಠ ಶಕ್ತಿಯಾಗಿತ್ತು, ತ್ರಿಪುರಾದಲ್ಲಿ ಭಾರಿ ಬಹುಮತದ ಬೆಂಬಲವನ್ನು ಪಕ್ಷ ಪಡೆಯಿತು; ಬಂಗಾಳದಲ್ಲಿ ಪ್ರಮುಖ ವಿರೋಧಿ ಶಕ್ತಿಯಾಗಿ ಹಾಗೂ ಒರಿಸ್ಸಾ ಮತ್ತು ಪಂಜಾಬಿನಲ್ಲಿ ವೇಗವಾಗಿ ಬೆಳೆಯುವ ಶಕ್ತಿಯಾಗಿ ಹೊಮ್ಮಿತು. ಪಕ್ಷದ ಬೆಳವಣಿಗೆ ಮತ್ತು ಅದಕ್ಕೆ ದೊರೆತ ಅಂಗೀಕಾರ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಎಚ್ಚರಿಕೆಯ ಘಂಟೆಯಾಯಿತು. "ಭಾರತವು ಕಮ್ಯುನಿಸಂನಿಂದ ತನ್ನನ್ನು ರಕ್ಷಿಸಿಕೊಳ್ಳಲು ಹತಾಶ ಸಂಗ್ರಾಮ ನಡೆಸಿದೆ ಮತ್ತು ಅದು 'ಈ ಬೆಳವಣಿಗೆಯನ್ನು ತಡೆಹಿಡಿಯಲು' 'ತುರ್ತಾದ ಹಾಗೂ ಪರಿಣಾಮಕಾರಿಯಾದ ಕಾರ್ಯಾಚರಣೆ' ನಡೆಸಬೇಕಾದ ಅವಶ್ಯಕತೆಯಿದೆ" ಎಂದು ಅಮೆರಿಕಾದ ಆಡಳಿತವು ವ್ಯಾಖ್ಯಾನ ಮಾಡಿತು.

ಪಕ್ಷ ಈ ಚುನಾವಣೆಯ ಪರಾಮರ್ಶೆ ನಡೆಸಿತು ಮತ್ತು ಎಲ್ಲೆಲ್ಲಿ ಸಾಮೂಹಿಕ ಹೋರಾಟಗಳನ್ನು ಎದೆಗುಂದದೆ ಧೈರ್ಯವಾಗಿ ಎಲ್ಲಾ ಭಯೋತ್ಪಾದನೆಗಳನ್ನು ಮತ್ತು ದಬ್ಬಾಳಿಕೆಗಳನ್ನು ಎದುರಿಸಿತೋ ಅಂಥಲ್ಲೆಲ್ಲಾ ಪಕ್ಷವು ಮನಮುಟ್ಟುವಂತೆ ಉತ್ತಮ ಪ್ರದರ್ಶನ ಮಾಡಿದೆ ಎಂಬ ತೀರ್ಮಾನಕ್ಕೆ ಬಂತು. ಚುನಾವಣಾ ಸಾಧನೆಗಳು ಒಂದೇ ಸಮನೆ ಇರಲಿಲ್ಲ ಎನ್ನುವುದನ್ನು ಗಮನಿಸಿತು. ಕಾಂಗ್ರೆಸ್ಸಿನ ವರ್ಗ ಆಳ್ವಿಕೆಯನ್ನು ಸೋಲಿಸಲು ಕಮ್ಯುನಿಸ್ಟ್ ಪಕ್ಷದ ಸುತ್ತ ಒಂದು ವಿಶಾಲ ಐಕ್ಯರಂಗವನ್ನು ಕಟ್ಟಬೇಕಾದ ಅಗತ್ಯವಿದೆ ಎಂಬುದನ್ನು ಕೂಡ ಈ ಫಲಿತಾಂಶಗಳು ತೋರಿಸಿದವು. ದುಡಿಯುವ ಜನರನ್ನು ಜೀವಾಳವಾಗಿ ಇಟ್ಟುಕೊಂಡು ವರ್ಗ ಐಕ್ಯತೆಯನ್ನು ಕಟ್ಟಬೇಕೆಂದು ಅದು ಒತ್ತಿ ಹೇಳಿತು. ಪಕ್ಷವು ಕೆಲವು ತಪ್ಪುಗಳನ್ನು ಹಾಗೂ ಪ್ರಮಾದಗಳನ್ನು ಪಕ್ಷ ಮಾಡಿದೆ, ಮತ್ತು ಅವುಗಳನ್ನು ಸರಿಪಡಿಸುವ ಪ್ರಕ್ರಿಯೆಯಲ್ಲಿದೆ ಎಂದು ಬಹಿರಂಗವಾಗಿ ಒಪ್ಪಿಕೊಂಡಿತು. ಈ ಎಲ್ಲಾ ತಪ್ಪುಗಳಿದ್ದಾಗ್ಯೂ, ಪಕ್ಷವು ಎಂದಿಗೂ ದುಡಿಯುವ ಜನರ ಹಿತಾಸಕ್ತಿಯನ್ನು ಬಲಿಗೊಡಲಿಲ್ಲ ಅಥವಾ ಶೋಷಕರ ದಯಾ ದಾಕ್ಷಿಣ್ಯಗಳಿಗೆ ಅವರನ್ನು ಒಡ್ಡಲಿಲ್ಲ. ಈ ಎಲ್ಲಾ ಕಾರಣಗಳಿಂದಾಗಿಯೇ ಜನರು ಪಕ್ಷಕ್ಕೆ ಮತ ನೀಡಿ ಪ್ರಮುಖ ವಿರೋಧಿ ಶಕ್ತಿಯನ್ನಾಗಿ ಮಾಡಿದರು.

ಚುನಾವಣೆ ನಡೆದಾದ ಕೂಡಲೇ, ಪಕ್ಷದ ಮೂರನೇ ಮಹಾಧಿವೇಶನವನ್ನು ನಡೆಸುವ ತಯಾರಿಯನ್ನು ಪ್ರಾರಂಭಿಸಲಾಯಿತು. ಒಂದರ ಹಿಂದೆ ಒಂದರಂತೆ ಕೇಂದ್ರ ಸಮಿತಿಯ ಸಭೆಗಳನ್ನು ನಡೆಸಿ, ಇತರ ಪಕ್ಷಗಳನ್ನು ನಿಭಾಯಿಸುವ ವಿಧಾನಗಳು, ಸಂಸದೀಯ ಹಾಗೂ ಸಂಸದೇತರ ಕೆಲಸಗಳ ಕುರಿತ ಹಲವಾರು ವಿಷಯಗಳ ಬಗ್ಗೆ ಚರ್ಚೆ ಮಾಡಲಾಯಿತು. ಕೇಂದ್ರ ಸಮಿತಿಯ ಒಂದು ವಿಸ್ತೃತ ಪ್ಲೀನಂನ್ನು ಡಿಸೆಂಬರ್ 30, 1952 ರಿಂದ ಜನವರಿ 10, 1953ರ ವರೆಗೆ ನಡೆಸಲಾಯಿತು, ಅದರಲ್ಲಿ ಕೇಂದ್ರ ಸಮಿತಿಯ ಎಲ್ಲಾ ಸದಸ್ಯರು, ನಿಯಂತ್ರಣ ಆಯೋಗದ ಸದಸ್ಯರು ಮತ್ತು ಪ್ರಾಂತಗಳಿಂದ 61 ಪ್ರತಿನಿಧಿಗಳು ಭಾಗವಹಿಸಿದ್ದರು. ಆ ಪ್ಲೀನಂನಲ್ಲಿ ಕೆಲವು ರಾಜಕೀಯ ಹಾಗೂ ಸಂಘಟನಾತ್ಮಕ ಪ್ರಶ್ನೆಗಳನ್ನು ಚರ್ಚೆ ಮಾಡಲಾಯಿತು. ಪ್ಲೀನಂನ ಚರ್ಚೆಯಾಧಾರದಲ್ಲಿ ಮುಂಬರುವ ಮಹಾಧಿವೇಶನಕ್ಕಾಗಿ ಒಂದು ರಾಜಕೀಯ ನಿರ್ಣಯ ಹಾಗೂ ಸಂಘಟನೆ ಕುರಿತು ಒಂದು ದಸ್ತಾವೇಜನ್ನು ಸಿದ್ಧಪಡಿಸುವ ಹೊಣೆಯನ್ನು ಕೇಂದ್ರ ಸಮಿತಿಗೆ ವಹಿಸಿಕೊಡಲಾಯಿತು.

ಪಕ್ಷದ ಮೂರನೇ ಮಹಾಧಿವೇಶನವು ಡಿಸೆಂಬರ್ 27, 1953 ರಿಂದ ಜನವರಿ 4, 1954 ರ ವರೆಗೆ ಮಧುರೈನಲ್ಲಿ ನಡೆಯಿತು. ರಾಜಕೀಯ ನಿರ್ಣಯ ಮತ್ತು ಸಂಘಟನಾತ್ಮಕ ನಿರ್ಣಯಗಳಲ್ಲದೇ, ಮಹಾಧಿವೇಶನವು ಪಕ್ಷದ ಕಾರ್ಯಕ್ರಮ ಹಾಗೂ ನೀತಿ ಕುರಿತ ಹೇಳಿಕೆಗಳನ್ನೂ ಅನುಮೋದಿಸಿತು.


ಕಾಂಗ್ರೆಸ್ ಪಕ್ಷದ ಸಾಮೂಹಿಕ ನೆಲೆಯು ಕ್ಷೀಣಿಸುತ್ತಿದ್ದಾಗ್ಯೂ, ಅದು ಒಂದು ಶಕ್ತಿಯುತವಾದ ರಾಜಕೀಯ ಸಂಘಟನೆಯಾಗಿ ಉಳಿದಿದೆ ಎಂದು ಪಕ್ಷದ ಮಹಾಧಿವೇಶನವು ಅಂಗೀಕರಿಸಿದ ರಾಜಕೀಯ ನಿರ್ಣಯದಲ್ಲಿ ನಿರೂಪಿಸಲಾಗಿದೆ. ಯಾವ ಸ್ಥಳಗಳಲ್ಲಿ ಕಮ್ಯುನಿಸ್ಟ್ ಪಕ್ಷ ಮತ್ತು ಇತರ ಪ್ರಜಾಸತ್ತಾತ್ಮಕ ಶಕ್ತಿಗಳು ದುರ್ಬಲವಾಗಿವೆಯೋ, ಅಂಥಲ್ಲಿ ಕೋಮುವಾದಿ ಪಕ್ಷಗಳು ನೆಲೆಯೂರುತ್ತಿವೆ. ತಮ್ಮ ಬಿಕ್ಕಟ್ಟಿನ ಹೊರೆಯನ್ನು ಜನಸಮೂಹದ ಮೇಲೆ ಹೊರಿಸಲು ಮತ್ತು ಅದರ ಅನುಸಾರವಾಗಿ ಪ್ರಜಾಸತ್ತಾತ್ಮಕ ಹಕ್ಕುಗಳು ಹಾಗೂ ನಾಗರಿಕ ಸ್ವಾತಂತ್ರ್ಯಗಳ ಮೇಲೆ ದಾಳಿ ಮಾಡಲು ಆಳುವ ವರ್ಗಗಳು ಪ್ರಯತ್ನಿಸುತ್ತಿವೆ ಎಂಬುದನ್ನು ಗುರುತಿಸಿತು. ಈ ದಾಳಿಗಳನ್ನು ಪ್ರತಿರೋಧಿಸಲು ಹಲವಾರು ವರ್ಗ ಹಾಗೂ ಸಾಮೂಹಿಕ ಸಂಘಟನೆಗಳ ಜನರನ್ನು ಅಣಿನೆರೆಸಬೇಕೆಂದು ಅದು ನಿರ್ಧರಿಸಿತು. ಇಲ್ಲಿ, ಕಾರ್ಮಿಕ ವರ್ಗವನ್ನು ಸಂಘಟಿಸಬೇಕಾದ ಕಾರ್ಯಭಾರದ ಬಗ್ಗೆ ಒತ್ತಿಹೇಳಲಾಯಿತು. ಪಕ್ಷವು ಸಾಮಾಜಿಕ ಸಮಸ್ಯೆಗಳಾದ ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತೆಗಳಂಥವುಗಳನ್ನು ಕೈಗೆತ್ತಿಕೊಂಡು ಅವುಗಳ ವಿರುದ್ಧ ಹೋರಾಟಗಳನ್ನು ನಡೆಸಬೇಕು. ಜನರನ್ನು ಆಕರ್ಷಿಸುವ ಸಲುವಾಗಿ ವಯಸ್ಕ ಸಾಕ್ಷರತಾ ಆಂದೋಲನ, ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳನ್ನು, ವೈದ್ಯಕೀಯ ನೆರವು ಮುಂತಾದ ಸಮಾಜ ಸೇವಾ ಚಟುವಟಿಕೆಗಳನ್ನು ನಡೆಸುವ ಅಗತ್ಯವನ್ನೂ ಮಹಾಧಿವೇಶನದ ನಿರ್ಣಯವು ಒತ್ತಿ ಹೇಳಿತು.

ಪರಿಣಾಮಕಾರಿಯಾದ ಹಾಗೂ ವ್ಯಾಪಕವಾದ ವರ್ತಮಾನ ಪತ್ರಿಕೆಗಳನ್ನು ಹೊರತರುವ ಮೂಲಕ ಜನಸಮುದಾಯದಲ್ಲಿ ಹಾಗೂ ಪಕ್ಷದ ಕಾರ್ಯಕರ್ತರಲ್ಲಿ ಅರಿವು ಮೂಡಿಸುವ ಅಗತ್ಯವನ್ನು ರಾಜಕೀಯ ನಿರ್ಣಯವು ಬೊಟ್ಟು ಮಾಡಿ ತೋರಿತು. ರಾಜಕೀಯ ಪ್ರಚಾರದ ಭಾಗವಾಗಿ ಪಕ್ಷದ ಸಾಹಿತ್ಯವನ್ನು ಮಾರಾಟ ಮಾಡುವ ಅವಶ್ಯಕತೆಯ ಬಗ್ಗೆಯೂ ಒತ್ತು ನೀಡಿತು.

ಪಕ್ಷದ ಬೆಳವಣಿಗೆಯ ವೇಗಕ್ಕೆ ಅನುಗುಣವಾಗಿ ಸಂಘಟನೆಯ ಬೆಳವಣಿಗೆಯನ್ನು ಸರಿಸಾಟಿಯಾಗಿಸುವ ಅಗತ್ಯತೆಯನ್ನು ಸಂಘಟನಾತ್ಮಕ ನಿರ್ಣಯವು ಒತ್ತಿ ಹೇಳಿತು. ಸರಿಯಾದ ಸಂಘಟನಾ ವಿಧಾನದ ಪ್ರಶ್ನೆಯು ಈ ಕೆಳಗಿನ ವಿಷಯಗಳೊಂದಿಗೆ ನಿಕಟ ಸಂಬಂಧ ಹೊಂದಿವೆ: 1) ಬಂಡವಾಳಶಾಹಿ, ಪುಟ್ಟ ಬಂಡವಾಳಶಾಹಿ ಮತ್ತು ಪಾಳೇಗಾರಿ ಸಿದ್ಧಾಂತಗಳ ವಿರುದ್ಧದ ಹೋರಾಟ; 2) ನಮ್ಮ ಪಕ್ಷದ ಮುಖ್ಯ ನೆಲೆಯನ್ನು ರೂಪಿಸುವ ವರ್ಗಗಳು ಮತ್ತು 3) ವಿಮರ್ಶೆ ಹಾಗೂ ಸ್ವವಿಮರ್ಶೆ, ವಿಶೇಷವಾಗಿ ಕೆಳಮಟ್ಟದಿಂದ ನಡೆಯುವ ವಿಮರ್ಶೆಯನ್ನೊಳಗೊಂಡ ಪ್ರಜಾಸತ್ತಾತ್ಮಕ ಕೇಂದ್ರವಾದವು ಅತಿಮುಖ್ಯವಾದ ಭಾಗ ಎಂದು ನಿರ್ಣಯವು ಗುರುತಿಸಿತು.

ಮಧ್ಯಮ ವರ್ಗದಿಂದ ಬಂದ ಪಕ್ಷದ ಬಹುತೇಕ ಸದಸ್ಯರು ಸೈದ್ಧಾಂತಿಕವಾಗಿ ಬೆಳೆದಿಲ್ಲ, ಕಾರ್ಮಿಕ ವರ್ಗ ಹಾಗೂ ದುಡಿಯುವ ರೈತರ ನಡುವೆ ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಯೋಜಿತ ರೀತಿಯಲ್ಲಿ ಬೋಧಿಸುವ ತರಬೇತಿಯನ್ನೂ ಅವರಿಗೆ ನೀಡಿಲ್ಲ ಎಂಬುದನ್ನು ನಿರ್ಣಯವು ಗಮನಿಸಿತು. ಅವರ ಪ್ರಾಥಮಿಕ ಬಂಡವಾಳಶಾಹಿ-ವಿರೋಧಿ, ಪಾಳೇಗಾರಿ-ವಿರೋಧಿ ಹಾಗೂ ಸಾಮ್ರಾಜ್ಯಶಾಹಿ-ವಿರೋಧಿ ತಿಳುವಳಿಕೆಯನ್ನು

ಪುಟ 14 ನೋಡಿ



ಮೂರನೇ ಮಹಾಧಿವೇಶನದ ಬಹಿರಂಗ ಸಭೆ-ವೇದಿಕೆಯಲ್ಲಿ ಅಜೊಯ್ ಘೋಷ್‌ರೊಂದಿಗೆ ಬ್ರಿಟಿಶ್ ಕಮ್ಯುನಿಸ್ಟ್ ಮುಖಂಡ ಹ್ಯಾರಿ ಪೊಲಿಟ್ ಇದ್ದರು.



“ಸರಿಯಾದ ಸಮಯದಲ್ಲಿ ಸರಿಯಾದ ನಿರ್ಧಾರ.....”ಎಂಬ ಜೋಕ್!!

ಸರಿಯಾದ ಸಮಯದಲ್ಲಿ ಸರಿಯಾದ ನಿರ್ಧಾರವನ್ನು ತೆಗೆದುಕೊಂಡುದರಿಂದ ಕೊವಿಡ್–19 ಮಹಾಸೋಂಕಿನ ವಿರುದ್ಧ ಹೋರಾಟದಲ್ಲಿ ಭಾರತ ಇತರ ದೇಶಗಳಿಗಿಂತ ಬಹಳಷ್ಟು ಉತ್ತಮ ಸ್ಥಿತಿಯಲ್ಲಿದೆ ಎಂದು ಪ್ರಧಾನ ಮಂತ್ರಿಗಳು ಜುಲೈ 27 ರಂದು ಹೇಳಿರುವುದಾಗಿ ವರದಿಯಾಗಿದೆ. ಇದರಿಂದಾಗಿ ನಮ್ಮ ಸಾವಿನ ದರ ಮತ್ತು ಗುಣಮುಖರಾದವರ ಸಂಖ್ಯೆ ಪ್ರಮುಖ ದೇಶಗಳಿಗಿಂತ ಉತ್ತಮವಾಗಿದೆ ಎಂದು ಹೇಳಿದ್ದಾರಂತೆ. ಪ್ರಮುಖ ದೇಶಗಳೆಂದರೆ ಆ ಟ್ರಂಪ್‌ರವರ ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಬೋಲ್ಸೆನಾರೊ ಅವರ ಬ್ರೆಝಿಲ್. ಇವರಿಬ್ಬರೂ ತಮ್ಮ ನಿಕಟ ಮಿತ್ರೆಂದು ನಮ್ಮ ಪ್ರಧಾನಿಗಳೇ ಹೇಳೊಕೊಂಡಿರುವವರೇ ಆಗಿರುವುದು ಕಾಕಾತಾಳಿಯವೇನಿರಲಿಕ್ಕಿಲ್ಲ ಎಂದು ಟಿಪ್ಪಣಿಗಾರರು ಹೇಳುತ್ತಾರೆ.

ಒಬ್ಬ ಪರಿಣಿತರ ಪ್ರಕಾರ ಪ್ರಧಾನಿಗಳು ಎಂದಿನಂತೆ ತಮಗೆ ಅನುಕೂಲಕರವಾದ ಚಿತ್ರವನ್ನಷ್ಟೇ ಹೆಕ್ಕಿ–ಹೆಕ್ಕಿ ಈ ಮಾತುಗಳನ್ನಾಡಿದ್ದಾರೆ(ವಾಸುದೇವ್‌ಮುಕುಂತ್, ದಿ ವೈರ್, ಕುಲೈ 28).

ಒಟ್ಟು 213 ದೇಶಗಳು/ ಪ್ರದೇಶಗಳಲ್ಲಿ ಭಾರತದ ಸ್ಥಾನದತ್ತ ಅವರು ಗಮನ ಸೆಳೆಯುತ್ತಾರೆ:

ಒಟ್ಟು ಕೊವಿಡ್ ಸೋಂಕಿತರು 3ನೇ ಸ್ಥಾನ
ಒಟ್ಟು ಕೊವಿಡ್ ಸಾವುಗಳು: 6ನೇ ಸ್ಥಾನ
(ಜುಲೈ 30ರ ವೇಳೆಗೆ 5ನೇ ಸ್ಥಾನಕ್ಕೇರಿದೆ)
ಒಟ್ಟು ಚಿಕಿತ್ಸೆಯಲ್ಲಿರುವವರು: 3ನೇ ಸ್ಥಾನ
ಪ್ರತಿ ದಶಲಕ್ಷ ಜನಸಂಖ್ಯೆಯಲ್ಲಿ ಸೋಂಕಿತರ ಪ್ರಮಾಣ: 99ನೇಸ್ಥಾನ
ಪ್ರತಿದಶಲಕ್ಷ ಜನಸಂಖ್ಯೆಯಲ್ಲಿ ಸಾವುಗಳ ಪ್ರಮಾಣ: 98ನೇಸ್ಥಾನ



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸಿಫಿ.ಕಾಂ

ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಸೋಂಕಿತರ ಪ್ರಮಾಣದಲ್ಲಿ ಇನ್ನೂ 104 ದೇಶಗಳು ಮತ್ತು ಸಾವಿನ ಪ್ರಮಾಣದಲ್ಲೂ 105 ದೇಶಗಳು, ಅರ್ಧಕ್ಕಿಂತಲೂ ಹೆಚ್ಚು "ಭಾರತಕ್ಕಿಂತ ಉತ್ತಮ ಸ್ಥಿತಿಯಲ್ಲಿವೆ"! ಅವುಗಳಲ್ಲಿ ಸುಮಾರಾಗಿ ನಮ್ಮ ನೆರೆ ದೇಶಗಳೂ ಇವೆ!

'ಪ್ರಮುಖ ದೇಶ'ಗಳಾದ ಅಮೆರಿಕ ಮತ್ತು ಬ್ರೆಝಿಲ್‌ಗಿಂತ ಕೂಡ ಕೆಲವು ವಿಷಯಗಳಲ್ಲಿ ಭಾರತ 'ಉತ್ತಮ ಸ್ಥಿತಿಯಲ್ಲಿ' ಇಲ್ಲ.


ಒಂದು ಮಿಲಿಯದಿಂದ ಒಂದೂವರೆ ಮಿಲಿಯ 12 ದಿನಗಳಲ್ಲಿ

	ಒಟ್ಟು ಸೋಂಕಿತರು	ಒಟ್ಟು ಸಾವುಗಳು
ಜುಲೈ16	10,03,832	25602
ಜುಲೈ19	11,18,043	27497
ಜುಲೈ22	12,38,65	29,861
ಜುಲೈ24	13,36,861	31,358
ಜುಲೈ26	14,35,453	32,771
ಜುಲೈ 28	15,31,669	34,193
ಜುಲೈ 30	16,38,870	35,747

ಪ್ರಧಾನಿಗಳ ಹೇಳಿಕೆಯ ವಾರದಲ್ಲಿ ಸೋಂಕಿತರ ಸಂಖ್ಯೆಯಲ್ಲಿ ಸರಾಸರಿ ದೈನಂದಿನ ಏರಿಕೆ 50,000, ಸಾವುಗಳು 600

ಉದಾಹರಣೆಗೆ, ಅಮೆರಿಕದಲ್ಲಿ ಸೋಂಕಿತರ ಸಂಖ್ಯೆ ದ್ವಿಗುಣಗೊಳ್ಳಲು 41 ದಿನಗಳು ಬೇಕಾದರೆ, ಬ್ರೆಝಿಲ್‌ನಲ್ಲಿ 33ದಿನಗಳು ಬೇಕಾದವು, ಆದರೆ ಭಾರತದಲ್ಲಿ 21 ದಿನಗಳಲ್ಲೇ ಅದು ದ್ವಿಗುಣಗೊಂಡಿದೆ! ದಕ್ಷಿಣ ಆಫ್ರಿಕಾಕ್ಕೆ ಹೋಲಿಸಿದರೆ ಮಾತ್ರವೇ ಭಾರತ 'ಉತ್ತಮ ಸ್ಥಿತಿಯಲ್ಲಿದೆ.' ಅಲ್ಲಿ 19ದಿನಗಳಲ್ಲೇ ದ್ವಿಗುಣಗೊಂಡಿದೆ.

ಇನ್ನು ಸರಿಯಾದ ಸಮಯದಲ್ಲಿ ಸರಿಯಾದ ನಿರ್ಧಾರಗಳನ್ನು ತೆಗೆದು ಕೊಂಡಿರುವುದರ ಪರಿಣಾಮಗಳನ್ನು ಮೊದಲ ಲಾಕ್‌ಡೌನಿನ ಮಾರ್ಚ್ 25ರಿಂದ ಲಕ್ಷಾಂತರ ವಲಸೆ ಕಾರ್ಮಿಕರ ಬವಣೆಗಳಿಂದ ಹಿಡಿದು ಈಗಲೂ ಸೋಂಕಿತರಿಗೆ ಆಸ್ಪತ್ರಗಳಲ್ಲಿ ಹಾಸಿಗೆಗಳಿಲ್ಲದ, ಡಾಕ್ಟರುಗಳು, ನರ್ಸ್‌ಗಳಿಲ್ಲ ಎಂದು ಆಸ್ಪತ್ರೆಗಳ ಗೋಳಾಟದ ಸುದ್ದಿಗಳು, ಜತೆಗೆ ಡಾಕ್ಟರುಗಳೂ ಸೇರಿದಂತೆ ಮುಂಚೂಣಿಯ ಆರೋಗ್ಯ ಕಾರ್ಯಕರ್ತರುಗಳ ಬವಣೆಗಳ ಸುದ್ದಿಗಳಲ್ಲಿ ನಾವು ಕಾಣುತ್ತಿದ್ದೇವೆ.



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಪ್ರಧಾನಿ ಕೊವಿಡ್ ಉವಾಚ ವ್ಯಂಗ್ಯಚಿತ್ರಕಾರರು ಕಂಡಂತೆ



ವ್ಯಂಗ್ಯಚಿತ್ರ: ಮಂಜು ಗಂಗೊಳ್ಳಿ/ ಫೇಸ್‌ಬುಕ್



ವ್ಯಂಗ್ಯಚಿತ್ರ: ಸುಭಾನಿ, ಡೆಕ್ಕನ್ ಕ್ರಾನಿಕಲ್

ಅಮಾನವೀಯ ಕ್ರೌರ್ಯವನ್ನು ಮೆರೆದ ಸರ್ವಾಧಿಕಾರಿ ಕಾರ್ಪೋರೇಟ್..... ಪುಟ 8 ರಿಂದ

ಎಲ್ಲಾ ಪರಿಣಿತರು ಸ್ಪಷ್ಟವಾಗಿ ಕೋವಿಡ್ – 19 ವೈರಾಣು ದಾಳಿಯ ಪರಿಣಾಮವು, ರೋಗ ನಿರೋಧಕ ಶಕ್ತಿಯ ಕೊರತೆ ಇರುವ ವಿವಿಧ ಅನಾರೋಗ್ಯದಿಂದ ಬಳಲುತ್ತಿರುವವರು, ವೃದ್ಧರು ಹಾಗೂ ಮಕ್ಕಳ ಮೇಲೆ ತೀವ್ರವಾಗಿರುತ್ತದೆಂದು ಹೇಳುತ್ತಿದ್ದರೂ, ಇಂತಹ ಜನ ಸಮುದಾಯಕ್ಕೆ ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಲು ಅಗತ್ಯ ನೆರವನ್ನು ಘೋಷಿಸಲಿಲ್ಲ. ಮಾತ್ರವಲ್ಲ, ಕೋವಿಡ್ ಬಾಧಿತ ಎಲ್ಲರಿಗೆ ಅಗತ್ಯ ಉಚಿತ ಆರೋಗ್ಯ ಸಹಾಯ ನೀಡಲು ಸಾಧ್ಯವಾಗಲಿಲ್ಲ. ಬದಲಿಗೆ ಅನೇಕರನ್ನು ದುಬಾರಿ ಶುಲ್ಕ ಪಡೆಯುವ ಖಾಸಗೀ ಆಸ್ಪತ್ರೆಗಳ ಲೂಟಿಕೋರ ಚಿಕಿತ್ಸೆಯ ಕಡೆ ದೂಡಲಾಗಿದೆ. ಆರಂಭದ ದಿನಗಳಲ್ಲಿಯೇ ಕೋವಿಡ್ – 19 ನ್ನು ನಿಯಂತ್ರಣ ಮಾಡಲು ಇದ್ದ ಎಲ್ಲ ಅವಕಾಶಗಳನ್ನು ಕೈ ಬಿಡಲಾದುದರಿಂದ ಅದೀಗ ರಾಜ್ಯದ ಉದ್ದಗಲವನ್ನು ವ್ಯಾಪಿಸಿ ಸಾವಿರಾರು ಜನರನ್ನು ಬಲಿತೆಗೆದುಕೊಂಡು, ಒಂದು ಲಕ್ಷ ಕ್ಕೂ ಅಧಿಕ ಕುಟುಂಬಗಳ ಜನರರಿಗೆ ಹರಡುವಂತಾಗಿದೆ.

ಹಾಗೆ, ರಾಜ್ಯ ಸರಕಾರ ಇಂತಹ ತೀವ್ರ ಹಾನಿಕಾರಕ ಪ್ರಕೃತಿ ವಿಕೋಪಗಳನ್ನು ತಡೆಯಲು ಶಕ್ತಿ ಮೀರಿ ನೆರವಾಗುವ ಬದಲು, ರಾಜ್ಯದ ಜನತೆಯನ್ನು ಒಂದೆಡೆ ತೀವ್ರ ಆರ್ಥಿಕ ಸಂಕಷ್ಟಕ್ಕೂ ಇನ್ನೊಂದೆಡೆ ತೀವ್ರ ಅನಾರೋಗ್ಯಕ್ಕೂ ಈಡು ಮಾಡಿದೆ.

ಈಗಾಗಲೇ ಸಾಬೀತಾಗಿರುವಂತೆ ಒಂದು ಬಂಡವಾಳಶಾಹಿ – ಭೂಮಾಲಕ ಆಳುವ ವರ್ಗವು, ಇಂತಹ ಪ್ರಕೃತಿ ವಿಕೋಪಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವ ಬದಲು, ತನ್ನ ಅಭಿವೃದ್ದಿಗೆ ಅವುಗಳನ್ನು ಬಳಸುತ್ತಿರುವುದು ಸಂಗತವಾಗಿದೆ. ಇವುಗಳು ಬಡವರ ಹಾಗೂ ಸಂಕಷ್ಟದಲ್ಲಿರುವವರ, ಇದ್ದ ಬದ್ದ ಆಸ್ತಿಗಳನ್ನು ಬಂಡವಾಳದಾರರು ಮತ್ತು ಭೂಮಾಲಕರ ಕೈಗೆ ವರ್ಗಾಯಿಸಲಿವೆ. ಅದರಿಂದ ಇವರ ಆಸ್ತಿಗಳು ಬೆಳೆಯಲಿವೆ. ಬಡವರು ಹಾಗೂ ಶ್ರೀಮಂತರ ನಡುವಿನ ಅಂತರವನ್ನು ಮತ್ತಷ್ಟು ಆಳಗೊಳಿಸಲಿವೆ.

ಇದು ಬಡವರು, ದಲಿತರು, ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಇನ್ನಷ್ಟು ಹೆಚ್ಚಿಸುತ್ತದೆ.

ಅದೇ ಕ್ರಮಗಳನ್ನೇ ಈ ರಾಜ್ಯ ಸರಕಾರ ಈ ಅವಧಿಯಲ್ಲಿ ಜಾರಿಗೆ ತರಲು ಅನುವು ಮಾಡಿದೆ. ಆದ್ದರಿಂದಲೇ, ಅದು ಅಮಾನವೀಯವಾಗಿದೆ.

ಅಮಾನವೀಯತೆ, ಕ್ರೌರ್ಯಗಳನ್ನು ಮೆರೆದ ಸರಕಾರ

ರಾಜ್ಯದ ಜನತೆಯನ್ನು ಬಂಡವಾಳಶಾಹಿ ಭೂಮಾಲಕರ ಲೂಟಿಕೋರತನಕ್ಕೆ ಒಳಪಡಿಸುವ ದುರುದ್ದೇಶದಿಂದಲೇ ಸಂಕಷ್ಟಕ್ಕೀಡು ಮಾಡಲಾಯಿತು. ಮಾತ್ರವಲ್ಲಾ ಇಂತಹ ಸಂಕಷ್ಟದ ಸಂದರ್ಭದಲ್ಲಿ ತನ್ನ ಮೇಲೆ ಜನತೆಯ ಅಸಮಾಧಾನ ಅಥವಾ ಅಸಂತೃಪ್ತಿ ಬೆಳೆಯದಂತೆ ತಡೆಯಲು ಜನತೆಯ ಗಮನವನ್ನು ಬೇರೆಡೆ ಸೆಳೆಯುವ ತಂತ್ರಗಳನ್ನು ಹೆಣೆಯಿತು. ಮುಸ್ಲಿಮರೇ ಕೋವಿಡ್ ಹರಡಲು ಕಾರಣವೆಂಬಂತೆ ಮಾಧ್ಯಮಗಳ ಮೂಲಕ ಬಿಂಬಿಸಿ, ಮುಸ್ಲಿಂ–ದ್ವೇಷವನ್ನು ಹರಡಲಾಯಿತು. ಹಿಂದೂಗಳನ್ನು ಎತ್ತಿಕಟ್ಟಲು ಕ್ರಮ ವಹಿಸಲಾಯಿತು. ಜನತೆಯ ತೀವ್ರ ಒತ್ತಡದ ನಂತರವೇ ಅಂತಹ ನೀಚತನವನ್ನು ನಿಲ್ಲಿಸಲು ಕ್ರಮವಹಿಸಲಾಯಿತು.

ಅದೇ ರೀತಿ, ಇಡೀ ರಾಜ್ಯದ ಜನತೆ ಇಂತಹ ಸಂಕಷ್ಟದಲ್ಲಿರುವಾಗಲೇ, ರಾಜ್ಯದ ಜನರ ಜೊತೆ ಚರ್ಚಿಸದೇ, ಪ್ರಜಾಸತ್ತಾತ್ಮಕ ಸಂಘ ಸಂಸ್ಥೆಗಳ ಜೊತೆಗೂ ಮಾತನಾಡದೇ, ವಿರೋಧ ಪಕ್ಷದ ಗಮನಕ್ಕೆ ಬಾರದೇ, ವಿಧಾನ ಸಭೆಯಲ್ಲೂ ಚರ್ಚೆಗೆ ತಾರದೇ, ರಾಜ್ಯ ಸರಕಾರ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗಾಗಿ ಇದ್ದ ಮಿತಿಯನ್ನು ದ್ವಿಗುಣಗೊಳಿಸಿತು..

ಕೇಂದ್ರ ಸರಕಾರದ ಸೂಚನೆಯ ಮೇರೆಗೆ ಕೃಷಿಕರು, ದಲಿತರ ವಿರುದ್ಧವಾಗಿರುವ – ಭೂಸುಧಾರಣಾ ತಿದ್ದುಪಡಿ ಕಾಯ್ದೆ 2020, ಕೃಷಿ ಮಾರುಕಟ್ಟೆಯನ್ನು ಕಳಚಿ ಹಾಕುವ ಎಪಿಎಂಸಿ ತಿದ್ದುಪಡಿ ಕಾಯ್ದೆ 2020, ಭೂಸ್ವಾಧೀನ ಕಾಯ್ದೆ ಮತ್ತು ಭೂಮಂಜೂರಾತಿ ಕಾಯ್ದೆಗಳನ್ನು ದುರ್ಬಲಗೊಳಿಸುವ, ಹಾಗೂ ಕಾರ್ಪೋರೇಟ್ ಕಂಪನಿಗಳು ಮುಂಗಡ ವ್ಯಾಪಾರಿ ಕೃಷಿಯಲ್ಲಿ ತೊಡಗಲು ಅನುಕೂಲ ಮಾಡಿಕೊಡುವ ಮತ್ತು ಗ್ರಾಹಕರನ್ನು ಲೂಟಿಗೊಳಪಡಿಸುವ ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆ 2020 – ಗಳನ್ನು ತರಾತುರಿಯಲ್ಲಿ ಸುಗ್ರೀವಾಜ್ಞೆಗಳ ಮೂಲಕ ಪ್ರಕಟಿಸಿದೆ.

ಈ ತಿದ್ದುಪಡಿ ಕಾಯ್ದೆಗಳು, ರಾಜ್ಯದ ಕೃಷಿಯನ್ನು, ಕೃಷಿ ಭೂಮಿಗಳನ್ನು, ಕೃಷಿ ಹಾಗೂ ಗ್ರಾಹಕ ಮಾರುಕಟ್ಟೆಗಳನ್ನು, ಕೃಷಿ ಆಧಾರಿತ ಕೈಗಾರಿಕೆಗಳನ್ನು ಮಾತ್ರವಲ್ಲ, ಚಿಲ್ಲರೆ ವ್ಯಾಪಾರಿ ಕ್ಷೇತ್ರಗಳನ್ನು ವ್ಯಾಪಕವಾಗಿ ಮತ್ತು ಗಂಭೀರವಾಗಿ ಬಾಧಿಸಲಿವೆ. ಈ ಎಲ್ಲಾ ಕ್ಷೇತ್ರಗಳು ಮುಂದೆ ಲೂಟಿಕೋರ ಕಾರ್ಪೋರೇಟ್ ಕಂಪನಿಗಳ ಕೈ ವಶವಾಗಲಿವೆ.

ರಾಜ್ಯದ 65 ಲಕ್ಷ ಕೃಷಿಕರು, 75 ಲಕ್ಷ ಕೂಲಿಕಾರರು, ಕಸುಬುದಾರರು, ಮಿಲಿಯಾಂತರ ಸಣ್ಣ ಹಾಗೂ ಮಧ್ಯಮ ವ್ಯಾಪಾರಿಗಳು, ಲಕ್ಷಾಂತರ ಸಣ್ಣ ಹಾಗೂ ಮಧ್ಯಮ ಕೈಗಾರಿಗಳು ಮತ್ತು ಅಲ್ಲಿನ ಮಿಲಿಯಾಂತರ ಕಾರ್ಮಿಕರು ಮುಂತಾದ ಬಹುಸಂಖ್ಯಾತರು ಉದ್ಯೋಗಗಳನ್ನು ಮುಂದೆ ಕಳೆದುಕೊಳ್ಳಲಿದ್ದಾರೆ.

ಇದು ಮಾತ್ರವೇ ಅಲ್ಲ, ರಾಜ್ಯದ ಕಾರ್ಮಿಕರ ಕೆಲಸದ ದಿನದ ಅವಧಿಯನ್ನು ಹೆಚ್ಚಿಸಲು ಪ್ರಯತ್ನಿಸಿದೆ ಮತ್ತು ಕಾರ್ಮಿಕ ಕಾಯ್ದೆಗಳಿಗೆ, ಕಾರ್ಮಿಕರ ವಿರುದ್ಧವಾಗಿ ಹಾಗೂ ಮಾಲೀಕರು/ಬಂಡವಾಳದಾರರ ಪರವಾಗಿ ತಿದ್ದುಪಡಿಗಳನ್ನು ಮಾಡಿ ಸುಗ್ರೀವಾಜ್ಞೆ ಹೊರಡಿಸಲಾಗಿದೆ. ಇದರಿಂದ ಬಹುತೇಕ ಕಾರ್ಮಿಕರು ಇದ್ದ ಬದ್ದ ಹಕ್ಕುಗಳು ಕಾನೂನಿನ ರಕ್ಷಣೆಗಳನ್ನು ಕಳೆದುಕೊಂಡು ತೀವ್ರ ರೀತಿಯ ಮಾಲೀಕರ ದಬ್ಬಾಳಿಕೆಗೊಳಗಾಗಲಿದ್ದಾರೆ.

ಇದು ಬಿಜೆಪಿ ಹಾಗೂ ಯೆಡೆಯೂರಪ್ಪನವರ ಸರಕಾರ ರಾಜ್ಯದ ಜನತೆ ಹಾಗೂ ನಾಗರೀಕರ ಮೇಲೆ ಮೆರೆದ ಕ್ರೌರ್ಯ ಮತ್ತು ಹೇರಿದ ಕಾರ್ಪೋರೇಟ್ ಲೂಟಿಕೋರ ಸರ್ವಾಧಿಕಾರವಾಗಿದೆ.

ರಾಜ್ಯವನ್ನು ಆರ್ಥಿಕ ಬಿಕ್ಕಟ್ಟಿನಿಂದ ಪಾರು ಮಾಡುವ ಬದಲು ಮತ್ತಷ್ಟು ಆಳವಾದ ಬಿಕ್ಕಟ್ಟಿಗೆ ದೂಡುವ ಮತ್ತು ಕಾರ್ಪೋರೇಟ್ ಕಂಪನಿಗಳ ಗುಲಾಮಿಕೆಗೆ ರಾಜ್ಯವನ್ನು ಒಳಪಡಿಸುವ ದುರ್ನಡೆಯಾಗಿದೆ. ●

ವಿತ್ತೀಯ ಕೊರತೆಯಲ್ಲಿ ಇರುವ ತಪ್ಪೇನು?

ಭಾರತದ ಪ್ರಸಕ್ತ ಸನ್ನಿವೇಶದಲ್ಲಿ ಸರ್ಕಾರಿ ವೆಚ್ಚಗಳ ಏರಿಕೆ ಅನಿವಾರ್ಯ. ಆದರೆ ಇದನ್ನು ವಿತ್ತೀಯ ಕೊರತೆಯನ್ನು ಹೆಚ್ಚಿಸುವ ಮೂಲಕ ಮಾಡಬಾರದು, ಅದು ಹಣದುಬ್ಬರ ತರುತ್ತದೆ, ಆದ್ದರಿಂದ ಖಾಸಗೀಕರಣದ ಮೂಲಕ ಮಾಡಬೇಕು ಎಂದು ಪ್ರತಿಪಾದಿಸಲಾಗುತ್ತದೆ. ಆದರೆ ಇದು ತಪ್ಪು, ಇವೆರಡರ ನಡುವೆ ವ್ಯತ್ಯಾಸವೇನೂ ಇಲ್ಲ, ಎರಡೂ ಸಮಾಜದಲ್ಲಿ ಸಂಪತ್ತಿನ ಅಸಮಾನತೆಯನ್ನು ಮತ್ತಷ್ಟು ಹೆಚ್ಚಿಸುತ್ತವೆ ಎಂಬ ಅಂಶದ ಬಗ್ಗೆ ಇರುವ ಅಜ್ಞಾನದ ಅಥವ ನಿರ್ಲಕ್ಷ್ಯದ ಪ್ರದರ್ಶನವಾಗಿದೆಯಷ್ಟೇ. ಅರ್ಥವ್ಯವಸ್ಥೆಯು ಉತ್ತೇಜನಗೊಳ್ಳಬೇಕು ಮತ್ತು ಸಂಪತ್ತಿನ ಅಸಮಾನತೆಯು ಇನ್ನಷ್ಟು ಭಯಾನಕ, ಹೊಲಸು ಮಟ್ಟಕ್ಕೇರದಂತೆ ತಡೆಯಬೇಕು ಎಂದಿದ್ದರೆ, ಸಾಧ್ಯವಿರುವ ಏಕೈಕ ಮಾರ್ಗವೆಂದರೆ, ಕಾರ್ಪೊರೇಟ್‌ಗಳ ಲಾಭಗಳ ಮೇಲೆ ತೆರಿಗೆ ಅಥವಾ ಶ್ರೀಮಂತರ ಸಂಪತ್ತಿನ ಮೇಲೆ ತೆರಿಗೆ ಹೇರುವ ಮೂಲಕ ಸರ್ಕಾರದ ಹೆಚ್ಚುವರಿ ಖರ್ಚುಗಳಿಗೆ ಹಣವನ್ನು ಹೊಂದಿಸಿಕೊಳ್ಳುವುದು.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ್

ಈ ಪತ್ರಿಕೆಯ ಅಂಕಣಗಳಲ್ಲಿ ವಿತ್ತೀಯ ಕೊರತೆಯ ಬಗ್ಗೆ ಸಾಕಷ್ಟು ಬರೆಯಲಾಗಿದೆ. ಆದರೂ, ಈ ಬಗ್ಗೆ ಹಣಕಾಸು ಬಂಡವಾಳದ ಪ್ರತಿನಿಧಿಗಳು, ವಿಶ್ವ ಬ್ಯಾಂಕ್, ಐಎಂಎಫ್ ಮತ್ತಿತರರು ಅದನ್ನು ಒಂದು ಅಪಾಯ ಎನ್ನುವ ರೀತಿಯಲ್ಲಿ ಪದೇ ಪದೇ ಪ್ರಸ್ತಾಪಿಸುತ್ತಿರುವುದರಿಂದ, ಮತ್ತೆ ಮತ್ತೆ ಅದರ ಎದುರಾಗಿ ಪ್ರತಿಕ್ರಿಯಿಸಲೇಬೇಕಾಗುತ್ತದೆ.

ಪ್ರಸಕ್ತ ಸನ್ನಿವೇಶದಲ್ಲಿ ವಿತ್ತೀಯ ಕೊರತೆಯ ಚರ್ಚೆಯು ಒಂದು ತುರ್ತನ್ನು ಪಡೆದುಕೊಂಡಿದೆ. ಏಕೆಂದರೆ, ಕೊರೋನಾ ಸಾಂಕ್ರಾಮಿಕ ಕಾರಣದ ಲಾಕ್‌ಡೌನ್‌ನಿಂದಾಗಿ ಭಾರತವೂ ಸೇರಿದಂತೆ ಜಗತ್ತಿನಾದ್ಯಂತ ಎಲ್ಲ ದೇಶಗಳ ಸರ್ಕಾರಗಳ ಆದಾಯಗಳೂ ಗಣನೀಯವಾಗಿ ಕುಸಿದಿವೆ. ಆದರೂ ಸಹ, ಈ ಸಮಯದಲ್ಲಿ ಸಂತ್ರಸ್ತರಿಗೆ ಆರೋಗ್ಯದ ಆರೈಕೆ ಮತ್ತು ಲಾಕ್‌ಡೌನ್ ಕಾರಣದಿಂದ ತೊಂದರೆಗೊಳಗಾದ ಜನರಿಗೆ ಸೂಕ್ತ ಪರಿಹಾರ ಒದಗಿಸಲು ಸರ್ಕಾರಗಳು ಭಾರೀ ಪ್ರಮಾಣದ ಹಣ ಖರ್ಚು ಮಾಡಬೇಕಾಗುತ್ತದೆ. ಇಂತಹ ಅನಿವಾರ್ಯ ಖರ್ಚುಗಳಿಂದಾಗಿ ಸರ್ಕಾರಗಳಿಗೆ ಹಣ ಕಾಸಿನ (ವಿತ್ತೀಯ) ವಿಪರೀತ ಕೊರತೆ ಉಂಟಾಗಿದೆ.

ಇಂತಹ ವಿತ್ತೀಯ ಕೊರತೆಯ ಹಿನ್ನೆಲೆಯಲ್ಲಿ, ಸಂಪೂರ್ಣವಾದ ಎರಡು ತಪ್ಪು ಪ್ರತಿಪಾದನೆಗಳನ್ನು ಹಣಕಾಸು ಪ್ರತಿನಿಧಿಗಳು ಮಂಡಿಸುತ್ತಾರೆ. ಮೊದಲನೆಯದು, ವಿತ್ತೀಯ ಕೊರತೆಯು ಜಿಡಿಪಿಯ ಒಂದು ನಿರ್ದಿಷ್ಟ ಪ್ರಮಾಣ(ಸಾಮಾನ್ಯವಾಗಿ ಶೇ.3) ಕ್ಕಿಂತ ಹೆಚ್ಚದಂತೆ ಸದಾ ಕಾಲವೂ ನೋಡಿಕೊಳ್ಳಬೇಕು. ಏಕೆಂದರೆ, ವಿತ್ತೀಯ ಕೊರತೆಯು ಒಂದೋ ಹಣದುಬ್ಬರ ಉಂಟುಮಾಡುತ್ತದೆ ಇಲ್ಲವೇ ಖಾಸಗಿ ಹೂಡಿಕೆಯನ್ನು ಉಸಿರುಗಟ್ಟಿಸುತ್ತದೆ. ವಿತ್ತೀಯ ಕೊರತೆಯನ್ನು ನೀಗಿಸಿಕೊಳ್ಳುವ ಸಲುವಾಗಿ ಕೇಂದ್ರ ಬ್ಯಾಂಕಿನಿಂದ ಸಾಲ ಪಡೆದರೆ ಹಣದುಬ್ಬರಕ್ಕೆ ಕಾರಣವಾಗಬಹುದು ಅಥವಾ ಖಾಸಗಿ ವಲಯದಿಂದ ಸರ್ಕಾರ ಸಾಲ ಮಾಡಿದರೆ, ಖಾಸಗಿ ಬಂಡವಾಳ ಹೂಡಿಕೆಯು ಉಸಿರುಗಟ್ಟುತ್ತದೆ. ಇದು ಹಣಕಾಸು ಬಂಡವಾಳದ ನಿಲುವು.

ವಿತ್ತೀಯ ಕೊರತೆಯ ಬಗ್ಗೆ ತಪ್ಪಾದ ಅವರ ಎರಡನೆಯ ಪ್ರತಿಪಾದನೆ ಎಂದರೆ, ಆದಾಯದ ಕೊರತೆಯನ್ನು ನಿವಾರಿಸಿಕೊಳ್ಳುವ ಸಲುವಾಗಿ ಸರ್ಕಾರವು ಸಾರ್ವಜನಿಕ ವಲಯದ ಕಂಪೆನಿಗಳ ಷೇರುಗಳನ್ನು ಅಥವಾ ಸರ್ಕಾರಿ ಭೂಮಿಯಂತಹ ಸ್ವಂತ ಆಸ್ತಿಗಳನ್ನು ಮಾರಾಟ ಮಾಡಬಹುದು. ಅವರ ಪ್ರಕಾರ, ಇಂತಹ ಕ್ರಮದಿಂದ ಯಾವುದೇ ದುಷ್ಪರಿಣಾಮ ಆಗುವುದಿಲ್ಲ. ಏಕೆಂದರೆ, ಈ ಆಸ್ತಿಗಳ ಮಾರಾಟದಿಂದ ಬರುವ ಆದಾಯವನ್ನು, ತೆರಿಗೆ ಆದಾಯದ ರೀತಿಯಲ್ಲಿ, ಅದನ್ನೂ, ಸರ್ಕಾರದ ಆದಾಯ ಎಂದು ತೋರಿಸಲಾಗುತ್ತದೆ. ಹಾಗಾಗಿ ವಿತ್ತೀಯ ಕೊರತೆ ಇರುವುದೇ ಇಲ್ಲ ಎಂಬುದು. ಈ ಎರಡೂ ಪ್ರತಿಪಾದನೆಗಳೂ ಏಕೆ ತಪ್ಪಾಗಿವೆ ಎಂಬುದನ್ನು ಒಂದೊಂದಾಗಿ ಪರಿಶೀಲಿಸೋಣ.

ಮೊದಲನೆಯದಾಗಿ, ಹಣದುಬ್ಬರ ಯಾವಾಗ ಮತ್ತು ಏಕೆ ಉದ್ಭವಿಸುತ್ತದೆ ಎಂಬುದನ್ನು ನೋಡೋಣ. ಸ್ಥಾಪಿತ ಉತ್ಪಾದನಾ ಸಾಮರ್ಥ್ಯವು ಪೂರ್ಣವಾಗಿ ಬಳಕೆಯಾಗದ ಮತ್ತು ನಿರುದ್ಯೋಗವಿರುವ ಅರ್ಥವ್ಯವಸ್ಥೆಯಲ್ಲಿ (ಅಂದರೆ, ಬೇಡಿಕೆಯು ಕುಂಠಿತವಾಗಿರುವ ಅರ್ಥವ್ಯವಸ್ಥೆ) ವಿತ್ತೀಯ ಕೊರತೆಯನ್ನು ನೀಗಿಸಿಕೊಳ್ಳುವ ಸಲುವಾಗಿ ಕೇಂದ್ರ ಬ್ಯಾಂಕಿನಿಂದ ಸಾಲ ಪಡೆದರೆ ಅದರಿಂದ ಹಣದುಬ್ಬರ ಉಂಟಾಗಿಯೇ ತೀರುತ್ತದೆ ಎಂದೇನಿಲ್ಲ. ಸರಕು–ಸಾಮಗ್ರಿಗಳಿಗೆ ಬೇಡಿಕೆ ಇದ್ದಾಗಲೂ ಸಹ ಅದಕ್ಕನುಗುಣವಾಗಿ ಅವುಗಳ ಪೂರೈಕೆಯು ಹೆಚ್ಚಾಗದೇ ಇದ್ದಾಗ ಮಾತ್ರ ಹಣದುಬ್ಬರ ಉಂಟಾಗುತ್ತದೆ. ಆದರೆ, ಬೇಡಿಕೆಯು ಕುಂಠಿತವಾಗಿರುವ ಒಂದು ಅರ್ಥವ್ಯವಸ್ಥೆಯಲ್ಲಿ, ಸರಕು–ಸಾಮಗ್ರಿಗಳಿಗೆ ಬೇಡಿಕೆ ಹೆಚ್ಚಿದ ಕೂಡಲೆ ಅದಕ್ಕನುಗುಣವಾಗಿ ಈ ಸರಕು–ಸಾಮಗ್ರಿಗಳ ಉತ್ಪಾದನೆಯೂ ಹೆಚ್ಚುವುದರಿಂದ ಪೂರೈಕೆಯೂ ಹೆಚ್ಚುತ್ತದೆ. ಹಾಗಾಗಿ, ಈ ಸನ್ನಿವೇಶದಲ್ಲಿ ಈ ಸರಕು–ಸಾಮಗ್ರಿಗಳ ಬೆಲೆಗಳು ಹೆಚ್ಚಾಗುವುದಿಲ್ಲ, ಏಕೆಂದರೆ, ಪೂರೈಕೆಯು ತಕ್ಷಣವೇ ಒದಗಿ ಬರುತ್ತದೆ. ಹಾಗಾಗಿ, ಬಳಕೆಯಾಗದ ಸಾಮರ್ಥ್ಯ ಮತ್ತು ನಿರುದ್ಯೋಗದಂತಹ ಎರಡೂ ಅಂಶಗಳಿರುವ ಪ್ರಸ್ತುತ ಸನ್ನಿವೇಶದಲ್ಲಿ, ವಿತ್ತೀಯ ಕೊರತೆಯ ಪರಿಸ್ಥಿತಿಯು ಹಣದುಬ್ಬರಕ್ಕೆ ಕಾರಣವಾಗುವ ಪ್ರಶ್ನೆಯೇ ಇಲ್ಲ.

ಸರ್ಕಾರವು ಸಾಲ ಮಾಡುವ ಸಂದರ್ಭದಲ್ಲಿ ಅದನ್ನು ಕೇಂದ್ರೀಯ ಬ್ಯಾಂಕ್‌ನಿಂದ ಪಡೆಯಬಹುದು ಅಥವಾ ಖಾಸಗಿ ವಲಯದಿಂದಲೂ ಪಡೆಯಬಹುದು. ಸಾಲ ದೊರೆಯುವ ಈ ಮೂಲಗಳ ನಡುವಿನ ವ್ಯತ್ಯಾಸವು ದೊಡ್ಡದೇನಲ್ಲ. ಒಂದೇ ಒಂದು ವ್ಯತ್ಯಾಸವೆಂದರೆ: ಕೇಂದ್ರ ಬ್ಯಾಂಕಿನಿಂದ ಸಾಲ ಪಡೆದರೆ, ಅದು ನೋಟುಗಳನ್ನು ಮುದ್ರಿಸಿ ಹಣವನ್ನು ಸರ್ಕಾರಕ್ಕೆ ಒದಗಿಸುತ್ತದೆ. ಸರ್ಕಾರವು ಈ ಹಣವನ್ನು ಖರ್ಚು ಮಾಡುವ ಮೂಲಕ ಅದನ್ನು ಖಾಸಗಿ ಕೈಗಳಿಗೆ ಹಾಕುತ್ತದೆ. ಖಾಸಗಿ ವಲಯದಿಂದ ಸರ್ಕಾರ ಸಾಲ ಪಡೆದಲ್ಲಿ, ಆಗ ಸರ್ಕಾರವು ಖಾಸಗಿಯವರ ಕೈಗೆ ಬಾಂಡ್‌ಗಳನ್ನು ಕೊಡುತ್ತದೆ. ಹೀಗೆ ಖಾಸಗಿಯವರ ಕೈಯಲ್ಲಿ ಹಣವನ್ನು ಇಟ್ಟಾಗ ಅವರು ಅದರ ಮೇಲಿನ ಹಕ್ಕುದಾವೆಯನ್ನು (claim) ಕೇಂದ್ರ ಬ್ಯಾಂಕಿನ ಮೇಲಿಡುತ್ತಾರೆ. ಆ ಹಣವನ್ನು ಮುದ್ರಿಸಿ ನೀಡಿಕೆ ಮಾಡಿದ ಕಾರಣದಿಂದ ಕೇಂದ್ರ ಬ್ಯಾಂಕ್ ತನ್ನ ಹಕ್ಕುಗಳನ್ನು ಸರ್ಕಾರದ ಮೇಲೆ ಸ್ಥಾಪಿಸಿಕೊಳ್ಳುತ್ತದೆ. ಆದ್ದರಿಂದ, ಖಾಸಗಿಯವರ ದಾವೆ (claim) ಸರ್ಕಾರದ ಮೇಲೆ ಪರೋಕ್ಷವಾಗಿರುತ್ತದೆ. ಸರ್ಕಾವು ಸಾಲವನ್ನು ಖಾಸಗಿ ವಲಯದಿಂದ ಪಡೆದಾಗ ಖಾಸಗಿಯವರ ಕ್ಲೇಮ್ ಸರ್ಕಾರದ ಮೇಲೆ ನೇರವಾಗಿರುತ್ತದೆ. ಈ ಎರಡೂ ಸನ್ನಿವೇಶಗಳ ನಡುವೆ ಇರುವ ವ್ಯತ್ಯಾಸವು ಇಷ್ಟೇ.

ಒಂದು ವೇಳೆ ಸರ್ಕಾರವು ತನ್ನ ವಿತ್ತೀಯ ಕೊರತೆಯನ್ನು ನೀಗಿಸಿಕೊಳ್ಳಲು ಖಾಸಗಿ ವಲಯದಿಂದ ಸಾಲ ಪಡೆದರೆ, ಅದು ಖಾಸಗಿ ಬಂಡವಾಳದ ಹೂಡಿಕೆಯನ್ನು ಉಸಿರುಗಟ್ಟಿಸಬಹುದು ಎಂಬ ಪ್ರತಿಪಾದನೆಯ ಇನ್ನೊಂದು ಅಂಶದತ್ತ ಬರೋಣ. ಈ ಅಂಶವನ್ನು ಒಂದು ಸರಳ ಉದಾಹರಣೆಯ ಮೂಲಕ ಅರ್ಥಮಾಡಿಕೊಳ್ಳಬಹುದು. ವಿಷಯದ ಸರಳತೆಗಾಗಿ, ಒಂದು ನಿರ್ಬಂಧಿತ ಅರ್ಥವ್ಯವಸ್ಥೆ ಇದೆ ಎಂದು ಕಲ್ಪಿಸಿಕೊಳ್ಳೋಣ. ಅಲ್ಲಿ ಸರ್ಕಾರವು 100 ರೂಪಾಯಿ ಸಾಲ ಮಾಡಿ ಇಡೀ ಹಣವನ್ನು ಖರ್ಚು ಮಾಡುತ್ತದೆ. ಅರ್ಥವ್ಯವಸ್ಥೆಯಲ್ಲಿ 400 ರೂ. ಆದಾಯ ಸೃಷ್ಟಿಯಾಗುತ್ತದೆ. ಅದರಲ್ಲಿ, ಕೂಲಿಯ ಪಾಲು 200 ರೂ ಮತ್ತು ಲಾಭದ ಪಾಲು 200 ರೂ.ಇದೆ. ಕಾರ್ಮಿಕರು ಏನನ್ನೂ ಉಳಿಸಿಕೊಳ್ಳಲಾಗುವುದಿಲ್ಲ. ಆದರೆ ಬಂಡವಾಳಗಾರರು 100 ರೂಪಾಯಿಗಳನ್ನು (ತಮ್ಮ ಲಾಭದಲ್ಲಿ ಅರ್ಧದಷ್ಟನ್ನು) ಉಳಿತಾಯ ಮಾಡುತ್ತಾರೆ. ಆದ್ದರಿಂದ, 400 ರೂ ಆದಾಯದಲ್ಲಿ 300ರೂ ಬಳಕೆಯಾಗುತ್ತದೆ ಮತ್ತು 100 ರೂ ಉಳಿತಾಯವಾಗುತ್ತದೆ. ಅಂದರೆ, ಸರ್ಕಾರ ಎಷ್ಟು ಹಣವನ್ನು ಸಾಲ ಮಾಡಿ ಖರ್ಚು ಮಾಡಿತ್ತೋ ಅಷ್ಟೇ ಹಣ ಬಂಡವಾಳಗಾರರ ಕೈ ಸೇರುತ್ತದೆ; ಬಂಡವಾಳಗಾರರಿಗೂ ಸರ್ಕಾರದ ಖರ್ಚುಗಳಿಗೂ ಯಾವ ಸಂಬಂಧವಿಲ್ಲದಿದ್ದರೂ ಸಹ. ಹಾಗಾಗಿ, ಖಾಸಗಿ ಬಂಡವಾಳದ ಹೂಡಿಕೆಯ ಉಸಿರುಗಟ್ಟುತ್ತದೆ ಎನ್ನುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಸಾಲ ಪಡೆದು ಖರ್ಚು ಮಾಡಿದ ಹಣವು, ಖಾಸಗಿ ಹೂಡಿಕೆಗಿಂತಲೂ ಹೆಚ್ಚು ಮಟ್ಟದ ಖಾಸಗಿ ಉಳಿತಾಯಗಳನ್ನು ಸೃಷ್ಟಿಸುತ್ತದೆ. ಎಷ್ಟು ಎಂದರೆ, ಒಂದು ನಿರ್ಬಂಧಿತ ಅರ್ಥವ್ಯವಸ್ಥೆಯಲ್ಲಿ ಎಷ್ಟು ಅಧಿಕ ಖಾಸಗಿ ಉಳಿತಾಯಗಳು ಸೃಷ್ಟಿಯಾಗುತ್ತಿದ್ದವೋ ಅಷ್ಟು.

ಸರ್ಕಾರದ ವೆಚ್ಚಗಳಿಗೆ ಹಣ ಹೊಂದಿಸಿಕೊಳ್ಳಲು ವಿತ್ತೀಯ ಕೊರತೆಯು ಒಂದು ಉತ್ತಮ ವಿಧಾನವೇನಲ್ಲ ಎಂಬ ಅಂಶವು ನಮಗೆ ಇದರಿಂದ ತಿಳಿದು ಬರುತ್ತದೆ. ಆದರೆ ಅದು ಹಾಗಾಗಿರುವುದು ಹಣಕಾಸು ಬಂಡವಾಳದ ಪ್ರತಿನಿಧಿಗಳು ವಿತ್ತೀಯ ಕೊರತೆಯು ಸರಿಯಲ್ಲ ಎಂಬುದಕ್ಕೆ ಕೊಡುವ ನಕಲಿ ತರ್ಕಗಳಿಂದಾಗಿ ಅಲ್ಲ. ಅದೇನೇ ಇರಲಿ, ವಿತ್ತೀಯ ಕೊರತೆಯು ಸಂಪತ್ತಿನ ಅಸಮಾನತೆಯನ್ನು ಹೆಚ್ಚಿಸುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ವಿತ್ತೀಯ ಕೊರತೆಯನ್ನು ಸರಿದೂಗಿಸಿಕೊಳ್ಳಲು ಸಾಲ ಮಾಡುವುದರ ಬದಲಾಗಿ, ಸರ್ಕಾರವು ಬಂಡವಾಳಗಾರರ ಲಾಭದ ಮೇಲೆ ತೆರಿಗೆ ಹಾಕಿದರೆ ಅಥವಾ ಶ್ರೀಮಂತರ ಸಂಪತ್ತಿನ ಮೇಲೆ ತೆರಿಗೆ ಹಾಕಿದರೆ ತನ್ನ ಖರ್ಚುಗಳಿಗೆ ಕಡಿಮೆ ಬೀಳುವ ಹಣವನ್ನು ಸುಲಭವಾಗಿ ಹೊಂದಿಸಿಕೊಳ್ಳಬಹುದು. ಆಗ. ತೆರಿಗೆಯ ನಂತರವೂ ಬಂಡವಾಳಗಾರರ ಸಂಪತ್ತು ಇದ್ದ ಹಾಗೆಯೇ ಇರುತ್ತದೆಯೇ ವಿನಃ ಎಳ್ಳಷ್ಟೂ ಕಡಿಮೆಯಾಗುವುದಿಲ್ಲ. ಸಂಪತ್ತು ತೆರಿಗೆ ಹಾಕದಿದ್ದರೆ ಬಂಡವಾಳಗಾರರ ಸಂಪತ್ತು ವೃದ್ಧಿಸುತ್ತದೆ; ಎಷ್ಟು ಎಂದರೆ, ವಿತ್ತೀಯ ಕೊರತೆಯ ಮೊತ್ತದಷ್ಟು. ಆದ್ದರಿಂದ, ವಿತ್ತೀಯ ಕೊರತೆಯು ದೇಶದಲ್ಲಿ ಸಂಪತ್ತಿನ ಅಸಮಾನತೆಯನ್ನು ಹೆಚ್ಚಿಸುತ್ತದೆ.

ವಿತ್ತೀಯ ಕೊರತೆಯು ಸಂಪತ್ತನ್ನು ಬಂಡವಾಳಗಾರರ ಕೈಗೆ ಹಾಕುತ್ತದೆ. ಆ ಸಂಪತ್ತನ್ನು ಸಂಪಾದಿಸಲು ಬಂಡವಾಳಗಾರರರು ಏನನ್ನೂ ಮಾಡಿರುವುದಿಲ್ಲ. ಆದ್ದರಿಂದ ತೆರಿಗೆ ಮೂಲದಿಂದ ಬಂದ ಹಣವನ್ನು ಖರ್ಚು ಮಾಡುವ ಕ್ರಮದೊಂದಿಗೆ ಹೋಲಿಸಿದಾಗ, ವಿತ್ತೀಯ ಕೊರತೆಯು ಅರ್ಥವ್ಯವಸ್ಥೆಯಲ್ಲಿ ವಿನಾಕಾರಣ ಸಂಪತ್ತಿನ ಅಸಮಾನತೆಯನ್ನು ಹೆಚ್ಚಿಸುತ್ತದೆ. ಈ ಕಾರಣದಿಂದ ಅದು ನಿಜಕ್ಕೂ ತಪ್ಪು.

ವಿತ್ತೀಯ ಕೊರತೆಯ ಬಗ್ಗೆ ತಪ್ಪಾದ ಎರಡನೆಯ ಪ್ರತಿಪಾದನೆಯು ಸಾರ್ವಜನಿಕ ವಲಯದ ಆಸ್ತಿ/ಭೂಮಿಯಂತಹ ಸ್ವತ್ತುಗಳ ಮಾರಾಟಕ್ಕೆ ಸಂಬಂಧಿಸುತ್ತದೆ. ಸರ್ಕಾರಿ ಆಸ್ತಿಗಳ ಮಾರಾಟದಿಂದ ಬಂದ ಹಣವನ್ನು ಸರ್ಕಾರದ ವೆಚ್ಚಗಳಿಗೆ ಬಳಸಿಕೊಳ್ಳುವ ವಿಚಾರದಲ್ಲಿ, ಐಎಂಎಫ್ ಅದನ್ನು ವಿತ್ತೀಯ ಕೊರತೆಯ ಭಾಗವೆಂದು ಪರಿಗಣಿಸುವುದಿಲ್ಲ. ಇದು ಅಸಂಬದ್ಧ. ಏಕೆಂದರೆ, ಸಾರ್ವಜನಿಕ ವಲಯದ ಕಂಪೆನಿಗಳ ಷೇರುಗಳನ್ನು (ಈಕ್ವಿಟಿಯನ್ನು) ಖಾಸಗಿಯವರಿಗೆ ಮಾರಾಟ ಮಾಡಿದಾಗ, ಸರಕಾರದ ಮೇಲೆ ಬಂಡವಾಳಗಾರರ ದಾವೆಯ ಸ್ವರೂಪ ಮಾತ್ರ ಬದಲಾಗುತ್ತದೆ (ನೇರವಾಗಿ ಹಣ ಕೊಟ್ಟು ಷೇರು ಪತ್ರ ಪಡೆಯುತ್ತಾರೆ). ಸರ್ಕಾರಿ ಸ್ವತ್ತುಗಳ ಮಾರಾಟದ ಪರಿಣಾಮವು ಸಾಂಪ್ರದಾಯಿಕ ವಿತ್ತೀಯ ಕೊರತೆಯನ್ನು ನಿಭಾಯಿಸುವ ರೀತಿಯಲ್ಲಿ ನೋಡಿದಾಗ ಸ್ವಲ್ಪವೂ ಭಿನ್ನವಾಗಿಲ್ಲದ ಕಾರಣದಿಂದ, ಅಂದರೆ, ಸರ್ಕಾರಿ ಬಾಂಡ್‌ಗಳ ಮಾರಾಟದಿಂದ ಬರುವ ಹಣವನ್ನು ಪರಿಗಣಿಸುವ ರೀತಿಯಲ್ಲೇ ಸರ್ಕಾರಿ ಸ್ವತ್ತುಗಳ ಮಾರಾಟದಿಂದ ಬರುವ ಹಣವನ್ನೂ ಸಹ ವಿತ್ತೀಯ ಕೊರತೆಯ ಭಾಗವೆಂದೇ ಪರಿಗಣಿಸಬೇಕಾಗುತ್ತದೆ.

ಆದರೆ, ಐಎಂಎಫ್ ಈ ವ್ಯವಹಾರವನ್ನು ಬೇರೆ ರೀತಿಯಲ್ಲೇ ಏಕೆ ನೋಡುತ್ತದೆ? ಕಾರಣ, ಸಂಪೂರ್ಣವಾಗಿ ಸೈದ್ಧಾಂತಿಕ. ಬಾಂಡ್‌ಗಳ ಮಾರಾಟ ಮತ್ತು ಭೂಮಿಯ ಮಾರಾಟಗಳ ನಡುವೆ ಯಾವುದೇ ವ್ಯತ್ಯಾಸವಿಲ್ಲ. ಸರ್ಕಾರವು ಸಾಲ ಎತ್ತುವಾಗ ಬಾಂಡ್‌ಗಳ ಮೇಲಿನ ದಾವೆಯನ್ನು ಬಂಡವಾಳಿಗರ ಕೈಯಲ್ಲಿಡುತ್ತದೆ. ಷೇರುಗಳನ್ನು ಮಾರಿದಾಗ ಅವುಗಳನ್ನು ಬಂಡವಾಳಿಗರ ಕೈಯಲ್ಲಿಡುತ್ತದೆ. ಬಾಂಡ್‌ಗಳ ಮಾರಾಟವನ್ನು ವಿತ್ತೀಯ ಕೊರತೆಯ ಭಾಗವೆಂದು ಪರಿಗಣಿಸಿಸುವ ಐಎಂಎಫ್ ಅದನ್ನು ಕೆಂಗಣ್ಣಿನಿಂದ ನೋಡುತ್ತದೆ. ಆದರೆ, ಬಂಡವಾಳಗಾರರ ಕೈಯಲ್ಲಿ ಷೇರುಗಳನ್ನು ಇಡುವಾಗ ಅದನ್ನು ಸ್ವಾಗತಿಸುತ್ತದೆ. ಏಕೆಂದರೆ, ಸಾರ್ವಜನಿಕ ವಲಯವನ್ನು ಖಾಸಗೀಕರಣಕ್ಕೆ ಒಳಪಡಿಸಬೇಕು ಎಂಬುದೇ ಅದರ ಬಯಕೆ. ಈ ಸೈದ್ಧಾಂತಿಕ ಒಲವು–ನಿಲುವಿನಿಂದಾಗಿಯೇ ಐಎಂಎಫ್ ಸಾರ್ವಜನಿಕ ವಲಯದ ಈಕ್ವಿಟಿಯ ಮಾರಾಟವನ್ನು ವಿತ್ತೀಯ ಕೊರತೆಯ ಭಾಗವೆಂದು ಪರಿಗಣಿಸಬಾರದು ಎಂಬ ಸೋಗು ಹಾಕುತ್ತದೆ.

ಸರ್ಕಾರಿ ಜಮೀನು ಮಾರಾಟಕ್ಕೂ ಇದೇ ಮಾತನ್ನು ಹೇಳಬಹುದು. ಸರ್ಕಾರಿ ಜಮೀನು ಮಾರಾಟದ ಮತ್ತು ಸರ್ಕಾರದ ಬಾಂಡ್‌ಗಳ ಮಾರಾಟದ (ವಿತ್ತೀಯ ಕೊರತೆಯ ಕಾರಣದಿಂದಾಗಿ) ಆರ್ಥಿಕ ಪರಿಣಾಮಗಳು ಒಂದೇ ಸಮನಾಗಿರುತ್ತವೆ. ಹಾಗಾಗಿ, ಸರಕಾರಿ ಜಮೀನಿನ ಮಾರಾಟವನ್ನೂ ವಿತ್ತೀಯ ಕೊರತೆಯ ಭಾಗವೆಂದೇ ನೋಡಬೇಕಾಗುತ್ತದೆ. ಆದರೂ ಸಹ, ಸರಕಾರಿ ಜಮೀನಿನ ಮಾರಾಟವನ್ನು ವಿತ್ತೀಯ ಕೊರತೆಯ ಭಾಗವಾಗಿ ಪರಿಗಣಿಸಲಾಗಿಲ್ಲ. ಅದನ್ನು ಆದಾಯ ಹೆಚ್ಚಿಸುವ ಕ್ರಮವೆಂದು ಪರಿಗಣಿಸುವುದು ಒಂದು ತಪ್ಪು. ಆದಾಗ್ಯೂ, ಅದೇ ತಪ್ಪನ್ನು ಐಎಂಎಫ್‌ನ ಚಿಂತನೆಯಿಂದ ಪ್ರಭಾವಿತರಾದ ಅನೇಕ ಅರ್ಥಶಾಸ್ತ್ರಜ್ಞರು ಮಾಡುತ್ತಲೇ ಇದ್ದಾರೆ.

ಈ ಕ್ರಮವು ಒಂದು ದುರದೃಷ್ಟಕರ ಪರಿಣಾಮವನ್ನು ಉಂಟುಮಾಡುತ್ತದೆ. ಸರ್ಕಾರವು ಬಾಂಡ್‌ಗಳನ್ನೇ ಮಾರಲಿ ಅಥವಾ ತನ್ನ ಭೂಮಿಯನ್ನೇ ಮಾರಲಿ, ಅವುಗಳಲ್ಲಿ ಯಾವುದನ್ನು ಮಾರಿದರೂ ಬಂದ ಹಣವನ್ನು ಖರ್ಚು ಮಾಡಿದರೆ ಅದು ಸಂಪತ್ತಿನ ಅಸಮಾನತೆಯನ್ನು ಹೆಚ್ಚಿಸುವ ವಾಸ್ತವವಂತೂ ಬದಲಾಗುವುದಿಲ್ಲ. ಸರ್ಕಾರವು ಬಾಂಡ್‌ಗಳನ್ನು (ಅಥವಾ ಹಣವನ್ನು) ಬಂಡವಾಳಗಾರರ ಕೈಗಳಲ್ಲಿ ಇಡುವ ಮೂಲಕ ವಿತ್ತೀಯ ಕೊರತೆಯು ಬಂಡವಾಳಗಾರರ ಸಂಪತ್ತನ್ನು ಹೆಚ್ಚಿಸುತ್ತದೆ. ಅಂದರೆ, ಸರ್ಕಾರವು ವಿತ್ತೀಯ ಕೊರತೆಯ ಮೂಲಕ ಹೆಚ್ಚು ಖರ್ಚು ಮಾಡುವುದನ್ನು ನಿರ್ಧರಿಸುವ ಮೊದಲು ಬಂಡವಾಳಗಾರರು ಎಷ್ಟು ಸಂಪತ್ತನ್ನು ಹೊಂದಿದ್ದರೋ ಅದಕ್ಕಿಂತಲೂ ಹೆಚ್ಚಿನ ಸಂಪತ್ತು ಸರ್ಕಾರಿ ಬಾಂಡ್‌ಗಳನ್ನು (ಅಥವಾ ಹಣವನ್ನು) ಅವರ ಕೈಗಳಲ್ಲಿ ಇಟ್ಟಾಗ ಪ್ರಾಪ್ತವಾಗುತ್ತದೆ. ಬಾಂಡ್ ಮಾರಾಟ ಇರಬಹುದು ಅಥವಾ ಸರ್ಕಾರದ ಆಸ್ತಿಯ (ಸಾರ್ವಜನಿಕ ವಲಯದ ಉದ್ದಿಮೆಗಳ ಷೇರುಗಳು/ ಭೂಮಿ) ಮಾರಾಟವೇ ಇರಬಹುದು, ಅದರಿಂದ ಬಂಡವಾಳಗಾರರ ಸಂಪತ್ತಿನ ಹೆಚ್ಚಳದಲ್ಲಿ ಎಳ್ಳಷ್ಟೂ ವ್ಯತ್ಯಾಸವಿರುವುದಿಲ್ಲ. ಸಂಪತ್ತಿನ ಸ್ವರೂಪದಲ್ಲಿ ಬದಲಾವಣೆ ಇರುತ್ತದೆಯೇ ವಿನಃ ಬಂಡವಾಳಗಾರರು ಪಡೆಯುವ ಹೆಚ್ಚುವರಿ ಸಂಪತ್ತಿನಲ್ಲಿ ಯಾವುದೇ ಬದಲಾವಣೆಯಾಗುವುದಿಲ್ಲ. ಹೀಗಾಗಿ, ಸಮಾಜದಲ್ಲಿ ಸಂಪತ್ತಿನ ಅಸಮಾನತೆ ಬೆಳೆಯುತ್ತದೆ.

ಭಾರತದ ಪ್ರಸಕ್ತ ಸನ್ನಿವೇಶದಲ್ಲಿ ಸರ್ಕಾರಿ ವೆಚ್ಚಗಳ ಏರಿಕೆ ಅನಿವಾರ್ಯ. ಆದರೆ, ಬೇಡಿಕೆಯು ಕುಂಠಿತವಾಗಿರುವ ಭಾರತದ ಅರ್ಥವ್ಯವಸ್ಥೆಯ ಇಂದಿನ ಪರಿಸ್ಥಿತಿಯಲ್ಲಿ, ಸರ್ಕಾರವು ತನ್ನ ಹೆಚ್ಚುವರಿ ಖರ್ಚುಗಳಿಗೆ ಹಣ ಹೊಂದಿಸಿಕೊಳ್ಳುವ ಸಲುವಾಗಿ ಸರ್ಕಾರದ ಭೂಮಿಯನ್ನು ಮಾರಬೇಕೆಂಬ ವಕಾಲತ್ತು ಮಾಡುವುದು, ಭೂಮಿಯ ಮಾರಾಟಕ್ಕೂ ಮತ್ತು ವಿತ್ತೀಯ ಕೊರತೆಗೂ ವ್ಯತ್ಯಾಸವಿಲ್ಲ ಎಂಬ ಅಂಶದ ಬಗ್ಗೆ ಮತ್ತು ಅದರಿಂದಾಗಿಯೇ ಸಮಾಜದಲ್ಲಿ ಸಂಪತ್ತಿನ ಅಸಮಾನತೆ ಬೆಳೆಯುತ್ತದೆ ಎಂಬ ಅಂಶದ ಬಗ್ಗೆ ಇರುವ ಅಜ್ಞಾನದ ಪ್ರದರ್ಶನವಾಗುತ್ತದೆ.

ಅರ್ಥವ್ಯವಸ್ಥೆಯು ಉತ್ತೇಜನಗೊಳ್ಳಬೇಕು ಎಂದಾದರೆ ಮತ್ತು ಸಂಪತ್ತಿನ ಅಸಮಾನತೆಯು ಈಗಾಗಲೇ ತಲುಪಿರುವ ಭಯಾನಕ ಮಟ್ಟಕ್ಕಿಂತಲೂ ಕೆಟ್ಟದಾಗದಂತೆ ತಡೆಯಬೇಕಾದರೆ, ಸಾಧ್ಯವಿರುವ ಏಕೈಕ ಮಾರ್ಗವೆಂದರೆ, ಲಾಭದ ಮೇಲೆ ತೆರಿಗೆ ಅಥವಾ ಶ್ರೀಮಂತರ ಸಂಪತ್ತಿನ ಮೇಲೆ ತೆರಿಗೆ ಹೇರುವುದು. ಈ ಮೂಲಕ ಸರ್ಕಾರದ ಹೆಚ್ಚುವರಿ ಖರ್ಚುಗಳಿಗೆ ಹಣವನ್ನೂ ಹೊಂದಿಸಿಕೊಳ್ಳಬಹುದು.

ಮೂರನೇ ಮಹಾಧಿವೇಶನ-ಹಾದಿ ಸರಿಪಡಿಸುವತ್ತ ಒಂದು ಪ್ರಯತ್ನ

ಪುಟ 11 ರಿಂದ

ಸಮಾಜವಾದಿ ತಿಳುವಳಿಕೆಯಾಗಿ ವಿಕಾಸಗೊಳಿಸಿಲ್ಲ. ಘೋಷಣೆಗಳನ್ನು ಮತ್ತು ತಂತ್ರಗಳನ್ನು ಹುಟ್ಟುಹಾಕಿ ರೂಪಿಸುವಾಗ ಇಡೀ ಪಕ್ಷದ ಮತ್ತು ಎಲ್ಲಾ ಘಟಕಗಳ ಕ್ರಿಯಾಶೀಲ ಭಾಗವಹಿಸುವಿಕೆಯನ್ನು ಖಾತ್ರಿಪಡಿಸುವಲ್ಲಿ ವಿಫಲವಾಗಿದೆ ಎನ್ನುವುದನ್ನೂ ಅದು ಗುರುತಿಸಿತು. "ಪಕ್ಷದಲ್ಲಿ ಮನೆ ಮಾಡಿರುವ 'ನಾಯಕ-ಹಿಂಬಾಲಕ' ಪ್ರವೃತ್ತಿ, ಚಾಲ್ತಿಯಲ್ಲಿರುವ ವಿಶಾಲ ರಾಜಕೀಯ ಪ್ರಶ್ನೆಗಳನ್ನು ಪಕ್ಷದ ಉನ್ನತ ಸಮಿತಿಗಳಲ್ಲಿ ಮಾತ್ರ ಚರ್ಚೆ ಮಾಡುವ ಮತ್ತು ಕೆಳಗಿನ ಸಮಿತಿಗಳು 'ತಕ್ಷಣದ ಪ್ರಾಯೋಗಿಕ ಕೆಲಸಗಳ' ಬಗ್ಗೆ ಮಾತ್ರ ಕಾಳಜಿ ವಹಿಸುವ ಮತ್ತು ಮೇಲಿಂದ ನೀಡಿದ ನಿರ್ದೇಶನಗಳನ್ನು ಜಾರಿಮಾಡುವ ಪ್ರವೃತ್ತಿ, ಇವೆಲ್ಲವೂ ಕಾರ್ಯಕರ್ತರ ಬೆಳವಣಿಗೆಯನ್ನು ಪ್ರತಿಬಂಧಿಸುತ್ತಿವೆ ಹಾಗೂ ಅವರನ್ನು ಹಳೆಯ ಜಾಡಿನಲ್ಲೇ ಇರಿಸುತ್ತಿವೆ."

ಈ ಹಿನ್ನೆಲೆಯಲ್ಲಿ, ಮೇಲಿನಿಂದ ಕೆಳಗಿನವರೆಗಿನ ಪಕ್ಷದ ಸಮಿತಿಗಳು ಕಾರ್ಯನಿರ್ವಹಿಸುವ ರೀತಿಯನ್ನು ತಿದ್ದಿಕೊಳ್ಳಬೇಕೆಂದು ನಿರ್ಣಯವು ಒತ್ತಿ ಹೇಳಿತು. ಕೆಳಗಿನ ಸಮಿತಿಗಳ ಸಾಮರ್ಥ್ಯ ಹೆಚ್ಚಿಸಿ ಅವರ ಸಮಸ್ಯೆಗಳನ್ನು ಅವರೇ ಪರಿಹರಿಸಿಕೊಳ್ಳುವಂತೆ ಸಹಾಯ ಮಾಡುವುದು ಮೇಲಿನ ಸಮಿತಿಗಳ ಧ್ಯೇಯವಾಗಬೇಕು. ಕೆಳಗಿನಿಂದ ಬರುವ ವಿಮರ್ಶೆಯನ್ನು ಸಕ್ರಿಯವಾಗಿ ಪ್ರೋತ್ಸಾಹಿಸುವ ಮೂಲಕ ವಿಮರ್ಶೆಯನ್ನು ಸಹಿಸದ ಅಧಿಕಾರಶಾಹಿ ಪ್ರವೃತ್ತಿಯ ವಿರುದ್ಧ ಮೇಲ್ಸಮಿತಿಗಳು ಕಾರ್ಯಪ್ರವೃತ್ತರಾಗಬೇಕು.

ನಿರ್ದಿಷ್ಟ ಸನ್ನಿವೇಶದಲ್ಲಿ ಪಕ್ಷದ ಘಟಕಗಳು ಪಕ್ಷದ ಸರ್ವಸಾಮಾನ್ಯವಾದ ನಿಲುವನ್ನು ಅನ್ವಯಿಸುವ ಮೂಲಕ, ನಂತರ ನಿರಂತರ ಚರ್ಚೆ, ವಿಮರ್ಶೆ ಮತ್ತು ಸ್ವವಿಮರ್ಶೆಗಳ ಮೂಲಕ ಮೂರ್ತರೂಪ ಕೊಟ್ಟು ಚಟುವಟಿಕೆಗಳ ಸಮಯದಲ್ಲಿ ವಿಸ್ತರಿಸುವ ಮೂಲಕ ಹಾಗೂ ಹೋರಾಟಗಳನ್ನು ಕಾಲಕಾಲಕ್ಕೆ ಪರಾಮರ್ಶಿಸುವ ಮತ್ತು ಪಕ್ಷದ ಸ್ವರೂಪ ಹಾಗೂ ಕಠಿಣ ಶಿಸ್ತಿಗೆ ಒಳಪಡುವ ಮೂಲಕ, ಒಟ್ಟಿನಲ್ಲಿ ಹೀಗೆ ಸಾಮೂಹಿಕ ಕಾರ್ಯನಿರ್ವಹಣೆಯ ಮೂಲಕ ಪಕ್ಷದಲ್ಲಿ ರಾಜಕೀಯ ಐಕ್ಯತೆಯನ್ನು ಸಾಧಿಸಬಹುದು ಎಂದು ನಿರ್ಣಯವು ಪ್ರತಿಪಾದಿಸಿತು.

ಪಕ್ಷದ ಸದಸ್ಯತ್ವ ನವೀಕರಣಕ್ಕೆ ಆರು ಅಗತ್ಯ ಕಾರ್ಯಭಾರಗಳನ್ನು ಸೂಚಿಸಲಾಯಿತು: 1) ಪಕ್ಷಕ್ಕೆ ತೆರಬೇಕಾದುದನ್ನು, ಲೆವಿಯನ್ನು ನಿಯಮಿತವಾಗಿ ಸಲ್ಲಿಸುವುದು; 2) ಘಟಕದ ಸಭೆಗಳಲ್ಲಿ ತಪ್ಪದೇ ಭಾಗವಹಿಸುವುದು; 3) ಪಕ್ಷದ ಶಿಸ್ತನ್ನು ಒಪ್ಪಿಕೊಂಡು ನಿಯೋಜಿತ ಕೆಲಸವನ್ನು ಮಾಡುವುದು; 4) ಪಕ್ಷದ ರಹಸ್ಯಗಳನ್ನು ಕಾಪಾಡುವುದು ಮತ್ತು ಸಡಿಲ ಮಾತುಗಳಲ್ಲಿ ತೊಡಗದಿರುವುದು; 5) ಸಾಮೂಹಿಕ ಸಂಘಟನೆಯಲ್ಲಿ ಕಾರ್ಯ ನಿರ್ವಹಿಸುವುದು ಮತ್ತು 6) ಕೆಲಸದ ವರದಿಯನ್ನು ಘಟಕಕ್ಕೆ ನೀಡುವುದು. ಎಲ್ಲಾ ರಂಗಗಳಲ್ಲೂ ಯೋಜಿತ ಕೆಲಸ ಮಾಡುವ, ಕಾರ್ಯಕರ್ತರ ಬೆಳವಣಿಗೆ ಮತ್ತು ಸ್ವಅಧ್ಯಯನಕ್ಕೆ ನಿಯತಕಾಲಿಕವಾಗಿ ಶಿಕ್ಷಣ ನೀಡುವ ಬಗ್ಗೆ ನಿರ್ಣಯವು ಹೆಚ್ಚು ಒತ್ತು ನೀಡಿತು.

ಮಹಾಧಿವೇಶನದ ಸಮಯದಲ್ಲಿ 50,000 ಸದಸ್ಯರು ಮತ್ತು 25,000 ಅಭ್ಯರ್ಥಿ ಸದಸ್ಯರು ಪಕ್ಷದಲ್ಲಿದ್ದರು ಎಂದು ಪಕ್ಷದ ಮಹಾಧಿವೇಶನದ ಪರಾಮರ್ಶೆಯು ಗುರುತಿಸಿತು. ಪಕ್ಷದ ಸರಿಯಾದ ಕೇಂದ್ರ ಇಲ್ಲದ ಕಾರಣ ಮಹಾಧಿವೇಶನದಲ್ಲಿ ಆಮೂಲಾಗ್ರವಾದ ಚರ್ಚೆಯಾಗಲಿಲ್ಲ ಎನ್ನುವುದನ್ನು ಕೂಡ ಅದು ಒಪ್ಪಿಕೊಂಡಿತು. ಇದು ಮಹಾಧಿವೇಶನದ ಸಿದ್ಧತೆಗೆ ಅಡಚಣೆ ಉಂಟುಮಾಡಿತು; ಆಂತರಿಕ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳುವಲ್ಲಿನ ಮತ್ತು ಹಲವಾರು ರಾಜಕೀಯ ಪ್ರಶ್ನೆಗಳ ಬಗ್ಗೆ ಸರಿಯಾಗಿ ಅಂದಾಜು ಮಾಡಿ ನಿರ್ಧರಿಸುವಲ್ಲಿನ ಹಾಗೂ ಸರಿಯಾದ ರಾಜಕೀಯ ತಂತ್ರಾತ್ಮಕ ನಿಲುವನ್ನು ತಳೆಯುವಲ್ಲಿನ ಉದಾರ ಮನೋಭಾವವನ್ನು ಅದು ಪ್ರತಿಫಲಿಸಿತು.

ಮಹಾಧಿವೇಶನವು ಮೂವತ್ತೊಂಭತ್ತು ಸದಸ್ಯರ ಕೇಂದ್ರ ಸಮಿತಿಯನ್ನು ಹಾಗೂ ಒಂಭತ್ತು ಸದಸ್ಯರ ಪೋಲಿಟ್ ಬ್ಯೂರೋವನ್ನು ಆಯ್ಕೆ ಮಾಡಿತು.

ನಾಗೇಶ್ವರ ರಾವ್ ವಿರುದ್ಧ ಕಾನೂನು ಕ್ರಮ ಮತ್ತು ಎಫ್‌ಐಆರ್-ಗೃಹಮಂತ್ರಿಗಳಿಗೆ ಬೃಂದಾ ಕಾರಟ್ ಪತ್ರ

ಪುಟ 2 ರಿಂದ

ಅವರ ವಿರುದ್ಧ ಹೀನಾಯಕರ ಭಾಷೆಯನ್ನು ಬಳಸಿದ್ದಾರೆ ಮತ್ತು ಎರಡು ಸಮುದಾಯಗಳ ನಡುವೆ ವೈರತ್ವದ ಭಾವನೆಗಳನ್ನು ಪ್ರಚೋದಿಸಿದ್ದಾರೆ. ಅವರು ಆರೆಸ್ಸೆಸ್ ಮತ್ತು ಬಿಜೆಪಿಯನ್ನು "ಭಾರತದ ಮರುಹಿಂದೂಕರಣ"ಕ್ಕಾಗಿ ಬಹಿರಂಗವಾಗಿಯೇ ಪ್ರಶಂಸಿಸಿದ್ದಾರೆ. "ಬಿಜೆಪಿಯ ಬೆಳವಣಿಗೆ"ಯ ಮೇಲೆ ಅನುಕೂಲಕರವಾಗಿ ಟಿಪ್ಪಣಿ ಮಾಡಿದ್ದಾರೆ. "ಎಡಪಂಥೀಯರ" ವಿರುದ್ಧ ಕೀಳುಭಾವದ ಟಿಪ್ಪಣಿ ಮಾಡಿದ್ದಾರೆ" ಎಂಬ ಸಂಗತಿಯತ್ತ ತಮ್ಮ ಪತ್ರದಲ್ಲಿ ಗಮನ ಸೆಳೆದಿರುವ .ಬೃಂದಾ ಕಾರಟ್ "ಅವರ ಮೇಲೆ ಸೇವಾ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ಆರೋಪ ಪಟ್ಟಿಯನ್ನು ಹಾಕಬೇಕು ಮತ್ತು ಐ.ಪಿ.ಸಿ.ಯ ಸಂಬಂಧಪಟ್ಟ ವಿಭಾಗಗಳ ಅಡಿಯಲ್ಲಿ ಅವರನ್ನು ಕಾನೂನು ಕ್ರಮಕ್ಕೆ ಒಳಪಡಿಸಬೇಕು. ನೀವು ಈ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತೀರಿ ಎಂದು ನಾನು ಆಶಿಸುತ್ತೇನೆ. ಈ ಮೂಲಕ ನಾಗೇಶ್ವರ ರಾವ್‌ರಂತಹ ಸೇವಾ ನಿಯಮಗಳನ್ನು ಮತ್ತು ಸಂವಿಧಾನದ ಚೇತನವನ್ನು ಉಲ್ಲಂಘಿಸುವವರು ಕಾನೂನಿನ ಪ್ರಕಾರ ಶಿಕ್ಷೆಗೊಳಗಾಗುತ್ತಾರೆ ಎಂಬ ವಿಶ್ವಾಸ ರಾಜಕೀಯವಾಗಿ ತಟಸ್ಥರಾಗಿದ್ದು ಸಂವಿಧಾನಿಕ ಚೌಕಟ್ಟಿನ ಒಳಗೆ ದೇಶದ ಸೇವೆ ಮಾಡುತ್ತಿರುವ ಅಧಿಕಾರಿಗಳಲ್ಲಿ ಮೂಡುವಂತಾಗುತ್ತದೆ" ಎಂದು ಬರೆದಿದ್ದಾರೆ.

ಹಲವು ನಿವೃತ್ತ ಐಪಿಎಸ್ ಅಧಿಕಾರಿಗಳೂ ನಾಗೇಶ್ವರ ರಾವ್ ಟಿಪ್ಪಣಿಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ನಿವೃತ್ತ ಹಿರಿಯ ಐಪಿಎಸ್ ಅಧಿಕಾರಿಗಳ ಸಂಘದ ಒಬ್ಬ ಪದಾಧಿಕಾರಿ ಹಾಗೂ ಇಂಟೆಲಿಜೆನ್ಸ್ ಬ್ಯುರೊದಲ್ಲಿ ಬಹಳ ವರ್ಷ ಸೇವೆ ಸಲ್ಲಿಸಿದವರು "ಇಂದಿನ ದಿನಗಳಲ್ಲಿ ಸೇನಾಪಡೆಗಳಲ್ಲಿ, ಪೋಲಿಸ್ ಪಡೆಗಳಲ್ಲಿ ಇರುವವರು 'ಲಕ್ಷ್ಮಣ ರೇಖೆ'ಯನ್ನು ದಾಟುತ್ತಾರೆ, ಆದರೆ ಅವರಿಗೆ ಏನೂ ಆಗುವುದಿಲ್ಲ, ಇದು ದೇಶಕ್ಕೆ ಒಳ್ಳೆಯದಲ್ಲ ಎಂದು ಟಿಪ್ಪಣಿ ಮಾಡಿದ್ದಾರೆ. ತಮ್ಮ ರಾಜಕೀಯ ಯಜಮಾನರುಗಳನ್ನು ಸಂತುಷ್ಟಗೊಳಿಸಲು ಹೀಗೆ ಮಾಡುತ್ತಾರೆ ಎಂದೂ ಅವರು ಹೇಳಿದ್ದಾರೆ.

ಭಾರತದ ದಂಡ ಸಂಹಿತೆ(ಐಪಿಸಿ)ಯಲ್ಲಿ ದ್ವೇಷದ ಪ್ರಸ್ತಾಪ ಇದೆ, ಐಪಿಎಸ್ ಅಧಿಕಾರಿಗಳು ಅದನ್ನು ಜಾರಿಗೊಳಿಸುವವರಾದ್ದರಿಂದ ಅವರು ಇತರ ಧರ್ಮಗಳ ಬಗ್ಗೆ ಅವರು ಸಹಿಷ್ಣು ಮತ್ತು ಗೌರವ ಭಾವ ಹೊಂದಿದವರು ಆಗಿರಬೇಕಾಗುತ್ತದೆ ಎಂದು ಇನ್ನೊಬ್ಬ ನಿವೃತ್ತ ಐಪಿಎಸ್ ಅಧಿಕಾರಿ ಅಭಿಪ್ರಾಯ ಪಟ್ಟಿದ್ದಾರೆ.

ಈ ಅಧಿಕಾರಿ ಈ ರೀತಿಯಲ್ಲಿ ಸೇವಾ ಷರತ್ತುಗಳನ್ನು ಉಲ್ಲಂಘಿಸಿರುವುದು ಅಥವ ಕೋಮುವಾದಿ ಭಾವನೆಗಳನ್ನು ಪ್ರಚೋದಿಸಿರುವುದು ಇದೇ ಮೊದಲ ಬಾರಿಯೇನಲ್ಲ. ಸುಮಾರಾಗಿ ಇದೇ ಆಧಾರದಲ್ಲಿ, ಅವರು ತೊಂಭತ್ತರ ದಶಕದ ಕೊನೆಯಲ್ಲಿ ಒಡಿಶಾದ ಬೆಹ್ರಂಪುರ್ ಅಭಿವೃದ್ಧಿ ಪ್ರಾಧಿಕಾರದಲ್ಲಿ ಅಧಿಕಾರಿಯಾಗಿ ಸೇವೆಯಲ್ಲಿದ್ದಾಗ ಕೆಲವು ವಿಷಕಾರೀ ಕೋಮುವಾದಿ ಹೇಳಿಕೆಗಳನ್ನು ಕೊಟ್ಟಿದ್ದರು. ಎರಡು ಅಧಿಕೃತ ತನಿಖೆಗಳು ಅವರನ್ನು ಅಪರಾಧಿಯೆಂದು ಹೇಳಿದ್ದು, ಶಿಸ್ತುಕ್ರಮಗಳನ್ನು ಕೈಗೊಳ್ಳಲಾಗಿತ್ತು. ಹೀಗೆ ಅವರು ಸ್ವಭಾವತಃ ಕೆಟ್ಟ ದಾಖಲೆಯಿರುವ ತಪ್ಪುಗಾರ ಎಂಬ ಸಂಗತಿಯನ್ನೂ ಬೃಂದಾ ಕಾರಟ್ ನೆನಪಿಸಿದ್ದಾರೆ.

"ಎಫ್‌ಐಆರ್ ದಾಖಲಿಸಿ"

ಅಲ್ಲದೆ ದಿಲ್ಲಿಯ ಮಂದಿರ್ ಮಾರ್ಗ್ ಪೋಲಿಸ್ ಠಾಣೆಯ ಎ.ಹೆಚ್.ಒ.ಗೆ ಕೂಡ ಪತ್ರ ಬರೆದು ನಾಗೇಶ್ವರ ರಾವ್ ವಿರುದ್ಧ ಐ.ಪಿ.ಸಿ.ಯ ಸೆಕ್ಷನ್ 153ಎ ಮತ್ತು 295ಎ ಅಡಿಯಲ್ಲಿ ಎಫ್‌ಐಆರ್ ದಾಖಲಿಸಬೇಕು ಎಂದೂ ಕೇಳಿದ್ದಾರೆ. ಈ ಪತ್ರದ ಪ್ರತಿಗಳನ್ನು ಡಿಸಿಪಿ, ನವದೆಹಲಿ ಮತ್ತು ದಿಲ್ಲಿ ಪೋಲೀಸ್ ಕಮಿಶನರ್ ರವರಿಗೂ ಕಳಿಸಿದ್ದಾರೆ, ಮತ್ತು ಗೃಹಮಂತ್ರಿಗಳಿಗೆ ಬರೆದ ಪತ್ರದಲ್ಲೂ ಈ ದೂರಿನ ಬಗ್ಗೆ ಹೇಳುತ್ತ ಕಾನೂನುಕ್ರಮದ ಪ್ರಕ್ರಿಯೆಯನ್ನು ತ್ವರಿತಗೊಳಿಸಬೇಕು ಎಂದು ವಿನಂತಿಸಿಕೊಂಡಿದ್ದಾರೆ.

ತಮ್ಮ ಟ್ವಿಟರ್ ನಲ್ಲಿ ನಾಗೇಶ್ವರ ರಾವ್ ಅವರು ಬಳಸಿರುವ "'ಹಿಂದುಗಳ ಬುಡಕೀಳುವುದು", "ರಕ್ತಸಿಕ್ತ ಇಸ್ಲಾಮೀ ಅತಿಕ್ರಮಣ..", "ಹಿಂದೂ ಸಮಾಜದ ಮರುಹಿಂದೂಕರಣ" ಮುಂತಾದ ಪದಗಳನ್ನು ಉಲ್ಲೇಖಿಸುತ್ತ ಆತನ ಟ್ವೀಟ್‌ನ ಧಾಟಿ ಮತ್ತು ಆಶಯ ಸಮುದಾಯಗಳ ನಡುವೆ ವೈರತ್ವ ಮತ್ತು ವೈಷಮ್ಯವನ್ನು ಉಂಟು ಮಾಡುವುದು ಮತ್ತು ಮುಸ್ಲಿಮರ ವಿರುದ್ಧ ದ್ವೇಷಬಾವನೆಗಳನ್ನು ಪ್ರಚೋದಿಸುವುದು, ಸಂವಿಧಾನ ಮತ್ತು ಕಾನೂನಿನ ಆಶಯಗಳಿಗೆ ವಿರುದ್ಧವಾದ ಅವರ ಪದಬಳಕೆ ಸೆಕ್ಷನ್ 153ಎ ಮತ್ತು 295ಎ ಅಡಿಯಲ್ಲಿ ಕ್ರಿಮಿನಲ್ ಅಪರಾಧವಾಗುತ್ತದೆ ಎಂದು ಬೃಂದಾ ಕಾರಟ್ ದಿಲ್ಲಿ ಪೋಲಿಸರ ಗಮನಕ್ಕೆ ತಂದಿದ್ದಾರೆ.

ಇತ್ತೀಚಿನ ದಿನಗಳಲ್ಲಿ ದಿಲ್ಲಿ ಪೋಲೀಸ್ ಈ ಎರಡು ಸೆಕ್ಷನ್‌ಗಳನ್ನು ಉಪಯೋಗಿಸುವಲ್ಲಿ, ತಪ್ಪು ಕಾರಣಗಳಿಗಾಗಿ ಮತ್ತು ತಮಗೆ ಬೇಕಾದಲ್ಲಿ ಮಾತ್ರವಾದರೂ, ಸಾಕಷ್ಟು ಚುರುಕಾಗಿ ಕೆಲಸ ಮಾಡುತ್ತಿದೆ ಎಂಬ ಸಂಗತಿಯನ್ನೂ ಬೃಂದಾ ಕಾರಟ್ ತಮ್ಮ ಅರ್ಜಿಯಲ್ಲಿ ಪ್ರಸ್ತಾಪಿಸಿದ್ದಾರೆ.

ಬೃಂದಾ ಕಾರಟ್ ಕೇಂದ್ರ ಗೃಹ ಮಂತ್ರಿಗಳಿಗೆ ಬರೆದ ಪತ್ರದ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ:



"ತಮ್ಮ ಮಂತ್ರಾಲಯದ ಅಡಿಯಲ್ಲಿ ಅಗ್ನಿಶಾಮಕ ಸೇವೆಗಳು, ಗೃಹರಕ್ಷಕ ದಳ ಮತ್ತು ನಾಗರಿಕ ರಕ್ಷಣೆ ಇಲಾಖೆಯ ಮಹಾನಿರ್ದೇಶಕರಾಗಿ ಸೇವೆಯಲ್ಲಿರುವ ಐ.ಪಿ.ಎಸ್. ದರ್ಜೆಯ ಶ್ರೀ ನಾಗೇಶ್ವರ ರಾವ್ ನೀಡಿರುವ ಒಂದು ಸಾರ್ವಜನಿಕ ಹೇಳಿಕೆಯತ್ತ ತಮ್ಮ ಗಮನವನ್ನು ಸೆಳೆಯ ಬಯಸುತ್ತೇನೆ.

ಅವರು ಒಬ್ಬ ಸೇವಾರತ ಅಧಿಕಾರಿಯಾಗಿದ್ದು ಸೇವಾ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಡುತ್ತಾರೆ. ಯಾವುದೇ ಸರಕಾರೀ ಅಧಿಕಾರಿ ರಾಜಕೀಯ ಪ್ರೇರಿತ ಸಾರ್ವಜನಿಕ ಹೇಳಿಕೆಗಳನ್ನು ಕೊಡಬಾರದು ಎಂಬುದು ಈ ಷರತ್ತುಗಳಲ್ಲಿ ಒಂದು. ಎರಡನೆಯದಾಗಿ, ಪ್ರತಿಯೊಬ್ಬ ಅಧಿಕಾರಿಯೂ ಭಾರತದ ಸಂವಿಧಾನವನ್ನು ಕಾಪಾಢಲು ಮತ್ತು ರಕ್ಷಿಸಲು ಕರ್ತವ್ಯಬದ್ಧರಾಗಿರುತ್ತಾರೆ.

ಆದರೆ ಮೇಲೆ ಹೆಸರಿಸಿದ ವ್ಯಕ್ತಿಯು ಜುಲೈ 27ರ ಇಂಡಿಯನ್ ಎಕ್ಸ್ ಪ್ರೆಸ್ ಪತ್ರಿಕೆಯಲ್ಲಿ ವರದಿಯಾಗಿರುವಂತೆ(ಪತ್ರಿಕೆಯ ಪ್ರತಿಯನ್ನು ಲಗತ್ತಿಸಿದೆ) ತನ್ನ ಟ್ವಿಟರ್ ಸಾರ್ವಜನಿಕ ಹೇಳಿಕೆಯಲ್ಲಿ ರಾಜಕೀಯವಾಗಿ ಪ್ರೇರಿತವಾದ ಅತ್ಯಂತ ಆಕ್ರೋಶಕಾರಿ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಇವು ಸಂವಿಧಾನದ ಭಾವನೆಗೂ ವಿರುದ್ಧ ಹೋಗುತ್ತವೆ.

ಅವರು ಧೀರ ಸ್ವಾತಂತ್ರ್ಯ ಹೋರಾಟಗಾರ ಮೌಲಾನಾ ಅಬುಲ್ ಕಲಾಂ ಆಝಾದ್ ಮತ್ತು ಇತರ ಗಮನಾರ್ಹ ಶಿಕ್ಷಣ ತಜ್ಞರನ್ನು, ಮುಖ್ಯವಾಗಿ ಮುಸ್ಲಿಂ ಸಮುದಾಯಕ್ಕೆ ಸೇರಿದವರನ್ನು ಅವಮಾನಗೊಳಿಸಿದ್ದಾರೆ, ಅವರ ವಿರುದ್ಧ ಹೀನಾಯಕರ ಭಾಷೆಯನ್ನು ಬಳಸಿದ್ದಾರೆ ಮತ್ತು ಎರಡು ಸಮುದಾಯಗಳ ನಡುವೆ ವೈರತ್ವದ ಭಾವನೆಗಳನ್ನು ಪ್ರಚೋದಿಸಿದ್ದಾರೆ. ಅವರು ಆರೆಸ್ಸೆಸ್ ಮತ್ತು ಬಿಜೆಪಿಯನ್ನು "ಭಾರತದ ಮರುಹಿಂದೂಕರಣ"ಕ್ಕಾಗಿ ಬಹಿರಂಗವಾಗಿಯೇ ಪ್ರಶಂಸಿಸಿದ್ದಾರೆ. "ಬಿಜೆಪಿಯ ಬೆಳವಣಿಗೆ"ಯ ಮೇಲೆ ಅನುಕೂಲಕರವಾಗಿ ಟಿಪ್ಪಣಿ ಮಾಡಿದ್ದಾರೆ. "ಎಡಪಂಥೀಯರ" ವಿರುದ್ಧ ಕೀಳುಭಾವದ ಟಿಪ್ಪಣಿ ಮಾಡಿದ್ದಾರೆ.

ಸಂವಿಧಾನ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯದ ಖಾತ್ರಿಯ ಪ್ರಕಾರ ಒಬ್ಬ ವ್ಯಕ್ತಿ ತನ್ನದೇ ಅಭಿಪ್ರಾಯವನ್ನು ಹೊಂದಿರಬಹುದು. ಆದರೆ ಒಬ್ಬ ಸೇವಾರತ ಅಧಿಕಾರಿಯಾಗಿದ್ದು ನಾಗೇಶ್ವರ ರಾವ್ ಸೇವಾ ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಅವರು ಐ.ಪಿ.ಸಿ.ಯ ಸೆಕ್ಷನ್ 153ಎ ಮತ್ತು 295ಎ ಅಡಿಯಲ್ಲೂ ಮನನೋಯಿಸುವ ಅಪರಾಧ ಮಾಡಿದ್ದಾರೆ.

ಅವರು ಈ ರೀತಿಯಲ್ಲಿ ಸೇವಾ ಷರತ್ತುಗಳನ್ನು ಉಲ್ಲಂಘಿಸಿರುವುದು ಅಥವ ಕೋಮುವಾದಿ ಭಾವನೆಗಳನ್ನು ಪ್ರಚೋದಿಸಿರುವುದು ಇದೇ ಮೊದಲ ಬಾರಿಯೇನಲ್ಲ. ಸುಮಾರಾಗಿ ಇದೇ ಆಧಾರದಲ್ಲಿ, ಅವರು ತೊಂಭತ್ತರ ದಶಕದ ಕೊನೆಯಲ್ಲಿ ಒಡಿಶಾದ ಬೆಹ್ರಂಪುರ್ ಅಭಿವೃದ್ಧಿ ಪ್ರಾಧಿಕಾರದಲ್ಲಿ ಅಧಿಕಾರಿಯಾಗಿ ಸೇವೆಯಲ್ಲಿದ್ದಾಗ ಕೆಲವು ವಿಷಕಾರೀ ಕೋಮುವಾದಿ ಹೇಳಿಕೆಗಳನ್ನು ಕೊಟ್ಟಿದ್ದರು. ಎರಡು ಅಧಿಕೃತ ತನಿಖೆಗಳು ಅವರನ್ನು ಅಪರಾಧಿಯೆಂದು ಹೇಳಿ ಶಿಸ್ತುಕ್ರಮಗಳನ್ನು ಕೈಗೊಳ್ಳಲಾಗಿತ್ತು. ಹೀಗೆ ಅವರು ಸ್ವಭಾವತಃ ಕೆಟ್ಟ ದಾಖಲೆಯಿರುವ ತಪ್ಪುಗಾರ.

ಅವರು ಜುಲೈ 31ರಂದು ನಿವೃತ್ತರಾಗಲಿದ್ದಾರೆ ಎಂಬ ವರದಿಗಳಿದ್ದು, ಈ ಟಿಪ್ಪಣಿಗಳು ನಿವೃತ್ತಿಯ ನಂತರ ಅವರನ್ನು ಬಿಜೆಪಿ ಅಥವ ಆರೆಸ್ಸೆಸ್ ಪ್ರವೇಶಕ್ಕೆ ಅರ್ಹರಾಗಿಸಬಹುದು. ಆದರೆ ಅವರು ಈ ಟಿಪ್ಪಣಿಗಳನ್ನು ಒಬ್ಬ ಸೇವಾರತ ಅಧಿಕಾರಿಯಾಗಿ ಮಾಡಿದ್ದಾರೆ. ಆದ್ದರಿಂದ ಅವರ ಮೇಲೆ ಸೇವಾ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ಆರೋಪ ಪಟ್ಟಿಯನ್ನು ಹಾಕಬೇಕು ಮತ್ತು ಐ.ಪಿ.ಸಿ.ಯ ಸಂಬಂಧಪಟ್ಟ ವಿಭಾಗಗಳ ಅಡಿಯಲ್ಲಿ ಅವರನ್ನು ಕಾನೂನು ಕ್ರಮಕ್ಕೆ ಒಳಪಡಿಸಬೇಕು. ನೀವು ಈ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತೀರಿ ಎಂದು ನಾನು ಆಶಿಸುತ್ತೇನೆ. ಈ ಮೂಲಕ ನಾಗೇಶ್ವರ ರಾವ್ ರಂತಹ ಸೇವಾ ನಿಯಮಗಳನ್ನು ಮತ್ತು ಸಂವಿಧಾನದ ಚೇತನವನ್ನು ಉಲ್ಲಂಘಿಸುವವರು ಕಾನೂನಿನ ಪ್ರಕಾರ ಶಿಕ್ಷೆಗೊಳಗಾಗುತ್ತಾರೆ ಎಂಬ ವಿಶ್ವಾಸ ರಾಜಕೀಯವಾಗಿ ತಟಸ್ಥರಾಗಿದ್ದು ಸಂವಿಧಾನಿಕ ಚೌಕಟ್ಟಿನ ಒಳಗೆ ದೇಶದ ಸೇವೆ ಮಾಡುತ್ತಿರುವ ಅಧಿಕಾರಿಗಳಲ್ಲಿ ಮೂಡುವಂತಾಗುತ್ತದೆ.

ದಿಲ್ಲಿ ಪೋಲೀಸ್ ನಿಮ್ಮ ವ್ಯಾಪ್ತಿಯಲ್ಲಿ ಬರುವುದರಿಂದಾಗಿ, ನಾನು ಸೆಕ್ಷನ್ 153ಎ ಮತ್ತು 295ಎ ಅಡಿಯಲ್ಲಿ ಒಂದು ಎಫ್.ಐ.ಆರ್. ದಾಖಲಿಸಬೇಕೆಂದು ದೂರನ್ನು ಸಲ್ಲಿಸಿದ್ದೇನೆ ಎಂಬುದನ್ನೂ ತಮಗೆ ತಿಳಿಸಬಯಸುತ್ತೇನೆ. ಅವರ ವಿರುದ್ಧ ಕಾನೂನುಕ್ರಮದ ಪ್ರಕ್ರಿಯೆಯನ್ನು ತ್ವರಿತಗೊಳಿಸಬೇಕು ಎಂದು ವಿನಂತಿಸುತ್ತೇನೆ."





ಬೊಲಿವಿಯ ಚುನಾವಣೆ ಮುಂದೂಡಿಕೆಗೆ ಪ್ರಬಲ ವಿರೋಧ

ಬೊಲಿವಿಯದಲ್ಲಿ ಕಾರ್ಮಿಕ ಮತ್ತು ಜನ ಚಳುವಳಿಗಳ ಸಂಘಟನೆಗಳು ಜುಲೈ 28ರಂದು ಬೊಲಿವಿಯ ಚುನಾವಣೆಯ ಮುಂದೂಡಿಕೆಗೆ ಪ್ರಬಲ ವಿರೋಧ ವ್ಯಕ್ತಪಡಿಸಿ ದೇಶವ್ಯಾಪಿ ಪ್ರತಿಭಟನೆಗಳನ್ನು ನಡೆಸಿದವು. ಬೊಲಿವಿಯದ ಕೇಂದ್ರೀಯ ಕಾರ್ಮಿಕ ಸಂಘಟನೆ (ಸಿ.ಒ.ಬಿ) ತಳಮಟ್ಟದ ಚಳುವಳಿಗಳ ರಾಷ್ಟ್ರೀಯ ಕೂಟ ಪ್ಯಾಕ್ಟ್ ಆಫ್ ಯುನಿಟಿ ಗಳು ಈ ರಾಷ್ಟ್ರೀಯ ಪ್ರತಿಭಟನೆಗೆ ಕರೆ ಕೊಟ್ಟಿದ್ದವು.

ಜುಲೈ 23ರಂದು ಕೊವಿದ್ ಮಹಾಸಾಂಕ್ರಾಮಿಕದ ನೆಪ ಒಡ್ಡಿ ಬೊಲಿವಿಯದ ಸುಪ್ರೀಂ ಚುನಾವಣಾ ಕೋರ್ಟ್ ಸೆಪ್ಟೆಂಬರ್ 6ಕ್ಕೆ ನಿಗದಿಯಾಗಿದ್ದ ಚುನಾವಣೆಯನ್ನು ಅಕ್ಟೋಬರ್ 18ಕ್ಕೆ ಮುಂದೂಡಿತ್ತು. ಮರುದಿನವೇ ಸಿ.ಒ.ಬಿ ಮತ್ತು ಪ್ಯಾಕ್ಟ್ ಆಫ್ ಯುನಿಟಿ ಗಳು ಚುನಾವಣಾ ಕೋರ್ಟ್ ಗಳ ತೀರ್ಪನ್ನು ತಿರಸ್ಕರಿಸಿ ಜುಲೈ 28ರ ರಾಷ್ಟ್ರೀಯ ಪ್ರತಿಭಟನೆಗೆ ಕರೆ ಕೊಟ್ಟಿದ್ದವು. ರಾಜಧಾನಿ ಲಾ ಪಾಸ್ ಅಲ್ಲದೆ ಇತರ ಹಲವು ಪ್ರಮುಖ ನಗರಗಳಲ್ಲಿ ಸಾವಿರಾರು ರೈತರ, ಗ್ರಾಮೀಣ, ಮಹಿಳಾ ಮತ್ತು ಆದಿವಾಸಿ ಸಂಘಟನೆಗಳ ಸದಸ್ಯರು "ಪ್ರಜಾಪ್ರಭುತ್ವ, ಆರೋಗ್ಯ ಮತ್ತು ಜೀವನಕ್ಕಾಗಿ" ಎಂಬ ಘೋಷಣೆಯೊಂದಿಗೆ ಭಾಗವಹಿಸಿದರು.

ಕೊಚಬಾಂಬಾ ಮತ್ತು ಸಾನ್ ಜೂಲಿಯಾನಾದ ಮೂಲನಿವಾಸಿ ಸಮುದಾಯಗಳ ಹಾಗೂ ಕೃಷಿ ಉತ್ಪಾದಕರ ಫೆಡರೇಶನ್ ಗಳು ಸಹ ಚುನಾವಣೆಯ ಮುಂದೂಡಿಕೆಯನ್ನು ತಿರಸ್ಕರಿಸಿವೆ. ಗ್ರಾಮೀಣ ಕಾರ್ಮಿಕರ ರಾಷ್ಟ್ರೀಯ ಫೆಡರೇಶನ್ ಚುನಾವಣೆಯ ಮುಂದೂಡಿಕೆಯನ್ನು ಹಿಂತೆಗೆದುಕೊಳ್ಳದಿದ್ದರೆ ಲಾ ಪಾಸ್ ನ ಎಲ್ಲ 20 ಪ್ರಾಂತ್ಯಗಳಲ್ಲಿ ಇಟ್ಟಿರುವ ರಸ್ತೆ ತಡೆಗಳನ್ನು ಮುಂದುವರಿಸುವುದಾಗಿ ಘೋಷಿಸಿದೆ.

ಚುನಾಯಿತ ಸರಕಾರವನ್ನು ಸಂವಿಧಾನ-ವಿರೋಧಿ ರೀತಿಯಲ್ಲಿ ಕ್ಷಿಪ್ರಕ್ರಾಂತಿಯಲ್ಲಿ ಉರುಳಿಸಿ ಅಧಿಕಾರಕ್ಕೆ ಬಂದ ಈಗಿನ ಅಧ್ಯಕ್ಷ ಜಿನೀನ್ ಅನೇಜ್ ತಮ್ಮ ಪಟ್ಟ ಕಾಯ್ದುಕೊಳ್ಳಲು ನಡೆಸುತ್ತಿರುವ ಪ್ರಯತ್ನದಲ್ಲಿ ಸುಪ್ರೀಂ ಚುನಾವಣಾ ಕೋರ್ಟ್ ಶಾಮೀಲಾಗಿದೆ ಎಂದು ಈ ಸಂಘಟನೆಗಳು ಆಪಾದಿಸಿವೆ. ಹಿಂದಿನ ಚುನಾವಣೆಯಲ್ಲಿ ಸ್ಪಷ್ಟ ಬಹುಮತ ಪಡೆದಿದ್ದ ಮತ್ತು ಮುಂದಿನ ಚುನಾವಣೆಯಲ್ಲೂ ಬಹುಮತ ಪಡೆಯುವ ಸಾಧ್ಯತೆ ಇರುವ "ಸಮಾಜವಾದದತ್ತ ಚಳುವಳಿ"ಯ ನಾಯಕರು ಮತ್ತು ಕಾರ್ಯಕರ್ತರಿಗೆ ಹಿಂಸೆ ಮತ್ತು ಕಿರುಕುಳ ಕೊಡಲಾಗುತ್ತಿರುವುದನ್ನೂ ಈ ಸಂಘಟನೆಗಳು ಖಂಡಿಸಿವೆ.

"ಸಮಾಜವಾದದತ್ತ ಚಳುವಳಿ"(ಎಂ.ಎ.ಎಸ್) ರಾಜಕೀಯ ಪಕ್ಷ, ಅದರ ಪ್ರಸಿದ್ಧ ನಾಯಕ ಹಾಗೂ ಬೊಲಿವಿಯದ ಮಾಜಿ ಅಧ್ಯಕ್ಷ ಇವೊ ಮೊರಾಲೆಸ್ ಮತ್ತು ಈ ಬಾರಿಯ ಅಧ್ಯಕ್ಷೀಯ ಅಭ್ಯರ್ಥಿ ಲೂಯಿಸ್ ಆರ್ಸ್ ಅವರುಗಳು ಕೂಡಾ ಚುನಾವಣಾ ಕೋರ್ಟ್ ನ ಈ ನಿರ್ಣಯವನ್ನು ಖಂಡಿಸಿ, ಚುನಾವಣಾ ದಿನಾಂಕವನ್ನು ಪಾರ್ಲಿಮೆಂಟಿನ ಮಂಜೂರಿ ಇಲ್ಲದೆ ಬದಲಿಸುವಂತಿಲ್ಲ ಎಂದು ನೆನಪಿಸಿದ್ದಾರೆ. ಇದು ಮೂರು ಕಾನೂನುಗಳ ಮತ್ತು ಸಂವಿಧಾನದ ಉಲ್ಲಂಘನೆ ಎಂದಿದ್ದಾರೆ. ಚುನಾವಣಾ ಕೋರ್ಟ್ ಗೆ ಕಾನೂನು ಮತ್ತು ಸಂವಿಧಾನದ ವಿಧಿಗಳನ್ನು ಮೀರಿ ಕ್ರಮ ಕೈಗೊಳ್ಳುವ ಅಧಿಕಾರವಿಲ್ಲ. ಈಗಾಗಲೇ ಎರಡು ಬಾರಿ ಚುನಾವಣೆಯನ್ನು ತಡೆ ಹಿಡಿದಿದ್ದು ಪಾರ್ಲಿಮೆಂಟಿನ ಮಂಜೂರಿ ಇಲ್ಲದೆ ಸೆಪ್ಟೆಂಬರ್ 6ಕ್ಕಿಂತ ಚುನಾವಣೆಯನ್ನು ಮುಂದೂಡುವುದು ಸಾಧ್ಯವಿಲ್ಲ. ಚುನಾಯಿತ ಪಾರ್ಲಿಮೆಂಟನ್ನು ಲೆಕ್ಕಕ್ಕೆ ಇಲ್ಲದಂತೆ ಮಾಡಿ ಕ್ಷಿಪ್ರಕ್ರಾಂತಿಯ ಕೂಸಾದ ತಮ್ಮ ಆಡಳಿತವನ್ನು ಮುಂದುವರೆಸುವ ಹುನ್ನಾರ ಇದೆಂದು ಮೊರಾಲೆಸ್ ಟ್ವೀಟ್ ಮಾಡಿದ್ದಾರೆ. ಬಲಪಂಥೀಯ ಶಕ್ತಿಗಳು ಎಂ.ಎ.ಎಸ್ ಪಕ್ಷವನ್ನು ನಿಷೇಧಿಸಿ, ಪ್ರಭುತ್ವವನ್ನು ಪೂರ್ಣವಾಗಿ ವಶಪಡಿಸಿಕೊಳ್ಳುವ ಪಿತೂರಿಯಲ್ಲಿ ತೊಡಗಿವೆ. ಕೇಂದ್ರದಲ್ಲಿ ಮಾಡಿದಂತೆ, ಮುನಿಸಿಪಲ್ ಮತ್ತು ಪ್ರಾಂತೀಯ ಹಂತದ ಚುನಾಯಿತ ಸ್ಥಳೀಯ ಸರಕಾರಗಳನ್ನೂ ಕಾನೂನುಬಾಹಿರವಾಗಿ ಉರುಳಿಸಿ ಅಧಿಕಾರ ಕಸಿದುಕೊಳ್ಳುವ ಯೋಜನೆ ಹೂಡಿವೆ, ಎಂದೂ ಮೊರಾಲೆಸ್ ಹೇಳಿದ್ದಾರೆ.

ನವೆಂಬರ್ 2019 ರ ಕ್ಷಿಪ್ರಕ್ರಾಂತಿಯಲ್ಲಿ ಅಧಿಕಾರ ವಹಿಸಿಕೊಂಡ ಜಿನೀನ್ ಸರಕಾರ ಮಾರ್ಚ್ 2020ರಿಂದ ತಮ್ಮ ಸಾಮ್ರಾಜ್ಯಶಾಹಿ-ಪರ ಮತ್ತು ನವ-ಉದಾರವಾದಿ ನೀತಿಗಳನ್ನು ಮುಂದುವರೆಸಲು ಮೂರು ಬಾರಿ ಚುನಾವಣೆಯನ್ನು ಮುಂದೂಡಿದೆ. ಈಗಿನ ಅಧ್ಯಕ್ಷರಾದ ಉಗ್ರ ಬಲಪಂಥೀಯ ಜಿನೀನ್ ಆಗಲಿ ಬಲಪಂಥೀಯ ಕೂಟದ ಅಧ್ಯಕ್ಷೀಯ ಅಭ್ಯರ್ಥಿಯಾಗಲಿ ಚುನಾವಣೆ ಗೆಲ್ಲುವ ಸಾಧ್ಯತೆ ತೀರಾ ಕಡಿಮೆ ಇರುವುದೇ ಇದಕ್ಕೆ ಕಾರಣ.

ನವೆಂಬರ್ 2019ರ ಕ್ಷಿಪ್ರಕ್ರಾಂತಿಯ ನಂತರ ಜಿನೀನ್ ಸರಕಾರ ಅನುಸರಿಸಿದ ನೀತಿಗಳು ಹಿಂದಿನ ಮೊರಾಲೆಸ್ ಸರಕಾರದ ಪ್ರಗತಿಪರ ಜನಪರ ನೀತಿಗಳಿಗೆ ತದ್ವಿರುದ್ಧವಾಗಿದ್ದು ಅದು ಜನತೆಯ ಆಕ್ರೋಶಕ್ಕೆ ಗುರಿಯಾಗಿದೆ. ಅಧಿಕಾರ ವಹಿಸಿಕೊಳ್ಳುತ್ತಿದ್ದಂತೆ ಹಿಂದಿನ ಸರಕಾರ ಆರಂಭಿಸಿ ಜನಪ್ರಿಯವಾಗಿದ್ದ ವ್ಯಾಪಕ ಆರೋಗ್ಯ ಸೇವೆಯ ಕಾರ್ಯಕ್ರಮದ ಬೆನ್ನೆಲುಬಾಗಿದ್ದ ನೂರಾರು ಕ್ಯೂಬನ್ ಡಾಕ್ಟರುಗಳನ್ನು ವಾಪಸು ಕಳಿಸಿ ಆ ಕಾರ್ಯಕ್ರಮಗಳನ್ನು ನಿಲ್ಲಿಸಲಾಯಿತು. ಅದೇ ರೀತಿ ಬಡಜನರಿಗೆ ಸಂಕಟದ ಸಮಯದಲ್ಲಿ ದೊಡ್ಡ ಪ್ರಮಾಣದಲ್ಲಿ ಪರಿಹಾರ ಒದಗಿಸುತ್ತಿದ್ದ ನೇರ ನಗದು ವರ್ಗಾವಣೆಯ ಹಲವು ಕಾರ್ಯಕ್ರಮಗಳನ್ನು ಕಡಿತ ಮಾಡಲಾಯಿತು ಅಥವಾ ನಿಲ್ಲಿಸಲಾಯಿತು. ಕೊವಿದ್ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಜಗತಿನ ಇತರ ಉಗ್ರ ಬಲಪಂಥೀಯ ಸರಕಾರಗಳ ಸೂತ್ರವನ್ನೇ ಅನುಸರಿಸಲಾಯಿತು. ಆರೋಗ್ಯ ಸಂಬಂಧಿ ತುರ್ತು ಕ್ರಮಗಳ ಅಗತ್ಯದ ನಿರಾಕರಣೆ ಮತ್ತು ಆ ಕುರಿತು ದಿವ್ಯ ನಿರ್ಲಕ್ಷ ತೋರಿದೆ. ಅದೇ ಸಮಯದಲ್ಲಿ ಕೊವಿದ್ ಪರಿಣಾಮವಾಗಿ ಜೀವನೋಪಾಯ ಮತ್ತು ಹಣಕಾಸು ನಷ್ಟಕ್ಕೆ ಯಾವುದೇ ಪರಿಹಾರ ಕೊಡಲಿಲ್ಲ. ಆದರೆ ಕರ್ಫ್ಯೂ ಕ್ವಾರಂಟೈನ್ ಮುಂತಾದ ನಿಯಮಗಳ ಉಲ್ಲಂಘನೆಗೆ 10 ವರ್ಷಗಳ ವರೆಗೆ ಜೈಲುವಾಸದಂತಹ ಕಠಿಣ ಶಿಕ್ಷೆಗಳನ್ನು ಮುತುವರ್ಜಿಯಿಂದ ಜಾರಿ ಮಾಡಲಾಯಿತು. ಇಂತಹ ಶಿಕ್ಷೆಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗಿದ್ದು ಹಲವು ದಂಗೆಗಳು ನಡೆದಿದ್ದು ಅದನ್ನು ಹತ್ತಿಕ್ಕಲು ಸಾವಿರಾರು ಜನರನ್ನು ಬಂಧಿಸಲಾಗಿದೆ. ಇವೆಲ್ಲದರಿಂದ ತೀವ್ರ ಅತೃಪ್ತಿ ಇದೆ.

ಸಂವಿಧಾನ ಸಂಬಂಧಿತ ಪಠ್ಯ ಕಡಿತ ಮಾಡಬಾರದು

ಕೊವಿಡ್-19 ರ ಕಾರಣದಿಂದ ಶೈಕ್ಷಣಿಕ ಅವಧಿಯ ಕಡಿತದ ಸಂದರ್ಭದಲ್ಲಿ ವಹಿಸಬೇಕಾದ ಕಾಳಜಿಯ ಕುರಿತು ಕರ್ನಾಟಕ ಸರಕಾರಕ್ಕೆ 'ಸಂವಿಧಾನ ಓದು ಅಭಿಯಾನ ಸಮಿತಿ' ಮನವಿಯೊಂದನ್ನು ಸಲ್ಲಿಸಿದೆ. ಕೋವಿಡ್-19 ಕಾರಣದಿಂದ ಕಡಿತಗೊಳ್ಳುವ ಶೈಕ್ಷಣಿಕ ಅವಧಿಗಾಗಿ ಪಠ್ಯವನ್ನು ಪರಿಷ್ಕರಿಸುವಾಗ ಸಂವಿಧಾನ ರಚನಾ ಕರಡು ಸಮಿತಿ ಮತ್ತು ಸಂವಿಧಾನದ ಪ್ರಮುಖ ಅಂಶಗಳ ಭಾಗವನ್ನು ಕೈಬಿಡಬಾರದು ಎಂದು ಒತ್ತಾಯಿಸಿದೆ.

ಹಲವು ಭಾಷೆ, ಜೀವನ ವಿಧಾನ, ಆಹಾರ, ಉಡುಗೆ ತೊಡುಗೆ, ಜಾತಿ, ಪಂಗಡ, ಸಂಸ್ಕೃತಿಗಳ ಸಂಗಮವಾದ ಭಾರತವು ಭಿನ್ನತೆಯಲ್ಲಿ ಏಕತೆಯನ್ನು ಸಾರಿದ ದೇಶ. ಅದಕ್ಕೆ ಕಲಶವಿಟ್ಟಂತೆ ಇರುವ ಸಂವಿಧಾನದ ಅಡಿಯಲ್ಲಿ ರೂಪಿಸಿಕೊಳ್ಳಬೇಕಾದ ಜೀವನ ವಿಧಾನವನ್ನು ಮಕ್ಕಳಿಗೆ ಅವರ ಪ್ರಾರಂಭಿಕ ಪಠ್ಯಗಳಲ್ಲಿಯೇ ಅಳವಡಿಸಬೇಕೆಂಬುದು ಭಾರತವನ್ನು ಅರ್ಥಮಾಡಿಕೊಂಡವರೆಲ್ಲರ ಅಭಿಮತ. ಆದರೆ ಕರ್ನಾಟಕ ಸರ್ಕಾರ ಕೋವಿಡ್-19 ಕಾರಣದಿಂದ ಕಡಿತಗೊಳ್ಳುವ ಶೈಕ್ಷಣಿಕ ಅವಧಿಗಾಗಿ ಪಠ್ಯವನ್ನು ಪರಿಷ್ಕರಿಸುವಾಗ ಸಂವಿಧಾನ ರಚನಾ ಕರಡು ಸಮಿತಿ ಮತ್ತು ಸಂವಿಧಾನದ ಪ್ರಮುಖ ಅಂಶಗಳ ಭಾಗವನ್ನು ಕೈಬಿಡಲಾಗಿದೆ ಎಂದು ಮತ್ತು ನಂತರ ಸರಕಾರದ ಮುಂದೆ ಅಂಥಹ ಪ್ರಸ್ತಾಪಗಳಿಲ್ಲ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಶೈಕ್ಷಣಿಕ ಅವಧಿಯ ಕಡಿತದ ಕಾರಣದಿಂದ ಪಠ್ಯವನ್ನು ಕಡಿಮೆ ಮಾಡಬೇಕೆಂದಿದ್ದರೆ ವಿಷಯ ತಜ್ಞರನ್ನೊಳಗೊಂಡೇ ಮಾಡಬೇಕು ಮತ್ತು ಅಲ್ಲಿ ಪಾರದರ್ಶಕತೆಯನ್ನು ಉಳಿಸಿಕೊಳ್ಳಬೇಕೆಂಬುದು 'ಸಂವಿಧಾನ ಓದು ಅಭಿಯಾನ ಸಮಿತಿ' ಒತ್ತಾಯಿಸಿದೆ.

ಕಳೆದ ವಿಧಾನಸಭಾ ಅಧಿವೇಶನದಲ್ಲಿ ದೇಶದ ಸಂವಿಧಾನದ ಕುರಿತೇ ವಿಶೇಷ ಚರ್ಚೆ ನಡೆಸಿ ಶಾಸಕರೆಲ್ಲರೂ ಅದರಲ್ಲಿ ಪಾಲ್ಗೊಳ್ಳುವಂತೆ ಮಾಡಿದ ಹೆಗ್ಗಳಿಕೆ ಹೊಂದಿದ ಕರ್ನಾಟಕ ರಾಜ್ಯದಲ್ಲಿ ಯಾವುದೇ ಕಾರಣಕ್ಕೂ ಪಠ್ಯದಿಂದ ಸಂವಿಧಾನದ ಪಠ್ಯವನ್ನು ತೆಗೆದುಹಾಕುವುದು ಸಮಂಜಸವಾದ ನಡೆಯಲ್ಲ. ಸರಕಾರ ಆ ಆಲೋಚನೆಯನ್ನು ಕೈಬಿಡಬೇಕಲ್ಲದೇ ಸವಿಸ್ತಾರವಾಗಿ ಸಂವಿಧಾನವನ್ನು ಬೋಧಿಸಿ ಸಂವಿಧಾನದ ಮೂಲ ತತ್ವಗಳನ್ನು ಅಳವಡಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಪ್ರೇರೇಪಿಸಬೇಕೆಂದು ಸಮಿತಿ ವಿನಂತಿಸಿದೆ.

ಇದರ ಜೊತೆಯೇ ದೇಶದ ಸ್ವಾತಂತ್ರಕ್ಕಾಗಿ ಬ್ರಿಟಿಷ್ ವಸಾಹತುಶಾಹಿಯ ವಿರುದ್ಧ ಹೋರಾಟಮಾಡಿ ಕೆಚ್ಚೆದೆಯ ಕಲಿಗಳಾಗಿ ಪ್ರಾಣ ತೆತ್ತ ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಹೈದರಾಲಿ, ಟಿಪ್ಪು ಸುಲ್ತಾನ್, ರಾಣಿ ಅಬ್ಬಕ್ಕರನ್ನು ಪರಿಚಯಿಸುವ ಪಾಠಗಳು, ಜೀಸಸ್, ಪ್ರವಾದಿಗಳ ಪಾಠವನ್ನು ಕೈ ಬಿಡಲಾಗಿದೆ ಎಂದೂ ಮಾಧ್ಯಮಗಳು ವರದಿ ಮಾಡಿವೆ. ದೇಶದ ಸ್ವಾತಂತ್ರಕ್ಕಾಗಿ ತ್ಯಾಗ ಬಲಿದಾನಗಳನ್ನು ಮಾಡಿದ, ಬ್ರಿಟಿಷ ಸಾಮ್ರಾಜ್ಯಶಾಹಿಯನ್ನು ಮಣಿಸಲು ಜೀವದ ಹಂಗು ತೊರೆದು ಸೆಣಸಿದವರ ವೀರ ಚರಿತ್ರೆ ಮಕ್ಕಳಿಗೆ ಸಿಗದಿದ್ದರೆ ದೇಶದ ನಿಜವಾದ ಚರಿತ್ರೆಯ ಅರಿವೇ ಇಲ್ಲದ ಸ್ಥಿತಿಯಲ್ಲಿ ನಮ್ಮ ಮುಂದಿನ ಜನಾಂಗ ರೂಪುಗೊಳ್ಳುತ್ತದೆ. ಹಾಗೆಯೇ ವಿವಿಧ ಧರ್ಮಗಳನ್ನು ಸಮಾನವಾಗಿ ನೋಡಬೇಕೆನ್ನುವ ನೆಲದ ಆಶಯಕ್ಕೆ ಪೂರಕವಾಗಿ ಕಲಿಯಲೇ ಬೇಕಾದ ಜೀಸಸ್, ಪ್ರವಾದಿ ಮಹಮ್ಮದ್‌ರ ಪಾಠಗಳನ್ನು ಕೈ ಬಿಡುವುದೂ ಸಮಂಜಸವಲ್ಲ. ಕರ್ನಾಟಕವನ್ನು ಸರ್ವ ಜನಾಂಗದ ಶಾಂತಿಯ ತೋಟವನ್ನಾಗಿಯೇ ಉಳಿಸಲು ಅವೆಲ್ಲವನ್ನೂ ಮೊದಲಿನಂತೆಯೇ ಪಠ್ಯಗಳಲ್ಲಿ ಇರುವಂತೆ ನೋಡಿಕೊಳ್ಳಬೇಕೆಂದು ಸಹ 'ಸಂವಿಧಾನ ಓದು ಅಭಿಯಾನ ಸಮಿತಿ' ಒತ್ತಾಯಿಸಿದೆ.

ಗ್ರಾಮ ಪಂಚಾಯತಿ ಕಛೇರಿ ಮುಂದೆ ಅನಿರ್ದಿಷ್ಟ ಧರಣಿ

27 ಜುಲೈ 2020 ರಿಂದ ಕಲಬುರಗಿ ಜಿಲ್ಲೆಯ ಜೇವರ್ಗಿ/ಯಡ್ರಾಮಿ ತಾಲೂಕಿನ ಕರಕಿಹಳ ಗ್ರಾಮ ಪಂಚಾಯತಿ ಕಛೇರಿ ಮುಂದೆ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಸಿದ್ದಣಗೌಡ ಕೂಡಿ ರವರ ನೇತೃತ್ವದಲ್ಲಿ ನಡೆಯಿತು.

ಹೋರಾಟಕ್ಕೆ ಬೆಂಬಲವಾಗಿ ಸಿಐಟಿಯು ತಾಲ್ಲೂಕು ಸಮಿತಿ ಅಧ್ಯಕ್ಷರಾದ ಕಾಮ್ರೆಡ ಗಜರಾಬಾಯಿ ಬಿರಾದಾರ, ಗ್ರಾಮ ಪಂಚಾಯತ ನೌಕರರ ಸಂಘದ ಜಿಲ್ಲಾ ಸಮಿತಿ ಕಾರ್ಯಾಧ್ಯಕ್ಷರಾದ ಬಸವರಾಜ ಪಾಟೀಲ ಹರಸೂರ, ಪ್ರಧಾನ ಕಾರ್ಯದರ್ಶಿ ಉಮಾಶಂಕರ ಕಡಣಿ, ಜೇವರ್ಗಿ ಮತ್ತು ಯಡ್ರಾಮಿ ತಾಲೂಕಿನ ಸಂಘದ ಮುಖಂಡರು ಗ್ರಾಮ ಪಂಚಾಯತಿ ನೌಕರರು ಭಾಗವಹಿಸಿದರು.



ಹೋರಾಟದ ಸ್ಥಳಕ್ಕೆ ಮಹಾಂತೇಶ ಪುರಾಣಿಕ ರವರು ಆಗಮಿಸಿ ಬೇಡಿಕೆಗಳಿಗೆ ಸ್ಪಂದಿಸಿ ಅಕ್ರಮ ನೇಮಕಾತಿ ರದ್ದು ಮಾಡುವುದಾಗಿ ತಿಳಿಸಿದರು. ಕನಿಷ್ಠ ವೇತನ 15 ದಿನದಲ್ಲಿ ಪಾವತಿಸುವದಾಗಿ ಮತ್ತು ಎಲ್ಲಾ ಬೇಡಿಕೆಗಳು ಈಡೇರಿಸುವುದಾಗಿ ಪಿಡಿಓ ಅಮರ ಎಕಲೂರೆ ರವರು ಲಿಖಿತ ರೂಪದಲ್ಲಿ ಬರೆದು ಕೊಟ್ಟ ಪ್ರಯುಕ್ತ ಹೋರಾಟ ಹಿಂಪಡೆಯುವ ತೀರ್ಮಾನ ಮಾಡಲಾಯಿತು.

ಒಂದು ವೇಳೆ ಬೇಡಿಕೆಗಳು 15 ದಿನದಲ್ಲಿ ಈಡೇರಿಸದಿದ್ದಲ್ಲಿ ತಾಲ್ಲೂಕು ಪಂಚಾಯತ ಕಛೇರಿ ಯಡ್ರಾಮಿ ಮುಂದೆ ಹೋರಾಟ ಮಾಡುವುದಾಗಿ ತೀರ್ಮಾಸಿದೆ.

JANASHAKTHI KANNADA VARA PATRIKE August 3-9, 2020 Price: Rs. 10/- Date of Publication: 31 JULY 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283



ಕಾರ್ಮಿಕ ಕಾನೂನು ತಿದ್ದುಪಡಿ ಕಾಬಿನೆಟ್ ತೀರ್ಮಾನಕ್ಕೆ : ಸಿಐಟಿಯು ವಿರೋಧ



ರಾಜ್ಯ ಸಚಿವ ಸಂಪುಟವು ಕಾರ್ಮಿಕ ಕಾನೂನುಗಳಿಗೆ ತಿದ್ದುಪಡಿ ಮಾಡಲು ಕೈಗೊಂಡಿರುವ ತೀರ್ಮಾನಕ್ಕೆ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಕರ್ನಾಟಕ ರಾಜ್ಯ ಸಮಿತಿಯು ತೀವ್ರ ವಿರೋಧ ವ್ಯಕ್ತಪಡಿಸಿದೆ. ರಾಜ್ಯದ ಕಾರ್ಮಿಕರಿಗೆ ಇದರಿಂದಾಗಿ ಅಪಾರ ಹಾನಿ ಉಂಟಾಗಲಿದೆ. ಅವರ ಹಕ್ಕುಗಳನ್ನು ರಾಜ್ಯ ಸರ್ಕಾರವು ಮೊಟಕುಗೊಳಿಸಿದಂತಾಗಲಿದೆ ಎಂದು ವಿರೋಧಿಸಿರುವ ಸಿಐಟಿಯು ಕೂಡಲೇ ತೀರ್ಮಾನ ಹಿಂಪಡೆಯಬೇಕೆಂದು ಒತ್ತಾಯಿಸಿದೆ.

ಕೈಗಾರಿಕಾ ವಿವಾದಗಳ ಕಾಯಿದೆಯಲ್ಲಿನ ಕಲಂ 25ಏ ಅಡಿಯಲ್ಲಿರುವ ನೂರಕ್ಕಿಂತ ಹೆಚ್ಚು ಕಾರ್ಮಿಕರಿದ್ದಲ್ಲಿ ಲೇ-ಆಫ್, ರಿಟ್ರೆಂಚ್ ಮಾಡಲು ಹಾಗೂ ಕಾರ್ಖಾನೆ ಮುಚ್ಚಲು ಸರ್ಕಾರದ ಅನುಮತಿಯ ಕಡ್ಡಾಯವನ್ನು ಈ ತಿದ್ದುಪಡಿಯು 300 ಕ್ಕಿಂತ ಹೆಚ್ಚು ಕಾರ್ಮಿಕರಿದ್ದಲ್ಲಿ ಮಾತ್ರ ಸರ್ಕಾರದ ಅನುಮತಿಯನ್ನು ಕಡ್ಡಾಯಗೊಳಿಸಲಿದೆ. ಇದರಿಂದಾಗಿ ರಾಜ್ಯದ ಶೇಕಡ 90 ರಷ್ಟು ಕಾರ್ಖಾನೆಗಳಿಗೆ ಲೇ-ಆಫ್, ರಿಟ್ರೆಂಚ್ ಮಾಡಲು ಅಥವ ಕಾರ್ಖಾನೆ ಮುಚ್ಚಲು ಸರ್ಕಾರದ ಅನುಮತಿ ಬೇಡವಾಗಲಿದೆ. ಪರಿಣಾಮವಾಗಿ ಮಾಲೀಕರು ಬೇಕೆಂದಾಗ ಕಾರ್ಖಾನೆ ಆರಂಭಿಸಿ ಬೇಡವಾದಾಗ ಕಾರ್ಖಾನೆ ಮುಚ್ಚಲು ಅನುವಾಗಲಿದೆ ಹಾಗೂ ನಿರುದ್ಯೋಗ ಹೆಚ್ಚಳಕ್ಕೆ ಇದು ನಾಂದಿಯಾಡಲಿದೆ ಎಂದು ಸಿಐಟಿಯು ಖಂಡಿಸಿದೆ.

ಕಾರ್ಖಾನೆಗಳ ಕಾಯಿದೆ 1948ರ ಕಲಂ 2(m) ಅಡಿಯಿರುವ ವಿದ್ಯುತ್‌ನೊಂದಿಗೆ 10 ಕಾರ್ಮಿಕರು ಮತ್ತು ವಿದ್ಯುತ್‌ರಹಿತ 20 ಕಾರ್ಮಿಕರಿರುವ ಕಾರ್ಖಾನೆಗಳ ಕಡ್ಡಾಯ ತಪಾಸಣೆಯನ್ನು ಈ ತಿದ್ದುಪಡಿಯಿಂದಾಗಿ ವಿದ್ಯುತ್‌ನೊಂದಿಗೆ 20 ಕಾರ್ಮಿಕರು ವಿದ್ಯುತ್‌ರಹಿತ 40 ಕಾರ್ಮಿಕರಿರುವ ಕಾರ್ಖಾನೆಗಳಿಗೆ ಮಾತ್ರ ಕಡ್ಡಾಯ ತಪಾಸಣೆಯನ್ನು ಸೀಮಿತಗೊಳಿಸಲಿದೆ. ಇದರಿಂದಾಗಿ ಕಾರ್ಮಿಕರ ಸುರಕ್ಷತೆ, ಸೇವಾ ಸೌಲಭ್ಯಗಳ ಕುರಿತು ಶಾಸನಾತ್ಮಕ ನಿಯಂತ್ರಣವು ಇಲ್ಲದಾಗಲಿದೆ ಪರಿಣಾಮವಾಗಿ ಶೇಕಡ 64ರಷ್ಟು ಕಾರ್ಖಾನೆಗಳು ಸರ್ಕಾರದ ನಿರೀಕ್ಷಣೆಯಿಂದ ಹೊರಗುಳಿಯಲಿವೆ ಎಂದು ಸಿಐಟಿಯು ಟೀಕಿಸಿದೆ.

ಗುತ್ತಿಗೆ ಕಾರ್ಮಿಕರ (ಕ್ರಮೀಕರಣ ಮತ್ತು ನಿಷೇಧ) ಕಾಯಿದೆ 1970ರ ಕಲಂ 1ಕ್ಕೆ ಸುಗ್ರೀವಾಜ್ಞೆಯ ತಿದ್ದುಪಡಿಯಿಂದಾಗಿ 20ಕ್ಕಿಂತ ಹೆಚ್ಚು ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಳ್ಳಲು ಸದರಿ ಇರುವ ಕಡ್ಡಾಯ ಪರವಾನಗಿಯನ್ನು 50ಕ್ಕಿಂತ ಹೆಚ್ಚು ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಳ್ಳುವ ಗುತ್ತಿಗೆದಾರರಿಗೆ ಮಾತ್ರ ಸೀಮಿತಗೊಳಿಸಲಿದೆ. ಇದು ಈಗಾಗಲೇ ಸೇವಾ ಭದ್ರತೆಯಿಲ್ಲದೆ ಸಂಕಷ್ಟದಲ್ಲಿದ್ದು ಅತಂತ್ರರಾಗಿರುವ ಗುತ್ತಿಗೆ ಕಾರ್ಮಿಕರ ಶೋಷಣೆಗೆ ಇದು ಅನುವುಗೊಳಿಸಲಿದೆ ಎಂದು ಸಿಐಟಿಯು ವಿರೋಧಿಸಿದೆ.

ಈ ತಿದ್ದುಪಡಿಗಳ ವಿರುದ್ಧ ಕಾರ್ಮಿಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದರೂ ಸಹಾ ಕೋವಿಡ್ ನೆಪದಲ್ಲಿ ರಾಜ್ಯ ಸರ್ಕಾರವು ಈ ತಿದ್ದುಪಡಿಗಳಿಗೆ ಅನುಮತಿಸಿ ತನ್ನ ಮಾಲೀಕರ ಪರ ನಿಲುಮೆಯನ್ನು ತೋರಿದ್ದು ಕಾರ್ಮಿಕ ವಿರೋಧಿ ಸುಗ್ರೀವಾಜ್ಞೆಗೆ ಅನುಮತಿಸಿದೆ ಎಂದು ಖಂಡಿಸಿರುವ ಸಿಐಟಿಯು ಈ ಕೂಡಲೇ ಇದನ್ನು ಹಿಂಪಡೆಯಬೇಕೆಂದು ಆಗ್ರಹಿಸಿದೆ.



ನೋಡಬಾರದು ಚೀಲದೊಳಗನು

ಕವನ

ವ್ಯಾನಿಟಿ ಬ್ಯಾಗಿನಲ್ಲಿ ಕೈ ಹಾಕಿ ನೋಡುವುದು
ಎಂದಿಗೂ ಉಚಿತವಲ್ಲ ಪುರುಷರೇ
ವ್ಯಾನಿಟಿ ಹೆಸರಿನಲ್ಲಿ ಏನೆಲ್ಲ ಇರಬಹುದು
ಬಯಲು ಮಾಡುವರೇ?

ಒಂದು ಕನ್ನಡಿ ಹಣಿಗೆ ಕಾಡಿಗೆ ಕರಡಿಗೆ
ಪೆನ್ನು ಪೌಡರುಕ್ಲಿಪ್ಪು ಸೆಂಟು
ಬಿಳಿ ಹಾಳೆ ಮತ್ತು ನೂಲುಂಡೆ ಇರಬಹುದು
ಗುಂಡಿ, ಸೂಜಿ ಮತ್ತುಅಡಿಕೆ ಹೋಳೂ.
ಇರಬಹುದು ಹುಣಿಸೆ ಬೀಜಗಳೂ!
ವ್ಯಾನಿಟಿ ಬ್ಯಾಗಿನಲ್ಲಿ ಬಟಾಣಿಯೇ ಇರಬೇಕೆಂದು
ಉಂಟೇ ಯಾರ ರೂಲು?
ಇದ್ದೀತು ಶುಂಠಿ ಪೆಪ್ಪರ ಮೆಂಟೂ, ಕಂಫಿಟ್ಟೂ.

ಒಣಗಿ ರೂಹುಗಳಾದ ಎಲೆ-ಹೂಗಳಿರಬಹುದು
ಇರಬಹುದು ಯಾರದೋ ಮನೆ ದಾರಿ ನಕ್ಷೆ
ಮರದ ಮುಚ್ಚಿಗೆಯಡಿಯ ಕೆಂಪು ನೆಲದತಂಪು
ತೇದಷ್ಟೂ ಸವೆಯದಾ ನೆನಪು
ಟಿಕ್ಕಿ ಎಲೆ ಪರಿಮಳ

ಮರಿಇಡುವ ನವಿಲುಗರಿ
ಕಾಪಿಟ್ಟಿರಬಹುದು ಪುಟ್ಟ ದಿನಗಳನ್ನು
ಇರಬಹುದು ಎಲ್ಲಿನದೋ ಮರಳು-ಮಣ್ಣು.

ಅರೆ ಬರೆದಿಟ್ಟ ಕವನ ತೆವಳುತ್ತಲಿರಬಹುದು
ಮುಗಿಯಲಾರದ ಕತ್ತಲಲ್ಲಿ
ಒಂದು ಬಿಸುಸುಯ್ಯಲು ಕರವಸ್ತ್ರದಲಿ ಅಡಗಿ
ಗುಸುಗುಟ್ಟುತಿರಬಹುದು ಗಂಟಲಲ್ಲೇ
ವಿಳಾಸ ಹೊತ್ತಿರುವ ಖಾಲಿ ಲಕೋಟೆಯಲಿ
ಕೆಂಪು ಸೂರ್ಯನ ಚಿತ್ರ ಮಾತ್ರವಿರಬಹುದು
ಬಂದ ಪತ್ರದ ಉಸಿರು ಒಗಟಾಗಿ ಇರಬಹುದು
ಚಂದದಕ್ಷರ ಬಂಧದಲಿ
ಚಂದದಕ್ಷರ ಸುತ್ತ ನತ್ತು ಮುತ್ತಿನಚಿತ್ತು
ಉತ್ಕಂಠರಾಗದ ಮತ್ತು ಇರಬಹುದು
ಕರಿಮೀಸೆಯಡಿಯಲ್ಲಿ ಮಿರಿಮಿಂಚು ನಗೆಯಲ್ಲಿ
ಹೆಸರಿಲ್ಲದ ಫೋಟೋ ಕೂಡ ಇರಬಹುದು!

ಬಾಲ್ಯಯೌವನ ವೃದ್ಧಾಪ್ಯ ನೆರಳುಗಳು
ಸೇರಿಕೊಂಡಿರಬಹುದು ಆ ಕೋಶದಲ್ಲಿ
ಗಾರ್ಹಸ್ಥ್ಯ ವೇಶ್ಯಾ ಅಭಿಸಾರ ವಾಸನೆಗಳು
ಧರ್ಮ ಲಕ್ಷಣ ಅವಸ್ಥಾಂತರ ವೇಷದಲ್ಲಿ
ಒಂದಕೊಂದಕೆ ಅರ್ಥಾಂತರವಿಲ್ಲದೆಯೂ
ಇಲ್ಲವೇ ಹಲವು ಜೊತೆಗಳು?
ಹಾಗೆಯೇ ಈ ಚೀಲದೊಳಗಿನ ಲೋಕಗಳು!

ಚೀಲದೊಳಗಿನ ಲೋಕ ಮತ್ತು ಮನಸಿನ ಲೋಕ
ಒಂದೇ ಎಂದೀಗ ತೂಗಿ ನೋಡುವಿರೇನು?
ಬೆಪ್ಪುಕಾ ಪುರುಷರೇ
ವ್ಯರ್ಥ ಕೈ ನೋವೇಕೆ?
ತೂಗಲಾರಿರಿ ತಪ್ಪು ಸಮೀಕರಣವನು.

ಮನಸಿನೊಳಗಡೆ ಎಂದೂ
ಇಣುಕಲಾರಿರಿ ನೀವು. ಹುಡುಕಿ
ತೆಗೆಯಲಾರಿರಿ ಏನನೂ
ಇಣುಕಲಾದರೂ ಹಾಗೆ ಮಾಡಲಾಗದು ನೀವು
ಚೀಲದೊಳಗಿನ ತಿರುಳನು
ಹುಡುಕಿತೆಗೆಯಲಾದರೂ ಹಾಗೆ
ಮಾಡಲಾಗದು ನೀವು
ನೋಡಬಾರದು ಚೀಲದೊಳಗನು.

– ವೈದೇಹಿ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**